**ಭಾರತ ಸರ್ಕಾರ**

# ಬಜೆಟ್ 2021-2022

**ಶ್ರೀಮತಿ ನಿರ್ಮಲಾ ಸೀತಾರಾಮನ್**

**ಹಣಕಾಸು ಸಚಿವರ**

**ಭಾಷಣ**

***ಫೆಬ್ರವರಿ 1 , 2021***

**ಪಠ್ಯ**

**ಭಾಗ – ಎ**

**ಪುಟ ಸಂಖ್ಯೆ**


- **ಪೀಠಿಕೆ** **1**
- **ಆರೋಗ್ಯ ಮತ್ತು ಯೋಗಕ್ಷೇಮ** **5**
- **ಭೌತಿಕ ಮತ್ತು ಹಣಕಾಸು ಸಂಪನ್ಮೂಲ ಹಾಗೂ ಮೂಲಸೌಕರ್ಯ** **7**
- **ಆಶೋತ್ತರ ಭಾರತವನ್ನು ಒಳಗೊಂಡ ಅಭಿವೃದ್ಧಿ ಸಮಗ್ರ** **19**
- **ಮಾನವ ಸಂಪನ್ಮೂಲ ಪುನರುಜ್ಜೀವನ** **22**
- **ಆವಿಷ್ಕಾರ ಮತ್ತು ಸಂಶೋಧನೆ ಹಾಗೂ ಅಭಿವೃದ್ಧಿ** **23**
- **ಕನಿಷ್ಠ ಸರ್ಕಾರ,ಗರಿಷ್ಠ ಆಡಳಿತ** **24**
- **ವಿತ್ತೀಯ ಸ್ಥಿತಿಗತಿ** **25**


**ಭಾಗ – ಬಿ**


**ನೇರ ತೆರಿಗೆ ಪ್ರಸ್ತಾವಗಳು** **28**

- ಹಿರಿಯ ನಾಗರಿಕರಿಗೆ ಪರಿಹಾರ
- ಆದಾಯ ತೆರಿಗೆ ಪ್ರಕ್ರಿಯೆಗಳ ಅವಧಿ ಇಳಿಕೆ
- ವ್ಯಾಜ್ಯ ಇತ್ಯರ್ಥ ಸಮಿತಿ ಸ್ಥಾಪನೆ
- ಮುಖಾಮುಖಿ ರಹಿತ ಆದಾಯ ತೆರಿಗೆ ಮೇಲ್ಮನವಿ
- ಎನ್‌ಆರ್ ಐಗಳಿಗೆ ಕೆಲವು ನಿಯಮಗಳಿಂದ ವಿನಾಯಿತಿ
- ಲೆಕ್ಕ ಪರಿಶೋಧನೆಯಿಂದ ವಿನಾಯಿತಿ
- ಲಾಭಾಂಶ ಪಡೆಯುವುದು ನಿರಾಳ
- ಮೂಲಸೌಕರ್ಯ ವಲಯಕ್ಕೆ ವಿದೇಶಿ ಹೂಡಿಕೆ ಆಕರ್ಷಣೆ
- ಕೈಗೆಟಕುವ ದರದಲ್ಲಿ ವಸತಿ/ಬಾಡಿಗೆ ವಸತಿ
- ಐಎಫ್‌ಎಸ್ ಸಿಗೆ ತೆರಿಗೆ ಪ್ರೋತ್ಸಾಹಕ ಕ್ರಮಗಳು
- ಅವಧಿಗೆ ಮುನ್ನವೇ ರಿಟರ್ನ್ಸ್ ಗಳನ್ನು ಸಲ್ಲಿಸುವುದು
- ಸಣ್ಣ ಟ್ರಸ್ಟ್ ಗಳಿಗೆ ಪರಿಹಾರ
- ಕಾರ್ಮಿಕರ ಕಲ್ಯಾಣ

**ಪರೋಕ್ಷ ತೆರಿಗೆ ಪ್ರಸ್ತಾವಗಳು** **33**

- ಜಿ ಎಸ್ ಟಿ
- ಸೀಮಾ ಸುಂಕ ಏಕರೂಪಗೊಳಿಸುವುದು
- ಎಲೆಕ್ಟ್ರಾನಿಕ್ಸ್ ಮತ್ತು ಮೊಬೈಲ್ ಫೋನ್ ಉದ್ಯಮ
- ಕಬ್ಬಿಣ ಮತ್ತು ಉಕ್ಕು
- ಜವಳಿ
- ರಾಸಾಯನಿಕ
- ಚಿನ್ನ ಮತ್ತು ಬೆಳ್ಳಿ
- ನವೀಕರಿಸಬಹುದಾದ ಇಂಧನ
- ಕ್ಯಾಪಿಟಲ್ ಎಕ್ವ್ಯೂಪ್ ಮೆಂಟ್
- ಎಂಎಸ್ಎಂಇ ಉತ್ಪನ್ನಗಳು
- ಕೃಷಿ ಉತ್ಪನ್ನಗಳು

**ಅಡಕಗಳು**

**ಭಾಷಣದ ಭಾಗ – ಎ ಗೆ ಸಂಬಂಧಿಸಿದ ಅಡಕಗಳು** **37**

- ಆರೋಗ್ಯ ಮತ್ತು ಯೋಗಕ್ಷೇಮ – ವೆಚ್ಚ
- ಮಹತ್ವಾಕಾಂಕ್ಷಿ ಯೋಜನೆಗಳು: ರಸ್ತೆ ಮತ್ತು ಹೆದ್ದಾರಿ
- ಬಂಡವಾಳ ವಾಪಸಾತಿ/ ಬಂಡವಾಳ ವಾಪಸಾತಿ ಕಾರ್ಯತಂತ್ರ ನೀತಿ ಪ್ರಮುಖಾಂಶಗಳು
- ಕೃಷಿ ಉತ್ಪನ್ನಗಳ ಖರೀದಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್ ಪಿ)
- ಎನ್ಇಪಿ ಭಾಗವಾಗಿ ಶಿಕ್ಷಣದ ಉಪಕ್ರಮಗಳು
- ಬಜೆಟ್ ಯೇತರ ಸಂಪನ್ಮೂಲಗಳ ಕುರಿತ ಹೇಳಿಕೆ

  (ಸರ್ಕಾರ, ಪೂರ್ಣ ಸೇವಾ ಬಾಂಡ್ ಗಳು, ಎನ್ಎಸ್ಎಸ್ಎಫ್ ಸಾಲ ಮತ್ತು ಇತರೆ ಸಂಪನ್ಮೂಲಗಳು)

**ಭಾಷಣದ ಭಾಗ-ಬಿ ಗೆ ಸಂಬಂಧಿಸಿದ ಅಡಕಗಳು** **45**

**ಪ್ರತ್ಯಕ್ಷ ತೆರಿಗೆ**

**ಪರೋಕ್ಷ ತೆರಿಗೆ**

**ಬಜೆಟ್ 2021-2022**

**ಭಾಷಣ**

**ಶ್ರೀಮತಿ ನಿರ್ಮಲಾ ಸೀತಾರಾಮನ್**

**ಹಣಕಾಸು ಸಚಿವರು**

***ಫೆಬ್ರವರಿ 1 , 2021***

ಗೌರವಾನ್ವಿತ ಸ್ಪೀಕರ್,

ನಾನು, 2021-22ನೇ ಹಣಕಾಸು ವರ್ಷದ ಬಜೆಟ್ ಮಂಡಿಸುತ್ತಿದ್ದೇನೆ.

**ಪೀಠಿಕೆ**

1. ಗೌರವಾನ್ವಿತ ಸ್ಪೀಕರ್ ಈ ಬಾರಿಯ ಬಜೆಟ್ ಸಿದ್ಧತೆಗಳನ್ನು ಹಿಂದೆಂದೂ ಇಲ್ಲದಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ನಡೆಸಲಾಗಿದೆ. ನಾವು ದೇಶಗಳಿಗೆ ಅಥವಾ ದೇಶಗಳೊಳಗೆ ವಿಪತ್ತುಗಳಿಂದ ಆಗಿರುವ ಪರಿಣಾಮಗಳ ಬಗ್ಗೆ ಕೇಳಿದ್ದೇವೆ. ಆದರೆ ನಾವು ಕೋವಿಡ್-19ನಿಂದಾಗಿ 2020ರಲ್ಲಿ ಅನುಭವಿಸಿದ ವೈರುಧ್ಯಗಳು ತುಂಬಾ ಭಿನ್ನವಾದುದು.
2. ನಾನು 2020-21ನೇ ಸಾಲಿನ ಬಜೆಟ್ ಮಂಡಿಸಿದಾಗ ನಾವು ಜಾಗತಿಕ ಆರ್ಥಿಕತೆಯನ್ನು ಊಹಿಸಿ ಕೊಂಡಿರಲಿಲ್ಲ. ಆ ವೇಳೆಗಾಗಲೇ ಆರ್ಥಿಕ ಹಿಂಜರಿತ ಉಂಟಾಗುತ್ತಿತ್ತು ಮತ್ತು ಅದು ಹಿಂದೆಂದೂ ಕಂಡರಿಯದಂತಹ ಸ್ಥಿತಿಗೆ ದೂಡಿತು.
3. ನಾವು ಇತರೆ ದೇಶಗಳಲ್ಲಿದ್ದ ನಮ್ಮ ಜನರು ಅಷ್ಟು ದೊಡ್ಡ ಪ್ರಮಾಣದಲ್ಲಿ ನಷ್ಟಕ್ಕೆ ತುತ್ತಾಗುತ್ತಾರೆ ಎಂಬುದನ್ನು ನಾವು ಊಹಿಸಿರಲಿಲ್ಲ. ಆರೋಗ್ಯ ಬಿಕ್ಕಟ್ಟಿನಿಂದಾಗಿ ಜನರು ತಮ್ಮ ಬಂಧುಗಳನ್ನು ಕಳೆದುಕೊಂಡು ತೀವ್ರ ಸಂಕಷ್ಟ ಅನುಭವಿಸಿದರು.
4. ಲಾಕ್ ಡೌನ್ ಘೋಷಣೆಯಿಂದಾಗುವ ಅಪಾಯಗಳು ತುಂಬಾ ಗಂಭೀರವಾದುದಾಗಿದ್ದವು. ಮೂರು ವಾರಗಳ ಸಂಪೂರ್ಣ ಲಾಕ್ ಡೌನ್ ಘೋಷಿಸಿದ 48 ಗಂಟೆಗಳೊಳಗೆ ಪ್ರಧಾನಮಂತ್ರಿ ಅವರು, 2.76 ಲಕ್ಷ ಕೋಟಿ ರೂ. ಮೊತ್ತದ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆಯನ್ನು ಘೋಷಿಸಿದರು. ಅದರಡಿ ಸುಮಾರು 800 ಮಿಲಿಯನ್ ಜನರಿಗೆ ಉಚಿತ ಆಹಾರ ಧಾನ್ಯ, 80 ಮಿಲಿಯನ್ ಕುಟುಂಬಗಳಿಗೆ ಹಲವು ತಿಂಗಳ ಕಾಲ ಉಚಿತ ಅಡುಗೆ ಅನಿಲ ಮತ್ತು ಸುಮಾರು 400 ಮಿಲಿಯನ್ ರೈತರು, ಮಹಿಳೆಯರು, ವೃದ್ಧರು, ಬಡವರು ಮತ್ತು ಅಗತ್ಯವಿರುವವರಿಗೆ ನೇರ ನಗದು ನೆರವು ನೀಡಲಾಯಿತು.
5. ಬಹುದೊಡ್ಡ ಸಂಖ್ಯೆಯ ಜನರು ಮನೆಯಲ್ಲೇ ಉಳಿದರು. ಹಾಲು, ತರಕಾರಿ, ಹಣ್ಣು ಪೂರೈಕೆ, ಆರೋಗ್ಯ ಮತ್ತು ನೈರ್ಮಲ್ಯ ಕಾರ್ಯಕರ್ತರು, ಟ್ರಕ್ ಚಾಲಕರು, ರೈಲ್ವೆ ಮತ್ತು ಸಾರ್ವಜನಿಕ ಸಾರಿಗೆ ಸಿಬ್ಬಂದಿ, ಬ್ಯಾಂಕ್ ಉದ್ಯೋಗಿಗಳು, ವಿದ್ಯುತ್ ಕಾರ್ಮಿಕರು, ನಮ್ಮ ಅನ್ನದಾತರು, ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ, ಮತ್ತು ಸಶಸ್ತ್ರ ಪಡೆಗಳು ಇವರೆಲ್ಲಾ ತಮ್ಮ ಕೆಲಸಗಳಿಗೆ ಎಂದಿನಂತೆ

ತೆರಳಬೇಕಾಗಿತ್ತು. ಅವರೆಲ್ಲಾ ಸೋಂಕು ಎಲ್ಲಿ ತಗುಲುತ್ತದೋ ಎಂಬ ಹೆಚ್ಚುವರಿ ಆತಂಕದೊಂದಿಗೆ ಜೀವನ ನಡೆಸುತ್ತಿದ್ದರು. ನಾವು ಇದನ್ನು ಮನಗಂಡು, ಘನ ಸದನದಲ್ಲಿ ಇರುವ ಪ್ರತಿಯೊಬ್ಬರ ಪರವಾಗಿಯೂ ಮಾತನಾಡುತ್ತಾ ಎಲ್ಲರಿಗೂ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಲು ಬಯಸುತ್ತೇನೆ. ಆ ಸಂಕಷ್ಟದ ತಿಂಗಳುಗಳಲ್ಲಿ ರಾಷ್ಟ್ರಕ್ಕೆ ಮೂಲ ಅಗತ್ಯತೆಗಳನ್ನು ಒದಗಿಸುವಲ್ಲಿ ಅವರು ಕರ್ತವ್ಯ ನಿರ್ವಹಿಸಿ ಕಾರ್ಯೋನ್ಮುಖರಾಗಿದ್ದು, ಅನನ್ಯ.

6. ಸ್ಪೀಕರ್ ಸಾರ್, ಸಾರ್ವಜನಿಕ ಒಳಿತಿಗಾಗಿ ಗೌರವಾನ್ವಿತ ಲೋಕಸಭಾ ಸದಸ್ಯರು ಮತ್ತು ವಿಧಾನಸಭಾ ಶಾಸಕರೂ ಕೂಡ ತಮ್ಮ ವೇತನವನ್ನು ಕೊಡುಗೆಯಾಗಿ ನೀಡಿದರು.

7. 2020ರ ಮೇ ತಿಂಗಳಲ್ಲಿ ಸರ್ಕಾರ ಆತ್ಮನಿರ್ಭರ ಭಾರತ ಪ್ಯಾಕೇಜ್ (ಎ ಎನ್ ಬಿ 1.0) ಅನ್ನು ಘೋಷಿಸಿತು. ಆರ್ಥಿಕ ಪುನಶ್ಚೇತನ ಕಾಯ್ದುಕೊಳ್ಳಲು ವರ್ಷವಿಡೀ ನಾವು ಮತ್ತೆ ಎರಡು ಆತ್ಮನಿರ್ಭರ ಪ್ಯಾಕೇಜ್ ಗಳನ್ನು (ಎ ಎನ್ ಬಿ 2.0 ಮತ್ತು ಎ ಎನ್ ಬಿ 3.0) ಜಾರಿಗೊಳಿಸಿದೆವು. ಎಲ್ಲಾ ಆತ್ಮನಿರ್ಭರ ಭಾರತ ಪ್ಯಾಕೇಜ್ ಗಳನ್ನು ಒಳಗೊಂಡ ವಿತ್ತೀಯ ಹೊಣೆಗಾರಿಕೆ ಆರ್ ಬಿ ಐ ಅಂದಾಜಿಸಿದಂತೆ ಸುಮಾರು 27.1 ಲಕ್ಷ ಕೋಟಿ ರೂ.ಗಳು. ಅದು ಜಿಡಿಪಿಯ ಶೇ.13ಕ್ಕಿಂತ ಹೆಚ್ಚಾಗುತ್ತದೆ.

8. ಒಂದು ಸರ್ಕಾರವಾಗಿ ಪರಿಸ್ಥಿತಿಯ ಬಗ್ಗೆ ಕಾದು ನೋಡುತ್ತಾ ನಾವು ಕ್ಷಿಪ್ರವಾಗಿ ಹಾಗೂ ಸಕ್ರಿಯವಾಗಿ ಸ್ಪಂದಿಸಿದೆವು. ಪ್ರಧಾನಮಂತ್ರಿಯವರ ನೇತೃತ್ವದಲ್ಲಿ ಸರ್ಕಾರ, ಸಮಾಜದ ಅತ್ಯಂತ ದುರ್ಬಲ ವರ್ಗದವರಾದ ಬಡವರಲ್ಲಿ ಅತಿ ಕಡು ಬಡವರು, ದಲಿತರು, ಬುಡಕಟ್ಟು ಜನಾಂಗ, ವೃದ್ಧರು, ವಲಸೆ ಕಾರ್ಮಿಕರು ಮತ್ತು ನಮ್ಮ ಮಕ್ಕಳಿಗೆ ಸಂಪನ್ಮೂಲಗಳನ್ನು ಒದಗಿಸಿಕೊಡಲು ಮುಂದಾದೆವು. ಪಿಎಂಜಿಕೆವೈ ಅಡಿಯಲ್ಲಿ ಮೂರು ಎ ಎನ್ ಬಿ ಪ್ಯಾಕೇಜ್ ಗಳು ಮತ್ತು ಘೋಷಣೆಗಳಿಂದಾಗಿ ಅವುಗಳನ್ನೇ ನಂತರ ಐದು ಮಿನಿ ಬಜೆಟ್ ಗಳನ್ನಾಗಿ ವಿಭಜಿಸಲಾಯಿತು.

9. ಆತ್ಮನಿರ್ಭರ ಭಾರತ ಪ್ಯಾಕೇಜ್ ನಾವು ಸಾಂಸ್ಥಿಕ ಸುಧಾರಣೆಗಳಿಗೆ ಕೈಗೊಂಡಿದ್ದಕ್ಕೆ ವೇಗ ನೀಡಿದವು. ಎಂಎಸ್ಎಂಇಗಳ ಮರು ವ್ಯಾಖ್ಯಾನ, ಗಣಿ ವಲಯದ ವಾಣಿಜ್ಯೀಕರಣ, ಕೃಷಿ ಮತ್ತು ಕಾರ್ಮಿಕ ಸುಧಾರಣೆಗಳು, ಸಾರ್ವಜನಿಕ ವಲಯದ ಉದ್ಯಮಗಳ ಖಾಸಗೀಕರಣ, ಒಂದು ರಾಷ್ಟ್ರ ಒಂದು ಪಡಿತರ ಚೀಟಿ ಮತ್ತು ಉತ್ಪಾದನೆ ಆಧಾರಿತ ಪ್ರೋತ್ಸಾಹಕ ಯೋಜನೆಗಳು ಇವು ಈ ಅವಧಿಯಲ್ಲಿ ಕೈಗೊಂಡ ಗಮನಾರ್ಹ ಸುಧಾರಣೆಗಳಾಗಿವೆ. ಮುಖಾಮುಖಿ ರಹಿತ ಆದಾಯ ತೆರಿಗೆ ಮೌಲ್ಯಮಾಪನ, ಡಿಬಿಟಿ ಮತ್ತು ಹಣಕಾಸು ಸೇರ್ಪಡೆಗೆ ಮತ್ತಿತರ ಅಂಶಗಳು ಸೇರಿವೆ.

10. ಇಂದು ಭಾರತದಲ್ಲಿ ಎರಡು ಲಸಿಕೆಗಳು ಲಭ್ಯವಿವೆ ಮತ್ತು ಕೋವಿಡ್-19 ವಿರುದ್ಧ ನಾವು ನಮ್ಮ ನಾಗರಿಕರನ್ನು ವೈದ್ಯಕೀಯವಾಗಿ ಸುರಕ್ಷಿತಗೊಳಿಸುವ ಜೊತೆಗೆ 100ಕ್ಕೂ ಅಧಿಕ ರಾಷ್ಟ್ರಗಳಿಗೆ ಲಸಿಕೆ ಒದಗಿಸುತ್ತಿದ್ದೇವೆ. ಇನ್ನೂ ಎರಡು ಅಥವಾ ಅದಕ್ಕಿಂತ ಹೆಚ್ಚು ಲಸಿಕೆಗಳು ಸದ್ಯದಲ್ಲೇ ಲಭ್ಯವಾಗುವ ನಿರೀಕ್ಷೆ ಇದ್ದು, ಅದರಿಂದ ಇನ್ನೂ ಹೆಚ್ಚಿನ ಆರಾಮ ದೊರೆಯುತ್ತದೆ.

11. ಗೌರವಾನ್ವಿತ ಪ್ರಧಾನಮಂತ್ರಿ ನಮ್ಮ ವಿಜ್ಞಾನಿಗಳ ಕಾರ್ಯದ ಬಗ್ಗೆ ಶ್ಲಾಘಿಸಿ, ಅವರಿಗೆ ಧನ್ಯವಾದಗಳನ್ನು ಹೇಳಿ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ನಮ್ಮ ವಿಜ್ಞಾನಿಗಳ ಸಾಮರ್ಥ್ಯ ಮತ್ತು ಅವರ ನಿರಂತರ ಪ್ರಯತ್ನಗಳಿಗೆ ನಾವು ಸದಾ ಕೃತಜ್ಞರಾಗಿರುತ್ತೇವೆ.

12. ಇದೆಲ್ಲದರ ನಡುವೆ ಕೋವಿಡ್-19 ವಿರುದ್ಧದ ನಮ್ಮ ಸಮರ 2021ರಲ್ಲೂ ಮುಂದುವರಿಯುತ್ತದೆ ಎಂಬುದನ್ನು ನಾವು ಮತ್ತೆ ಮತ್ತೆ ನೆನಪು ಮಾಡಿಕೊಳ್ಳಬೇಕಿದೆ.

13. ಎರಡು ಜಾಗತಿಕ ಮಹಾ ಯುದ್ಧದ ನಂತರ ಇದೀಗ ಕೋವಿಡ್ ನಂತರದ ಜಗತ್ತಿನಲ್ಲಿ ರಾಜಕೀಯ, ಆರ್ಥಿಕ ಮತ್ತು ಕಾರ್ಯತಾಂತ್ರಿಕ ಸಂಬಂಧಗಳ ಬಲವರ್ಧನೆ ಕುರುಹು ಕಂಡುಬರುತ್ತಿದೆ. ಇತಿಹಾಸದಲ್ಲಿ ಈ ಕ್ಷಣ ಹೊಸ ಯುಗ ಉದಯಕ್ಕೆ ಕಾರಣವಾಗಿದೆ. ಒಂದು, ಭಾರತ ಭರವಸೆ ಮತ್ತು ವಿಶ್ವಾಸದ ನೈಜ ತಾಣವಾಗಿ ರೂಪುಗೊಳ್ಳುತ್ತಿರುವುದು.

**"ನಂಬಿಕೆ ಎನ್ನುವುದು ಹಕ್ಕಿಯಂತೆ, ಅದು ಇನ್ನೂ ಆಗಸದಲ್ಲಿ ಕತ್ತಲೆಯಿದ್ದಾಗಲೇ ಬೆಳಕು ಮತ್ತು ಅದರ ಕುರುಹುಗಳನ್ನು ಅನುಭವಿಸುತ್ತದೆ"**

- ರವೀಂದ್ರನಾಥ ಠ್ಯಾಗೂರ್

(ಫೈರ್ ಫ್ಲೈಸ್ - ಎ ಕಲಕ್ಷನ್ ಆಫ್ ಅಫೋರಿಸಮ್ಸ್)

14. ಇದೇ ಸ್ಫೂರ್ತಿಯೊಂದಿಗೆ ನಾವು, ಕ್ರಿಕೆಟ್ ಪ್ರೀತಿಸುವ ರಾಷ್ಟ್ರವಾಗಿ ಭಾರತ ತಂಡ ಆಸ್ಟ್ರೇಲಿಯಾದಲ್ಲಿ ಅತ್ಯದ್ಭುತ ಯಶಸ್ಸು ಗಳಿಸಿರುವುದರಿಂದ ಆದ ತುಂಬಾ ಆನಂದವನ್ನು ಸ್ಮರಿಸಿಕೊಳ್ಳಲಾಗುತ್ತಿದೆ. ಇದು ನಾವು ಜನರಾಗಿ ವಿಶೇಷವಾಗಿ ಯುವಕರಾಗಿ ಎಲ್ಲ ಗುಣಗಳು ನೆನಪಾಗುತ್ತವೆ. ಭಾರೀ ಭರವಸೆ ಮತ್ತು ಅದುಮಿಡಲಾಗದಂತಹ ಹಸಿವು, ಈ ಸಾಧನೆ ಮತ್ತು ಯಶಸ್ಸಿಗೆ ಮುನ್ನುಡಿಯಾಗಿದೆ.

15. ಇಂದು ಅಂಕಿ-ಅಂಶಗಳ ಪ್ರಕಾರ ಭಾರತದಲ್ಲಿ ಅತಿ ಕಡಿಮೆ ಸಾವಿನ ಪ್ರಮಾಣ ಪ್ರತಿ ಮಿಲಿಯನ್ ಜನಸಂಖ್ಯೆಗೆ 112 ಇದೆ ಮತ್ತು ಸಕ್ರಿಯ ಪ್ರಕರಣಗಳ ಸಂಖ್ಯೆಯೂ ಕೂಡ ಕಡಿಮೆ ಇದ್ದು, ಪ್ರತಿ ಮಿಲಿಯನ್ ಜನಸಂಖ್ಯೆಗೆ 130 ಇದೆ. ಇದರಿಂದಾಗಿ ನಾವು ಆರ್ಥಿಕತೆಯಲ್ಲಿ ಪುನಶ್ಚೇತನಕ್ಕೆ ಭದ್ರ ಬುನಾದಿ ಬಿದ್ದಿರುವುದನ್ನು ಕಾಣತ್ತಿದ್ದೇವೆ.

16. ಈ ಬಜೆಟ್ ಹೊಸ ದಶಕದ ಮೊದಲ ಬಜೆಟ್ ಮತ್ತು ಈ ಬಜೆಟ್ ಡಿಜಿಟಲ್ ಬಜೆಟ್ ಕೂಡ ಆಗಿದ್ದು, ನಿಮ್ಮೆಲ್ಲರ ಬೆಂಬಲದೊಂದಿಗೆ ಇದು ಸಾಧ್ಯವಾಗಿದೆ.

17. ಈ ವರೆಗೆ ಮೂರು ಬಾರಿ ಮಾತ್ರ ಬಜೆಟ್ ನಂತರ ಆರ್ಥಿಕತೆಯಲ್ಲಿ ಕುಗ್ಗಿದೆ. ಅಂತಹ ಸಂದರ್ಭಗಳಲೆಲ್ಲಾ ಭಾರತಕ್ಕೆ ಸಂಕೋಚದ ಸಂದರ್ಭಗಳಾಗಿವೆ. ಈ ಬಾರಿ ನಮ್ಮ ಆರ್ಥಿಕತೆಯಲ್ಲಿ ಬಿಕ್ಕಟ್ಟು ಉಂಟಾಗಿರುವುದು ಇತರೆ ಹಲವು ರಾಷ್ಟ್ರಗಳಲ್ಲಿ ಇರುವಂತೆ ಜಾಗತಿಕ ಸಾಂಕ್ರಾಮಿಕದ ಕಾರಣಕ್ಕಾಗಿ.

18. ಇದೆಲ್ಲದರ ನಡುವೆ ನಮ್ಮ ಸರ್ಕಾರ ಅತ್ಯಂತ ತ್ವರಿತವಾಗಿ ಆರ್ಥಿಕತೆ ಪುನಶ್ಚೇತನಕ್ಕೆ ನೆರವು ನೀಡಲು ಮತ್ತು ಪೂರಕ ಕ್ರಮಗಳನ್ನು ಕೈಗೊಳ್ಳಲು ಸಂಪೂರ್ಣ ಸಜ್ಜಾಗಿದೆ ಎಂದು ಅತ್ಯಂತ ವಿಶ್ವಾಸದಿಂದ ಹೇಳಲು ಬಯಸುತ್ತೇನೆ. ಈ ಬಜೆಟ್, ನಮ್ಮ ಆರ್ಥಿಕತೆ ಪುಟಿದೇಳಲು ಮತ್ತು ಸುಸ್ಥಿರ ಪ್ರಗತಿಗೆ ಅಗತ್ಯ ವೇಗ ಕಾಯ್ದುಕೊಳ್ಳಲು ಎಲ್ಲ ಅವಕಾಶಗಳನ್ನು ಒದಗಿಸಿಕೊಡಲಿದೆ.

19. 2020-21 ನಮ್ಮ ಇತಿಹಾಸದಲ್ಲಿ ಹಲವು ಪ್ರಮುಖ ಮೈಲಿಗಲ್ಲುಗಳ ವರ್ಷವಾಗಿದೆ. ನಾನು ಇಲ್ಲಿ ಅಂತಹ ಕೆಲವನ್ನು ಉಲ್ಲೇಖಿಸ ಬಯಸುತ್ತೇನೆ. ಅವುಗಳೆಂದರೆ ಭಾರತ ಸ್ವಾತಂತ್ರ್ಯಗಳಿಸಿ 75 ವರ್ಷ ಪೂರ್ಣಗೊಳ್ಳಲಿರುವುದು; ಭಾರತ, ಗೋವಾವನ್ನು ಸ್ವಾಧೀನಪಡಿಸಿಕೊಂಡು 60 ವರ್ಷ ಪೂರ್ಣಗೊಳ್ಳಲಿರುವುದು; ಭಾರತ-ಪಾಕಿಸ್ತಾನದ 1971ರ ಯುದ್ಧಕ್ಕೆ 50 ವರ್ಷ, ಸ್ವತಂತ್ರ ಭಾರತದ 8ನೇ ಜನಗಣತಿ ವರ್ಷ, ಬ್ರಿಕ್ಸ್ ಅಧ್ಯಕ್ಷತೆ ವಹಿಸುವ ಸರದಿ ಭಾರತದ್ದಾಗಿರುವುದು, ಚಂದ್ರಯಾನ – 3 ಮಿಷನ್ ಕೈಗೊಳ್ಳಲಿರುವ ವರ್ಷ ಮತ್ತು ಹರಿದ್ವಾರ ಮಹಾಕುಂಭ ನಡೆಯಲಿರುವ ವರ್ಷ.

20. ಗೌರವಾನ್ವಿತ ಸ್ಪೀಕರ್, ಬಜೆಟ್ ನ ಭಾಗ – ಎ ಓದುವ ಮುನ್ನ ನಾನು ದೇಶದ ಸವಾಲುಗಳನ್ನು ಹೇಗೆ ಎದುರಿಸಿದೆ ಎಂಬುದನ್ನು ಉಲ್ಲೇಖಿಸಬಯಸುತ್ತೇನೆ. ಬಿಕ್ಕಟ್ಟಿನ ಸಮಯಲ್ಲಿ ಜನ ಹೇಗೆ ಒಗ್ಗೂಡಿದರು ಎಂಬುದನ್ನು ತಿಳಿಸಲು ಬಯಸುತ್ತೇನೆ. ಇದು ಹಲವು ವಿಧದಲ್ಲಿ ನಮ್ಮನ್ನು ಘಾಸಿಗೊಳಿಸಿದೆ. ಪ್ರತಿಯೊಬ್ಬ ಪ್ರಜೆಗೂ ನಾನು ಶಿರಭಾಗಿ ಗೌರವಿಸುತ್ತೇನೆ. ಅವರು ತೋರಿದ ಸಂಯಮಕ್ಕೆ ಮತ್ತು ಕಠಿಣ ವರ್ಷದಲ್ಲಿ ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿ ಕೊಂಡಿದ್ದಕ್ಕೆ.

## ಭಾಗ – ಎ

21. ಭಾಗ – ಎ ನಲ್ಲಿ ನಾನು ಆತ್ಮನಿರ್ಭರ ಭಾರತದ ದೂರದೃಷ್ಟಿಯನ್ನು ಹಂಚಿಕೊಳ್ಳಲು ಬಯಸುತ್ತೇನೆ.

22. ಆತ್ಮನಿರ್ಭರ ಭಾರತ ಹೊಸ ಚಿಂತನೆಯೇನಲ್ಲ. ಪ್ರಾಚೀನ ಭಾರತ ಬಹುತೇಕ ಸ್ವಾವಲಂಬಿಯಾಗಿತ್ತು ಮತ್ತು ಜಗತ್ತಿನ ಸಮಾನ ವಾಣಿಜ್ಯ ಕೇಂದ್ರವಾಗಿತ್ತು.

23. ಆತ್ಮನಿರ್ಭರ ಭಾರತ, ಸಂಪೂರ್ಣ ವಿಶ್ವಾಸ ಮತ್ತು ಸಾಮರ್ಥ್ಯ ಹಾಗೂ ಕೌಶಲ್ಯಗಳನ್ನು ಹೊಂದಿರುವ 130 ಕೋಟಿ ಭಾರತೀಯರ ಭಾವನೆಯಾಗಿದೆ.

24. ಈಗಾಗಲೇ ನಾವು ಅಂತಾರಾಷ್ಟ್ರೀಯ ಗುಂಪುಗಳಾದ ಜಿ-20 ಮತ್ತು ಬ್ರಿಕ್ಸ್ ರಾಷ್ಟ್ರಗಳ ಭಾಗವಾಗಿದ್ದೇವೆ. ವಿಪತ್ತು ನಿರ್ವಹಣಾ ಸ್ಥಿತಿ ಸ್ಥಾಪಕತ್ವ ಮೂಲಸೌಕರ್ಯ ಮೈತ್ರಿ ಮತ್ತು ಅಂತಾರಾಷ್ಟ್ರೀಯ ಸೌರ ಮೈತ್ರಿ ಇಂದು ಭಾರತ ಪ್ರಯತ್ನಗಳ ಕಾರಣದಿಂದಾಗಿ ಸಾಕಾರವಾಗಿವೆ.

25. ಭಾಗ – ಎ ನಲ್ಲಿ ಪ್ರಸ್ತಾಪಿಸಲಾಗಿರುವ ಅಂಶಗಳು ನಮ್ಮ ರಾಷ್ಟ್ರ ಮೊದಲು ಎನ್ನುವ ಸಂಕಲ್ಪ, ರೈತರ ಆದಾಯ ದ್ವಿಗುಣಗೊಳಿಸುವುದು, ಬಲಿಷ್ಠ ಮೂಲಸೌಕರ್ಯ, ಆರೋಗ್ಯ ಭಾರತ, ಉತ್ತಮ ಆಡಳಿತ, ಯುವಕರಿಗೆ ಅವಕಾಶ, ಸರ್ವರಿಗೂ ಶಿಕ್ಷಣ, ಮಹಿಳಾ ಸಬಲೀಕರಣ ಮತ್ತು ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ ಮತ್ತಿತರವುಗಳಿಗೆ ಸಂಕಲ್ಪ ಬಲವರ್ಧನೆಗೊಳಿಸುವುದಾಗಿದೆ.

26. ಹೆಚ್ಚುವರಿಯಾಗಿ ನಾವು 2015-16ನೇ ಬಜೆಟ್ ನಲ್ಲಿ ಮಾಡಿದ್ದ 13 ಭರವಸೆಗಳ ತ್ವರಿತ ಅನುಷ್ಠಾನ ಮಾರ್ಗದಲ್ಲಿ ಮುನ್ನಡೆದಿದ್ದೇವೆ, ನಮ್ಮ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ 2022 ವೇಳೆಗೆ ಅವು ಸಾಕಾರಗೊಳ್ಳಲಿವೆ, ಮತ್ತು ಅವು ಕೂಡ ಆತ್ಮನಿರ್ಭರ ಭಾರತ ಮುನ್ನೋಟದ ಜೊತೆ ಸಮ್ಮಿಳಿತಗೊಳ್ಳಲಿವೆ.

27. 2021-22ನೇ ಸಾಲಿನ ಬಜೆಟ್ ಪ್ರಸ್ತಾವಗಳು ಆರು ಆಧಾರ ಸ್ಥಂಬಗಳನ್ನು ಅವಲಂಬಿಸಿವೆ.

i. ಆರೋಗ್ಯ ಮತ್ತು ಯೋಗಕ್ಷೇಮ

ii. ವಿತ್ತೀಯ ಮತ್ತು ಹಣಕಾಸು ಬಂಡವಾಳ ಹಾಗೂ ಮೂಲಸೌಕರ್ಯ

iii. ಆಶೋತ್ತರ ಭಾರತವನ್ನು ಒಳಗೊಂಡ ಸಮಗ್ರ ಅಭಿವೃದ್ಧಿ

iv. ಮಾನವ ಸಂಪನ್ಮೂಲ ಸದ್ಬಳಕೆ

v. ನಾವಿನ್ಯ ಮತ್ತು ಸಂಶೋಧನೆ ಹಾಗೂ ಅಭಿವೃದ್ಧಿ

vi. ಕನಿಷ್ಠ ಸರ್ಕಾರ ಮತ್ತು ಗರಿಷ್ಠ ಆಡಳಿತ

**i. ಆರೋಗ್ಯ ಮತ್ತು ಯೋಗಕ್ಷೇಮ**

28. ಒಟ್ಟಾರೆಯಾಗಿ ನಾನು ಹೇಳ ಬಯಸುವುದೆಂದರೆ ಈ ಬಜೆಟ್ ನಲ್ಲಿ ಆರೋಗ್ಯ ಮೂಲಸೌಕರ್ಯ ಹೂಡಿಕೆಯನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಪ್ರಗತಿ ಪರವಾಗಿ ಸಂಸ್ಥೆಗಳಿಗೆ ಹೆಚ್ಚಿನ ಬದ್ಧತೆಯನ್ನು ನಾವು ತೋರಬೇಕಿದೆ.

29. ಆರೋಗ್ಯದ ಬಗ್ಗೆ ಸಮಗ್ರ ಮನೋಭಾವದೊಂದಿಗೆ ಮೂರು ಪ್ರಮುಖ ವಲಯಗಳು – ಮುನ್ನೆಚ್ಚರಿಕೆ, ಆರೈಕೆ ಮತ್ತು ಯೋಗಕ್ಷೇಮ ಇವುಗಳ ಬಲವರ್ಧನೆಗೆ ಒತ್ತು ನೀಡಲಾಗಿದೆ.

**ಆರೋಗ್ಯ ವ್ಯವಸ್ಥೆ**

30. ಕೇಂದ್ರ ಸರ್ಕಾರದ ಪ್ರಾಯೋಜಕತ್ವದಲ್ಲಿ ಹೊಸ ಯೋಜನೆ **ಪಿಎಂ-ಆತ್ಮನಿರ್ಭರ ಸ್ವಾಸ್ಥ ಭಾರತ ಯೋಜನೆ**ಯನ್ನು ಆರಂಭಿಸಲಾಗುವುದು, ಅದಕ್ಕೆ ಆರು ವರ್ಷಗಳಲ್ಲಿ 64,180 ಕೋಟಿ ಮೀಸಲಿಡಲಾಗುವುದು. ಇದರಿಂದ ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಆರೋಗ್ಯ ರಕ್ಷಣಾ ವ್ಯವಸ್ಥೆಯ ಸಾಮರ್ಥ್ಯ ಅಭಿವೃದ್ಧಿಯಾಗುವ ಜೊತೆಗೆ ಹಾಲಿ ಇರುವ ರಾಷ್ಟ್ರೀಯ ಸಂಸ್ಥೆಗಳ ಬಲವರ್ಧನೆಯಾಗಲಿವೆ ಮತ್ತು ಹೊಸ ಸಂಸ್ಥೆಗಳು ಸೃಷ್ಟಿಯಾಗಲಿವೆ. ಹೊಸ ಹೊಸ ಕಾಯಿಲೆಗಳ ಪತ್ತೆ ಹಾಗೂ ಗುಣಮುಖಗೊಳಿಸಲು ನೆರವಾಗಲಿದೆ. ಇದು ರಾಷ್ಟ್ರೀಯ ಆರೋಗ್ಯ ಮಿಷನ್ ಜೊತೆಗೆ ಹೆಚ್ಚುವರಿ ಯೋಜನೆಯಾಗಿದೆ. ಈ ಯೋಜನೆಯಡಿ ಪ್ರಮುಖವಾಗಿ ಕೈಗೊಳ್ಳಲಿರುವ ಕ್ರಮಗಳು ಈ ಕೆಳಗಿನಂತಿವೆ.

ಎ. 17,788 ಗ್ರಾಮೀಣ ಮತ್ತು 11,024 ನಗರ ಆರೋಗ್ಯ ಮತ್ತು ಯೋಗ ಕ್ಷೇಮ ಕೇಂದ್ರಗಳಿಗೆ ಬೆಂಬಲ.

ಬಿ. ಎಲ್ಲ ಜಿಲ್ಲೆಗಳಲ್ಲಿ ಸಮಗ್ರ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಗಳ ಸ್ಥಾಪನೆ ಮತ್ತು 11 ರಾಜ್ಯಗಳ 3,382 ಬ್ಲಾಕ್ ಗಳಲ್ಲಿ ಸಾರ್ವಜನಿಕ ಆರೋಗ್ಯ ಘಟಕಗಳ ಸ್ಥಾಪನೆ.

ಸಿ. 602 ಜಿಲ್ಲೆಗಳು ಮತ್ತು 12 ಕೇಂದ್ರೀಯ ಸಂಸ್ಥೆಗಳಲ್ಲಿ ಗಂಭೀರ ಚಿಕಿತ್ಸಾ ಆಸ್ಪತ್ರೆ ಬ್ಲಾಕ್ ಗಳ ಸ್ಥಾಪನೆ.

ಡಿ. ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ(ಎನ್ ಸಿಡಿಸಿ) ಬಲವರ್ಧನೆ, ಅದರ ಐದು ಪ್ರಾದೇಶಿಕ ಶಾಖೆಗಳು ಮತ್ತು 20 ಮೆಟ್ರೋ ಪಾಲಿಟನ್ ಆರೋಗ್ಯ ಸರ್ವೇಕ್ಷಣಾ ಘಟಕಗಳು.

ಇ. ಸಮಗ್ರ ಆರೋಗ್ಯ ಮಾಹಿತಿ ಪೋರ್ಟಲ್ ಅನ್ನು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಜೊತೆ ವಿಸ್ತರಿಸಿ ಎಲ್ಲ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಗಳನ್ನು ಬೆಸೆಯಲಾಗುವುದು.

ಎಫ್. 17 ಹೊಸ ಸಾರ್ವಜನಿಕ ಆರೋಗ್ಯ ಘಟಕಗಳ ಕಾರ್ಯಾರಂಭ ಮತ್ತು ಹಾಲಿ ಇರುವ 32 ವಿಮಾನ ನಿಲ್ದಾಣಗಳು, 11 ಬಂದರುಗಳು ಮತ್ತು 7 ಗಡಿಗಳಲ್ಲಿರುವ 33 ಸಾರ್ವಜನಿಕ ಆರೋಗ್ಯ ಘಟಕಗಳ ಬಲವರ್ಧನೆ.

ಜಿ. 15 ಆರೋಗ್ಯ ತುರ್ತು ಕಾರ್ಯಾಚರಣೆ ಕೇಂದ್ರಗಳು ಮತ್ತು ಎರಡು ಮೊಬೈಲ್ ಆಸ್ಪತ್ರೆಗಳ ಸ್ಥಾಪನೆ ಮತ್ತು

ಎಚ್. ವಿಶ್ವ ಆರೋಗ್ಯ ಸಂಸ್ಥೆಯ ಆಗ್ನೇಯ ಏಷ್ಯಾ ಭಾಗದ ಪ್ರಾದೇಶಿಕ ಸಂಶೋಧನಾ ವೇದಿಕೆ ಒನ್ ನೇಷನ್ ರಾಷ್ಟ್ರೀಯ ಸಂಸ್ಥೆಯನ್ನು ಸ್ಥಾಪಿಸುವುದು, 9 ಜೈವಿಕ ಸುರಕ್ಷತಾ ಮೂರನೇ ಹಂತದ ಪ್ರಯೋಗಾಲಯಗಳ ಸ್ಥಾಪನೆ ಹಾಗೂ ನಾಲ್ಕು ಪ್ರಾದೇಶಿಕ ರಾಷ್ಟ್ರೀಯ ವೈರಾಣು ಕೇಂದ್ರಗಳ ಸ್ಥಾಪನೆ.

**ಪೌಷ್ಠಿಕಾಂಶ**

31. ಪೌಷ್ಠಿಕಾಂಶ ಬಲವರ್ಧನೆಗೆ ವಿತರಣೆ, ಜನಸಂಪರ್ಕ ಮತ್ತು ಫಲಿತಾಂಶವನ್ನು ಸೇರಿಸಲು ಪೂರಕ ಪೌಷ್ಠಿಕಾಂಶ ಕಾರ್ಯಕ್ರಮವನ್ನು ಪೋಷಣ್ ಅಭಿಯಾನದೊಂದಿಗೆ ಸಂಯೋಜಿಸಲಾಗುವುದು ಮತ್ತು 112 ಆಶೋತ್ತರ ಜಿಲ್ಲೆಗಳಲ್ಲಿ ಪೌಷ್ಠಿಕಾಂಶ ಸುಧಾರಣೆಗೆ ತೀವ್ರ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳಲು ಮಿಷನ್ ಪೋಷಣ್ 2.0 ಆರಂಭಿಸಲಾಗುವುದು.

**ನೀರು ಪೂರೈಕೆ ಸಾರ್ವತ್ರಿಕ ವ್ಯಾಪ್ತಿ**

32. ವಿಶ್ವ ಆರೋಗ್ಯ ಸಂಸ್ಥೆ ಶುದ್ಧ ನೀರು, ನೈರ್ಮಲೀಕರಣ ಮತ್ತು ಸ್ವಚ್ಛ ವಾತಾವರಣದ ಪ್ರಾಮುಖ್ಯತೆಯ ಬಗ್ಗೆ ಪದೇ ಪದೇ ಹೇಳುತ್ತಲೇ ಇದೆ. ಹಾಗಾಗಿ ಸಾರ್ವತ್ರಿಕ ಆರೋಗ್ಯ ರಕ್ಷಣೆಗೆ ಅದು ಅತ್ಯಂತ ಅವಶ್ಯಕವಾಗಿದೆ.

33. ಜಲಜೀವನ್ ಮಿಷನ್(ನಗರ)ವನ್ನು ಆರಂಭಿಸಲಾಗಿದೆ. ಅದರ ಮೂಲಕ 4,378 ನಗರ ಸ್ಥಳೀಯ ಸಂಸ್ಥೆಗಳ 2.86 ಕೋಟಿ ಕುಟುಂಬಗಳಿಗೆ ಕುಡಿಯುವ ನೀರಿನ ಸಂಪರ್ಕ ಒದಗಿಸಲಾಗುವುದು, 500 ಅಮೃತ್ ನಗರಗಳಲ್ಲಿ ದ್ರವ ತ್ಯಾಜ್ಯ ನಿರ್ವಹಣೆಗೆ ಕ್ರಮ ಕೈಗೊಳ್ಳಲಾಗುವುದು. ಇದನ್ನು ಐದು ವರ್ಷಗಳಲ್ಲಿ ಅನುಷ್ಠಾನಗೊಳಿಸಲಾಗುವುದು. ಅದಕ್ಕಾಗಿ 2,87,000 ತೆಗೆದಿರಿಸಲಾಗಿದೆ.

**ಸ್ವಚ್ಛ ಭಾರತ, ಸ್ವಾಸ್ಥ ಭಾರತ**

34. ನಗರ ಭಾರತದಲ್ಲಿ ಸ್ವಚ್ಛತೆಯನ್ನು ಮುಂದುವರಿಸಲು ನಾವು ಸಂಪೂರ್ಣ ಮಲ ತ್ಯಾಜ್ಯ ನಿರ್ವಹಣೆ ಮತ್ತು ತ್ಯಾಜ್ಯ ನೀರು ಸಂಸ್ಕರಣೆ, ಮೂಲದಲ್ಲೇ ತ್ಯಾಜ್ಯ ವಿಂಗಡನೆ, ಬಿಡಿ ಪ್ಲಾಸ್ಟಿಕ್ ಬಳಕೆ ತಗ್ಗಿಸುವುದು, ತ್ಯಾಜ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಮೂಲಕ ವಾಯು ಮಾಲಿನ್ಯವನ್ನು ತಗ್ಗಿಸುವುದು, ಕಟ್ಟಡ ನಿರ್ಮಾಣ ಮತ್ತು ತೆರವು ಚಟುವಟಿಕೆಗಳ ತ್ಯಾಜ್ಯ ಪರಿಣಾಮಕಾರಿ ನಿರ್ವಹಣೆ ಹಾಗೂ ತ್ಯಾಜ್ಯ ಸುರಿಯುವ ಸ್ಥಳಗಳಲ್ಲಿ ಜೈವಿಕ ಪರಿಹಾರಗಳನ್ನು ಕಂಡುಕೊಳ್ಳುವುದು ಸೇರಿದೆ. ನಗರ ಸ್ವಚ್ಛ ಭಾರತ ಮಿಷನ್ 2.0ಅನ್ನು 2021-2026ರ ವರೆಗೆ ಐದು ವರ್ಷಗಳ ಅವಧಿಯಲ್ಲಿ 1,41,678 ಕೋಟಿ ರೂ. ಹೂಡಿಕೆಯೊಂದಿಗೆ ಅನುಷ್ಠಾನಗೊಳಿಸಲಾಗುವುದು.

**ಶುದ್ಧ ಗಾಳಿ**

35. ವಾಯು ಮಾಲಿನ್ಯದ ಭಾರೀ ಸಮಸ್ಯೆಯನ್ನು ನಿಯಂತ್ರಿಸಲು ಒಂದು ಮಿಲಿಯನ್ ಗೂ ಅಧಿಕ ಜನಸಂಖ್ಯೆ ಇರುವ 42 ನಗರ ಕೇಂದ್ರಗಳಿಗೆ ಬಜೆಟ್ ನಲ್ಲಿ 2,217 ಕೋಟಿ ರೂ.ಗಳನ್ನು ಒದಗಿಸಲು ನಾನು ಉದ್ದೇಶಿಸಿದ್ದೇನೆ.

**ಹಳೆಯ ವಾಹನಗಳ ರದ್ದತಿ (ಸ್ಕ್ರ್ಯಾಪಿಂಗ್/ ಗುಜರಿ ) ಪಾಲಿಸಿ**

36. ಹಳೆಯ ಮತ್ತು ಯೋಗ್ಯವಲ್ಲದ ವಾಹನಗಳನ್ನು ಹಂತ ಹಂತವಾಗಿ ತೆಗೆದು ಗುಜರಿಗೆ ಹಾಕಲು ನಾವು ಪ್ರತ್ಯೇಕವಾಗಿ ಸ್ವಯಂಪ್ರೇರಿತ ವಾಹನ ರದ್ದತಿ (ಸ್ಕ್ರ್ಯಾಪಿಂಗ್/ ಗುಜರಿ) ನೀತಿಯನ್ನು ಪ್ರಕಟಿಸುತ್ತಿದ್ದೇವೆ. ಇದರಿಂದಾಗಿ ಇಂಧನ ಪರಿಣಾಮಕಾರಿಯನ್ನು ಕಾಯ್ದುಕೊಳ್ಳಲು ಉತ್ತೇಜಿಸುವ ಜೊತೆಗೆ ಪರಿಸರಸ್ನೇಹಿ ವಾಹನಗಳಿಗೆ ಉತ್ತೇಜನ ನೀಡಲಾಗುವುದು. ಆ ಮೂಲಕ ವಾಹನ ದಟ್ಟಣೆ ತಗ್ಗಿಸುವುದು ಮತ್ತು ತೈಲ ಆಮದು ವೆಚ್ಚ ತಗ್ಗಿಸುವ ಉದ್ದೇಶವಿದೆ. ವೈಯಕ್ತಿಕ ವಾಹನಗಳಿಗಾದರೆ 20 ವರ್ಷಗಳ ನಂತರ ಹಾಗೂ ವಾಣಿಜ್ಯ ವಾಹನಗಳಾದರೆ

15 ವರ್ಷಗಳ ನಂತರ ಸ್ವಯಂಚಾಲಿತ ಕ್ಷಮತಾ ಕೇಂದ್ರಗಳಲ್ಲಿ ಕ್ಷಮತೆಯ ಪರೀಕ್ಷೆಗೆ ಒಳಪಡಬೇಕು. ಈ ಯೋಜನೆಯ ಕುರಿತ ವಿವರಗಳನ್ನು ಸಚಿವಾಲಯ ಪ್ರತ್ಯೇಕವಾಗಿ ಹಂಚಿಕೊಳ್ಳಲಿದೆ.

**ಲಸಿಕೆ**

37. ನ್ಯೂಮೋಕೋಕಲ್ ಲಸಿಕೆ ಭಾರತದಲ್ಲಿಯೇ ಉತ್ಪಾದಿಸಿದ ಉತ್ಪನ್ನವಾಗಿದ್ದು, ಸದ್ಯ ದೇಶಾದ್ಯಂತ ಕೇವಲ ಐದು ರಾಜ್ಯಗಳಿಗೆ ಮಾತ್ರ ಅದನ್ನು ಸೀಮಿತಗೊಳಿಸಲಾಗಿದೆ. ಇದರಿಂದ ವಾರ್ಷಿಕ 50,000ಕ್ಕೂ ಅಧಿಕ ಮಕ್ಕಳ ಸಾವನ್ನು ತಡೆಗಟ್ಟಲಾಗುತ್ತಿದೆ.

38. 2021-22ನೇ ಹಣಕಾಸು ವರ್ಷಕ್ಕೆ ಕೋವಿಡ್-19 ಲಸಿಕೆಗಾಗಿ ನಾನು 35 ಸಾವಿರ ಕೋಟಿ ರೂ.ಗಳನ್ನು ಒದಗಿಸಿದ್ದೇನೆ. ಅಗತ್ಯಬಿದ್ದರೆ ಇನ್ನೂ ಹೆಚ್ಚಿನ ಹಣಕಾಸು ನೆರವು ನೀಡಲು ನಾನು ಬದ್ಧನಾಗಿದ್ದೇನೆ.

39. 2021-22ನೇ ಹಣಕಾಸು ವರ್ಷದ ಬಜೆಟ್ ನಲ್ಲಿ ಆರೋಗ್ಯ ಮತ್ತು ಯೋಗಕ್ಷೇಮ ವಲಯಕ್ಕೆ 2,23,846 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದ್ದು, ಹಿಂದಿನ ಹಣಕಾಸು ವರ್ಷದಲ್ಲಿ 94,452 ಕೋಟಿ ರೂ. ಒದಗಿಸಲಾಗಿತ್ತು. ಅದಕ್ಕೆ ಹೋಲಿಸಿದರೆ ಶೇ.137ರಷ್ಟು ಹೆಚ್ಚಿನ ಅನುದಾನ ಒದಗಿಸಲಾಗಿದೆ. ಅದರ ಹೆಚ್ಚಿನ ವಿವರಗಳು ಭಾಷಣದ ಅಡಕ – 1 ರಲ್ಲಿ ಉಲ್ಲೇಖವಾಗಿವೆ.

**ii. ವಿತ್ತೀಯ ಮತ್ತು ಹಣಕಾಸು ಬಂಡವಾಳ ಮತ್ತು ಮೂಲಸೌಕರ್ಯ**

**ಆತ್ಮನಿರ್ಭತ ಭಾರತ – ಉತ್ಪಾದನೆ ಆಧರಿತ ಪ್ರೋತ್ಸಾಹಕ ಯೋಜನೆ(ಪಿಎಲ್ಐ)**

40. ಐದು ಟ್ರಿಲಿಯನ್ ಅಮೆರಿಕನ್ ಡಾಲರ್ ಆರ್ಥಿಕತೆ ಸಾಧಿಸಲು ನಮ್ಮ ಉತ್ಪಾದನಾ ವಲಯ ಸುಸ್ಥಿರ ಆಧಾರದಲ್ಲಿ ಎರಡಂಕಿ ಗಾತ್ರದಲ್ಲಿ ಬೆಳೆಯಬೇಕಿದೆ. ನಮ್ಮ ಉತ್ಪಾದನಾ ಕಂಪನಿಗಳು ಜಾಗತಿಕ ಪೂರೈಕೆ ಸರಣಿಯ ಆಂತರಿಕ ಭಾಗವಾಗಬೇಕಿದೆ. ಜೊತೆಗೆ ಪ್ರಮುಖ ದಕ್ಷತೆಯ ಪರಿಣಾಮಕಾರಿ ಹಾಗೂ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕಿದೆ. ಈ ಮೇಲಿನ ಅಂಶಗಳನ್ನು ಸಾಧಿಸಲು 13 ವಲಯಗಳಲ್ಲಿ ನಾವು ಆತ್ಮನಿರ್ಭರ ಭಾರತ ಸಾಧಿಸಲು ನಾವು ಉತ್ಪಾದನಾ ಜಾಗತಿಕ ಚಾಂಪಿಯನ್ ಗಳನ್ನು ಸೃಷ್ಟಿಸಲು ಪಿಎಲ್ಐ ಯೋಜನೆಯನ್ನು ಆರಂಭಿಸಲಾಗಿದೆ. ಅದಕ್ಕಾಗಿ ಸರ್ಕಾರ 2021-22ನೇ ಹಣಕಾಸು ವರ್ಷದಿಂದ ಐದು ವರ್ಷಗಳ ಅವಧಿಗೆ ಸುಮಾರು 1.97 ಲಕ್ಷ ಕೋಟಿ ರೂ. ಖರ್ಚು ಮಾಡಲು ಬದ್ಧವಾಗಿದೆ. ಈ ಉಪಕ್ರಮದಿಂದಾಗಿ ಪ್ರಮುಖ ವಲಯಗಳಲ್ಲಿ ಗಾತ್ರ ಹಾಗೂ ವ್ಯಾಪ್ತಿಯ ಹೆಚ್ಚಳಕ್ಕೆ, ಸ್ವಾಭಾವಿಕ, ಜಾಗತಿಕ ಚಾಂಪಿಯನ್ ಗಳನ್ನು ಸೃಷ್ಟಿಸಲು ಮತ್ತು ನಮ್ಮ ಯುವ ಜನರಿಗೆ ಉದ್ಯೋಗಗಳನ್ನು ಸೃಷ್ಟಿಸಲು ನೆರವಾಗಲಿವೆ.

**ಜವಳಿ**

41. ಜವಳಿ ಉದ್ಯಮ ಜಾಗತಿಕವಾಗಿ ಸ್ಪರ್ಧಾತ್ಮಕವಾಗುವಂತೆ ಮಾಡಲು ಬೃಹತ್ ಹೂಡಿಕೆದಾರರನ್ನು ಆಕರ್ಷಿಸಲು ಮತ್ತು ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸಲು ಮೆಗಾ ಹೂಡಿಕೆ ಜವಳಿ ಪಾರ್ಕ್(ಮಿತ್ರ) ಯೋಜನೆಯನ್ನು ಆರಂಭಿಸಲಾಗುವುದು. ಇದು ಪಿಎಲ್ಐ ಯೋಜನೆಯ ಜೊತೆಗೆ ಹೆಚ್ಚುವರಿಯಾಗಿರಲಿದೆ. ಇದರಿಂದಾಗಿ ರಫ್ತಿನಲ್ಲಿ ಜಾಗತಿಕ ಚಾಂಪಿಯನ್ ಗಳನ್ನು ಸೃಷ್ಟಿಸಲು ಅಗತ್ಯ ನೆರವು ಹಾಗೂ ವಿಶ್ವದರ್ಜೆಯ ಮೂಲಸೌಕರ್ಯ ಸೃಷ್ಟಿಗೆ ಸಹಕಾರಿಯಾಗಲಿದೆ. ಮುಂದಿನ ಮೂರು ವರ್ಷಗಳಲ್ಲಿ 7 ಜವಳಿ ಪಾರ್ಕ್ ಗಳನ್ನು ಸ್ಥಾಪಿಸಲಾಗುವುದು.

**ಮೂಲಸೌಕರ್ಯ**

42. ರಾಷ್ಟ್ರೀಯ ಮೂಲಸೌಕರ್ಯ ಪೈಪ್ ಲೈನ್(ಎನ್ಐಪಿ) 2019ರ ಡಿಸೆಂಬರ್ ನಲ್ಲಿ ಘೋಷಿಸಲಾಗಿದ್ದು, ಇದು ಭಾರತ ಸರ್ಕಾರ ಕೈಗೆತ್ತಿಕೊಂಡ ವಿನೂತನ ಮೊಟ್ಟ ಮೊದಲ ಯೋಜನೆಯಾಗಿದೆ. ಎನ್ಐಪಿಯನ್ನು 6,835 ಯೋಜನೆಗಳಿಗೆ ಆರಂಭಿಸಲಾಯಿತು. ಇದೀಗ ಅದನ್ನು 7,400 ಯೋಜನೆಗಳಿಗೆ ವಿಸ್ತರಿಸಲಾಗಿದೆ. 217 ಯೋಜನೆಗಳಿಗೆ ಸುಮಾರು 1.10 ಲಕ್ಷ ಕೋಟಿ ರೂ.ಗಳ ಪ್ರಮುಖ ಹೂಡಿಕೆಯನ್ನು ನಾನಾ ಮೂಲಸೌಕರ್ಯ ಸಚಿವಾಲಯಗಳಲ್ಲಿ ಪೂರ್ಣಗೊಳಿಸಲಾಗಿದೆ.

43. ಎನ್ಐಪಿ ಅಡಿಯಲ್ಲಿ ಸರ್ಕಾರ ನಿರ್ದಿಷ್ಟ ಗುರಿಯನ್ನು ಹಾಕಿಕೊಂಡಿದ್ದು, ಮುಂಬರುವ ವರ್ಷಗಳಲ್ಲಿ ಅದನ್ನು ಸಾಧಿಸಲು ಬದ್ಧವಾಗಿದೆ. ಇದಕ್ಕೆ ಸರ್ಕಾರ ಮತ್ತು ಹಣಕಾಸು ವಲಯ ಎರಡರಿಂದಲೂ ಭಾರೀ ಪ್ರಮಾಣದ ಆರ್ಥಿಕ ನೆರವು ಹೆಚ್ಚಳ ಮಾಡುವ ಅಗತ್ಯವಿದೆ. ಈ ಬಜೆಟ್ ನಲ್ಲಿ ನಾನು ಮೂರು ವಿಧದಲ್ಲಿ ಅದಕ್ಕಾಗಿ ಸಮಗ್ರ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದ್ದೇನೆ.

44. ಮೊದಲಿಗೆ ಸಾಂಸ್ಥಿಕ ವ್ಯವಸ್ಥೆಯನ್ನು ರೂಪಿಸುವುದು; ಎರಡನೆಯದಾಗಿ ಸ್ವತ್ತುಗಳ ನಗದೀಕರಣಕ್ಕೆ ಹೆಚ್ಚಿನ ಒತ್ತು ನೀಡುವುದು ಹಾಗೂ ಮೂರನೆಯದಾಗಿ ಕೇಂದ್ರ ಮತ್ತು ರಾಜ್ಯ ಬಜೆಟ್ ಗಳ ಬಂಡವಾಳದ ವೆಚ್ಚದ ಪ್ರಮಾಣವನ್ನು ವೃದ್ಧಿಸುವುದು.

**ಮೂಲಸೌಕರ್ಯ ಹಣಕಾಸು – ಅಭಿವೃದ್ಧಿ ಹಣಕಾಸು ಸಂಸ್ಥೆ(ಡಿಎಫ್ಐ)**

45. ಮೂಲಸೌಕರ್ಯಕ್ಕೆ ದೀರ್ಘ ಕಾಲದ ಸಾಲದ ನೆರವು ಅತ್ಯಗತ್ಯ. ವೃತ್ತಿಪರರು ನಿರ್ವಹಿಸುವ ಅಭಿವೃದ್ಧಿ ಹಣಕಾಸು ಸಂಸ್ಥೆಯನ್ನು ಸ್ಥಾಪಿಸಲಾಗುವುದು. ಅದು ಮೂಲಸೌಕರ್ಯ ಯೋಜನೆಗಳಿಗೆ ಹಣಕಾಸು ನೆರವು ಒದಗಿಸುವ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಲಿದೆ. ಅದರಂತೆ ಡಿಎಫ್ಐ ಸ್ಥಾಪನೆಗೆ ನಾನು ಮಸೂದೆಯನ್ನು ಮಂಡಿಸಲಿದ್ದೇನೆ. ನಾವು ಈ ಸಂಸ್ಥೆಗೆ 20,000 ಕೋಟಿ ರೂ. ಬಂಡವಾಳವನ್ನು ಒದಗಿಸುತ್ತಿದ್ದೇವೆ. ಮೂರು ವರ್ಷಗಳ ಅವಧಿಯಲ್ಲಿ ಡಿಎಫ್ಐಗೆ ಕನಿಷ್ಠ 5 ಲಕ್ಷ ಕೋಟಿ ರೂ. ಹೊಂದುವಂತೆ ಮಾಡುವ ಗುರಿ ಹೊಂದಲಾಗಿದೆ.

46. ಸಾಲ ಹಣಕಾಸು ನೆರವಿಗಾಗಿ ವಿದೇಶಿ ಹೂಡಿಕೆದಾರರಿಂದ ಇನ್ವೈಟ್ಸ್ ಮತ್ತು ಆರ್ ಇಐಟಿಎಸ್ ಆಹ್ವಾನದ ಮೂಲಕ ಸೂಕ್ತ ಶಾಸನಗಳಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. ಇದರಿಂದಾಗಿ ಇನ್ವೈಟ್ಸ್ ಮತ್ತು ಆರ್ ಇಐಟಿಎಸ್ ನಲ್ಲಿ ಹಣಕಾಸು ಲಭ್ಯತೆ ಸುಗಮವಾಗುವುದಲ್ಲದೆ, ಮೂಲಸೌಕರ್ಯ ಹಾಗು ರಿಯಲ್ ಎಸ್ಟೇಟ್ ವಲಯಕ್ಕೆ ಹೆಚ್ಚಿನ ಬಂಡವಾಳ ಹರಿದು ಬರಲಿದೆ.

**ಸ್ವತ್ತು ನಗದೀಕರಣ**

47. ಹೊಸ ಮೂಲಸೌಕರ್ಯ ನಿರ್ಮಾಣಗಳಿಗೆ ಸಾರ್ವಜನಿಕ ಮೂಲಸೌಕರ್ಯ ಸ್ವತ್ತುಗಳ ನಗದೀಕರಣ ಕಾರ್ಯಚರಣೆ ಅತ್ಯಂತ ಪ್ರಮುಖ ಆರ್ಥಿಕ ಮೂಲವಾಗಿದೆ. 'ನ್ಯಾಷನಲ್ ಮಾನಿಟೈಸೇಷನ್ ಪೈಪ್ ಲೈನ್' ಅನ್ನು ಸಂಭಾವ್ಯ ಮೂಲಸೌಕರ್ಯ ಸ್ವತ್ತುಗಳಿಗಾಗಿ ಆರಂಭಿಸಲಾಗುವುದು. ಹೂಡಿಕೆದಾರರಿಗೆ ಸ್ಪಷ್ಟವಾಗಿ ಗೋಚರಿಸುವಂತೆ ಮಾಡಲು ಮತ್ತು ಅವುಗಳ ಪ್ರಗತಿಯ ಬಗ್ಗೆ ನಿಗಾ ಇಡಲು ಪ್ರತ್ಯೇಕ ಅಸೆಟ್ ಮಾನಿಟೈಸೇಷನ್ ಡ್ಯಾಶ್ ಬೋರ್ಡ್ ಸ್ಥಾಪಿಸಲಾಗುವುದು. ಆ ನಿಟ್ಟಿನಲ್ಲಿ ಕೈಗೊಳ್ಳಲಿರುವ ಕೆಲವು ಪ್ರಮುಖ ಕ್ರಮಗಳು ಹೀಗಿವೆ.

ಎ. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಪಿಜಿಸಿಐಎಲ್ ಇವೆರಡು ತಲಾ ಒಂದು ಐಎನ್ ವಿಐಟಿಗೆ ಪ್ರಾಯೋಜಕತ್ವ ನೀಡಿ, ಅಂತಾರಾಷ್ಟ್ರೀಯ ಮತ್ತು ದೇಶೀಯ ಸಾಂಸ್ಥಿಕ ಹೂಡಿಕೆದಾರರನ್ನು ಆಕರ್ಷಿಸಬೇಕಿದೆ. 5,000 ಕೋಟಿ ರೂ. ಮೌಲ್ಯದ ಐದು ಕಾರ್ಯಾಚರಣೆ ರಸ್ತೆಗಳನ್ನು ಎನ್ಎಚ್ಎಐ ಐಎನ್ ವಿಐಟಿಗೆ ಹಸ್ತಾಂತರಿಸಲಾಗುವುದು. ಅಂತೆಯೇ ಸುಮಾರು 7,000 ಕೋಟಿ ರೂ. ಮೌಲ್ಯದ ಪ್ರಸರಣಾ ಸ್ವತ್ತುಗಳನ್ನು ಪಿಜಿಸಿಐಎಲ್ ಐಎನ್ ವಿಐಟಿಗೆ ವರ್ಗಾಯಿಸಲಾಗುವುದು.

ಬಿ. ರೈಲ್ವೆ ನಿರ್ದಿಷ್ಟ ಸರಕು ಕಾರಿಡಾರ್ ಸ್ವತ್ತುಗಳನ್ನು ನಗದೀಕರಣಗೊಳಿಸಿ, ಅವುಗಳು ಕಾರ್ಯಾಚರಣೆಗೊಂಡ ಬಳಿಕ ನಿರ್ವಹಣೆಯನ್ನು ನೋಡಿಕೊಳ್ಳಲಿದೆ.

ಸಿ. ಮುಂದಿನ ಹಂತದಲ್ಲಿ ಹಲವು ವಿಮಾನ ನಿಲ್ದಾಣಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಒಪ್ಪಂದದಲ್ಲಿ ನಗದೀಕರಣ ಮಾಡಲಾಗುವುದು.

ಡಿ. ಸ್ವತ್ತು ನಗದೀಕರಣ ಕಾರ್ಯಕ್ರಮದಲ್ಲಿ ಇತರೆ ಪ್ರಮುಖ ಮೂಲಸೌಕರ್ಯ ಸ್ವತ್ತುಗಳನ್ನು ಬಿಡುಗಡೆ ಮಾಡಲಾಗುವುದು. ಅವುಗಳೆಂದರೆ (I)ಎನ್ಎಚ್ಎಐ ಕಾರ್ಯಾಚರಣೆ ಟೋಲ್ ರಸ್ತೆಗಳು (II) ಪಿಜಿಸಿಐಎಲ್ ನ ಪ್ರಸರಣಾ ಸ್ವತ್ತುಗಳು (III) ಜಿಎಐಎಲ್, ಐಒಸಿಎಲ್ ಮತ್ತು ಎಚ್ ಪಿಸಿಎಲ್ ತೈಲ ಮತ್ತು ಅನಿಲ ಕೊಳವೆ ಮಾರ್ಗ (IV) ಎರಡು ಮತ್ತು ಮೂರನೇ ದರ್ಜೆ ನಗರಗಳಲ್ಲಿನ ಎಎಐ ವಿಮಾನ ನಿಲ್ದಾಣಗಳು (V) ಇತರೆ ರೈಲ್ವೆ ಮೂಲಸೌಕರ್ಯ ಸ್ವತ್ತುಗಳು (VI) ಕೇಂದ್ರ ಗೋದಾಮು ನಿಗಮ ಮತ್ತು ನಾಫೆಡ್ ಸೇರಿ ಇತರ ಸಿಪಿಎಸ್ ಸಿಗಳ ಉಗ್ರಾಣ ಸ್ವತ್ತುಗಳು (VII) ಕ್ರೀಡಾ ಸಂಕೀರ್ಣಗಳು

**ಬಂಡವಾಳ ವೆಚ್ಚದಲ್ಲಿ ಭಾರೀ ಏರಿಕೆ**

48. 2020-21ನೇ ಹಣಕಾಸು ವರ್ಷದಲ್ಲಿ ನಾವು 4.12 ಲಕ್ಷ ಕೋಟಿ ರೂ.ಗಳ ಬಂಡವಾಳ ವೆಚ್ಚವನ್ನು ಒದಗಿಸಿದ್ದೆವು. ಇದೀಗ ಸಂಪನ್ಮೂಲ ಕೊರತೆಯ ನಡುವೆಯೂ ನಾವು ಪ್ರಯತ್ನಗಳನ್ನು ನಡೆಸಿ, ಹೆಚ್ಚಿನ ಬಂಡವಾಳವನ್ನು ಖರ್ಚು ಮಾಡಲು ಉದ್ದೇಶಿಸಿದ್ದು, ಈ ವರ್ಷಾಂತ್ಯದ ವೇಳೆಗೆ 4.39 ಲಕ್ಷ ಕೋಟಿ ಖರ್ಚು ಮಾಡುವ ನಿರೀಕ್ಷೆ ಇದೆ. ಈ ಬಂಡವಾಳ ವೆಚ್ಚ ಮೊತ್ತವನ್ನು 2021-22ನೇ ಸಾಲಿಗೆ ನಾನು ಗಣನೀಯವಾಗಿ ಏರಿಸಲು ಉದ್ದೇಶಿಸಿದ್ದು, ಒಟ್ಟು 5.54 ಲಕ್ಷ ಕೋಟಿ ರೂ.ಗಳನ್ನು ಒದಗಿಸಲಾಗುವುದು. 2020-21ನೇ ಸಾಲಿಗೆ ಹೋಲಿಸಿದರೆ ಈ ಮೊತ್ತ ಶೇ.34.5ರಷ್ಟು ಹೆಚ್ಚಾಗಲಿದೆ. ಇದರಲ್ಲಿ 44,000 ಕೋಟಿ ರೂ.ಗಳಿಗೂ ಅಧಿಕ ಹಣವನ್ನು ಬಜೆಟ್ ನಲ್ಲಿ ಆರ್ಥಿಕ ವ್ಯವಹಾರಗಳ ಇಲಾಖೆಗೆ ನಿಗದಿಪಡಿಸಲಾಗಿದ್ದು, ಅದನ್ನು ಉತ್ತಮ ಪ್ರಗತಿ ಸಾಧಿಸುತ್ತಿರುವ ಯೋಜನೆಗಳು/ಕಾರ್ಯಕ್ರಮಗಳು ಮತ್ತು ಇಲಾಖೆಗಳಿಗೆ ಅಗತ್ಯತೆಗೆ ತಕ್ಕಂತೆ ನೀಡಲಾಗುವುದು. ವೆಚ್ಚವಲ್ಲದೆ, ಬಂಡವಾಳ ವೆಚ್ಚಕ್ಕಾಗಿ ರಾಜ್ಯಗಳು ಮತ್ತು ಸ್ವಾಯತ್ತ ಸಂಸ್ಥೆಗಳಿಗೆ 2 ಲಕ್ಷ ಕೋಟಿಗೂ ಅಧಿಕ ಹಣವನ್ನು ಒದಗಿಸಲಾಗಿದೆ.

49. ಅಲ್ಲದೆ ನಾವು ಮೂಲಸೌಕರ್ಯ ಸೃಷ್ಟಿಗೆ ತಮ್ಮ ಬಜೆಟ್ ಗಿಂತ ಹೆಚ್ಚಿನ ಹಣವನ್ನು ರಾಜ್ಯಗಳು ಖರ್ಚು ಮಾಡುವಂತೆ ಮಾಡಲು ನಿರ್ದಿಷ್ಟ ಕಾರ್ಯತಂತ್ರವನ್ನು ಪ್ರಕಟಿಸಲಾಗುವುದು.

**ರಸ್ತೆ ಮತ್ತು ಹೆದ್ದಾರಿ ಮೂಲಸೌಕರ್ಯ**

50. 3.3 ಲಕ್ಷ ಕೋಟಿ ರೂ. ವೆಚ್ಚದಲ್ಲಿ 13,000ಕ್ಕೂ ಅಧಿಕ ಕಿ.ಮೀ. ರಸ್ತೆಯ ಅಭಿವೃದ್ಧಿಗೆ ಈಗಾಗಲೇ ಟೆಂಡರ್ ನೀಡಲಾಗಿದೆ. ಆ ಪೈಕಿ 3,800 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ. ಮಾರ್ಚ್ 2022ರ ವೇಳೆಗೆ ಹೆಚ್ಚುವರಿಯಗಿ 8,500 ಕಿ.ಮೀ. ರಸ್ತೆ ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ ಹಾಗೂ ಹೆಚ್ಚುವರಿಯಾಗಿ 11,000 ಕಿ.ಮೀ ವ್ಯಾಪ್ತಿಯ ಹೆದ್ದಾರಿ ಕಾರಿಡಾರ್ ಅನ್ನು ಪೂರ್ಣಗೊಳಿಸಲಾಗುವುದು.

51. ರಸ್ತೆ ಮೂಲಸೌಕರ್ಯವನ್ನು ಮತ್ತಷ್ಟು ವೃದ್ಧಿಸಲು ಹೆಚ್ಚಿನ ಆರ್ಥಿಕ ಕಾರಿಡಾರ್ ಗಳನ್ನು ಅಭಿವೃದ್ಧಿಪಡಿಸಲಾಗುವುದು, ಅವುಗಳ ವಿವರ ಈ ಕೆಳಗಿನಂತಿದೆ.

ಎ. ತಮಿಳುನಾಡಿನಲ್ಲಿ 1.03 ಲಕ್ಷ ಕೋಟಿ ರೂ. ಹೂಡಿಕೆಯೊಂದಿಗೆ 3,500 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಕಾಮಗಾರಿ. ಇದರಲ್ಲಿ ಮಧುರೈ-ಕೊಲ್ಲಂ ಕಾರಿಡಾರ್, ಚಿತ್ತೂರ್-ಥಟ್ಟೂರ್ ಕಾರಿಡಾರ್ ಸೇರಿವೆ. ನಿರ್ಮಾಣ ಕಾರ್ಯ ಮುಂದಿನ ವರ್ಷ ಆರಂಭ.

ಬಿ. ಕೇರಳದ ಮುಂಬೈ-ಕನ್ಯಾಕುಮಾರಿ ಕಾರಿಡಾರ್ ನಲ್ಲಿ 600 ಕಿ.ಮೀ. ಅಭಿವೃದ್ಧಿ ಸೇರಿದಂತೆ 65,000 ಕೋಟಿ ರೂ. ವೆಚ್ಚದಲ್ಲಿ 1,100 ಕಿ.ಮೀ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ.

ಸಿ. ಹಾಲಿ ಇರುವ ಕೋಲ್ಕತ್ತಾ-ಸಿಲಿಗುರಿ ರಸ್ತೆ ಉನ್ನತೀಕರಣ ಸೇರಿದಂತೆ ಪಶ್ಚಿಮ ಬಂಗಾಳದಲ್ಲಿ 25,000 ಕೋಟಿ ರೂ. ವೆಚ್ಚದಲ್ಲಿ 675 ಕಿ.ಮೀ. ಹೆದ್ದಾರಿ ಅಭಿವೃದ್ಧಿ.

ಡಿ. ಅಸ್ಸಾಂ ಸದ್ಯ ಪ್ರಗತಿ ಪಥದತ್ತ ಸಾಗುತ್ತಿರುವುದರಿಂದ 19,000 ಕೋಟಿ ರೂ. ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿ. ಅಲ್ಲದೆ ರಾಜ್ಯದಲ್ಲಿ ಮುಂದಿನ ಮೂರು ವರ್ಷಗಳಲ್ಲಿ 34,000 ಕೋಟಿ ರೂ.ಗೂ ಅಧಿಕ ವೆಚ್ಚದಲ್ಲಿ 1300 ಕಿ.ಮೀ. ವ್ಯಾಪ್ತಿಯ ಹೆದ್ದಾರಿ ಅಭಿವೃದ್ಧಿ.

52. 2021-22ರಲ್ಲಿ ಕೈಗೆತ್ತಿಕೊಳ್ಳಲಿರುವ ಕೆಲವು ಮಹತ್ವಾಕಾಂಕ್ಷೆಯ ಕಾರಿಡಾರ್ ಮತ್ತು ಇತರ ಪ್ರಮುಖ ಯೋಜನೆಗಳು ಈ ಕೆಳಗಿನಂತಿವೆ. ಅವುಗಳನ್ನು ಉಲ್ಲೇಖ 2 ರಲ್ಲಿ ಪ್ರಸ್ತಾಪಿಸಲಾಗಿದೆ.

53. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯಕ್ಕೆ 1,81,101 ಲಕ್ಷ ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ. ಇದು ಅತ್ಯಧಿಕವಾಗಿದ್ದು, ಇದರಲ್ಲಿ 1,08,230 ಕೋಟಿ ಬಂಡವಾಳ ವೆಚ್ಚವಾಗಲಿದೆ.

**ರೈಲ್ವೆ ಮೂಲಸೌಕರ್ಯ**

54. ಭಾರತೀಯ ರೈಲ್ವೆ ರಾಷ್ಟ್ರೀಯ ರೈಲು ಯೋಜನೆ ಭಾರತ – 2030 ಯನ್ನು ಸಿದ್ಧಪಡಿಸಿದೆ. ಇದರ ಉದ್ದೇಶ 2030ರ ವೇಳೆಗೆ ಭಾರತೀಯ ರೈಲ್ವೆ ವ್ಯವಸ್ಥೆಯನ್ನು ಭವಿಷ್ಯಕ್ಕೆ ಸಜ್ಜುಗೊಳಿಸುವುದಾಗಿದೆ.

55. ‘ಮೇಕ್ ಇನ್ ಇಂಡಿಯಾ ಅಭಿಯಾನದಡಿ ನಮ್ಮ ಕಾರ್ಯತಂತ್ರಕ್ಕೆ ಅನುಗುಣವಾಗಿ ಉದ್ಯಮಕ್ಕೆ ಅನುಕೂಲವಾಗುವಂತೆ ಸಾಗಾಣೆ ವೆಚ್ಚ ಗಣನೀಯವಾಗಿ ತಗ್ಗಿಸುವ ಗುರಿ ಹೊಂದಲಾಗಿದೆ. ಪಶ್ಚಿಮ ನಿರ್ದಿಷ್ಟ ಸರಕು ಕಾರಿಡಾರ್(ಡಿ ಎಫ್ ಸಿ) ಮತ್ತು ಪೂರ್ವ ಡಿ ಎಫ್ ಸಿ 2022ರ ಜೂನ್ ವೇಳೆಗೆ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ. ಅಲ್ಲದೆ ಈ ಕೆಳಗಿನ ಹೆಚ್ಚುವರಿ ಉಪಕ್ರಮಗಳನ್ನು ಪ್ರಸ್ತಾಪಿಸಲಾಗಿದೆ.

ಎ. 2021-22ರಲ್ಲಿ ಪಿಪಿಪಿ ಮಾದರಿಯಲ್ಲಿ ಪೂರ್ವ ಡಿ ಎಫ್ ಸಿ ಸೊನ್ನಗರ್-ಗೊಮೋಹ್ ವಲಯ(263.7 ಕಿ.ಮೀ) ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು. ಗೊಮೋಹ್-ಡಂಕುನಿ ವಲಯದ 274.3 ಕಿ.ಮೀ. ಅಭಿವೃದ್ಧಿ ಕೈಗೊಳ್ಳಲಾಗುವುದು.

ಬಿ. ಅಲ್ಲದೆ ನಾವು ಭವಿಷ್ಯಕ್ಕಾಗಿ ನಿರ್ದಿಷ್ಟ ಕಾರಿಡಾರ್ ಯೋಜನೆಗಳನ್ನು ಕೈಗೊಳ್ಳಲಾಗುವುದು. ಖರಗ್ಪುರ್ ನಿಂದ ವಿಜಯವಾಡದವರೆಗೆ, ಪೂರ್ವ ಕರಾವಳಿ ಕಾರಿಡಾರ್, ಭುಸವಾಲ್ ನಿಂದ ಖರಗ್ಪುರ್ ವರೆಗೆ ಮತ್ತು ಡಂಕುನಿವರೆಗೆ ಪೂರ್ವ-ಪಶ್ಚಿಮ ಕಾರಿಡಾರ್, ವಿಜಯವಾಡದಿಂದ ಇಟಾರ್ಸಿವರೆಗೆ ಉತ್ತರ – ದಕ್ಷಿಣ ಕಾರಿಡಾರ್ ಕೈಗೊಳ್ಳಲಾಗುವುದು. ಇವುಗಳಿಗೆ ಮೊದಲನೇ ಹಂತದಲ್ಲಿ ವಿಸ್ತೃತ ಯೋಜನಾ ವರದಿಗಳನ್ನು ಪಡೆಯಲಾಗುವುದು.

ಸಿ. ಬ್ರಾಡ್ ಗೇಜ್ ಪರಿವರ್ತನಾ ಕಾರ್ಯದ ವಿದ್ಯುದೀಕರಣ ಕಾರ್ಯ(ಆರ್ ಕೆಎಂ) 2020ರ ಅಕ್ಟೋಬರ್ 1ರ ವೇಳೆಗೆ 41,548 ಆರ್ ಕೆಎಂ ಆಗಿದ್ದು, 2021ರ ಅಂತ್ಯದ ವೇಳೆಗೆ 46,000 ಆರ್ ಕೆಎಂ ಅಂದರೆ ಶೇ.72ರಷ್ಟು ಕಾಮಗಾರಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ. 2023ರ ಡಿಸೆಂಬರ್ ವೇಳೆಗೆ ಬ್ರಾಡ್ ಗೇಜ್ ಮಾರ್ಗದ ವಿದ್ಯುದೀಕರಣ ಶೇ.100ರಷ್ಟು ಪೂರ್ಣಗೊಳ್ಳಲಿದೆ.

56. ಪ್ರಯಾಣಿಕರ ಸುರಕ್ಷತೆ ಮತ್ತು ಸುಗಮ ಸಂಚಾರಕ್ಕೆ ಈ ಕೆಳಗಿನ ಕ್ರಮಗಳನ್ನು ಪ್ರಸ್ತಾಪಿಸಲಾಗಿದೆ.

ಎ. ಪ್ರಯಾಣಿಕರಿಗೆ ಉತ್ತಮ ಪ್ರಯಾಣದ ಅನುಭವ ನೀಡಲು ಪ್ರವಾಸಿ ಮಾರ್ಗಗಳಲ್ಲಿ ಅತ್ಯಾಧುನಿಕವಾಗಿ ವಿನ್ಯಾಸಗೊಳಿಸಿದ ವಿಸ್ತಾ ಡೋಮ್ ಎಲ್ಎಚ್ ಬಿ ಕೋಚ್ ಗಳನ್ನು ಪರಿಚಯಿಸಲಾಗುವುದು.

ಬಿ. ಕಳೆದ ಕೆಲವು ವರ್ಷಗಳಿಂದೀಚಗೆ ಕೈಗೊಂಡ ಸುರಕ್ಷತಾ ಕ್ರಮಗಳು ಫಲಿತಾಂಶ ನೀಡಿವೆ. ಆ ಪ್ರಯತ್ನಗಳನ್ನು ಇನ್ನಷ್ಟು ಬಲವರ್ಧನೆಗೊಳಿಸಲು ಭಾರತೀಯ ರೈಲ್ವೆಯ ಮಾರ್ಗಗಳಲ್ಲಿ ಅಧಿಕ ದಟ್ಟಣೆ ಜಾಲ ಮತ್ತು ಅಧಿಕ ಬಳಕೆಯುಕ್ತ ನೆಟ್‌ವರ್ಕ್ ಜಾಲ. ಮಾನವ ದೋಷಗಳಿಂದಾಗಿ ರೈಲುಗಳು ಮುಖಾಮುಖಿಯಾಗುವುದನ್ನು ತಪ್ಪಿಸಲು ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಸ್ವಯಂಚಾಲಿತ ರೈಲು ರಕ್ಷಣಾ ವ್ಯವಸ್ಥೆಯನ್ನು ಒದಗಿಸಲಾಗುವುದು.

ಸಿ. ರೈಲ್ವೆಗಾಗಿ ದಾಖಲೆಯ 1,10,055 ಕೋಟಿ ರೂ.ಗಳನ್ನು ತೆಗೆದಿರಿಸಲಾಗಿದ್ದು, ಆ ಪೈಕಿ 1,07,100 ಕೋಟಿ ರೂ.ಗಳು ಬಂಡವಾಳ ವೆಚ್ಚವಾಗಿದೆ.

**ನಗರ ಮೂಲಸೌಕರ್ಯ**

57. ಮೆಟ್ರೋ ರೈಲು ಮಾರ್ಗ ವಿಸ್ತರಣೆ ಮತ್ತು ನಗರ ಬಸ್ ಸೇವೆ ಸುಧಾರಿಸುವುದು ಸೇರಿದಂತೆ ನಗರ ಪ್ರದೇಶಗಳಲ್ಲಿ ಸಾರ್ವಜನಿಕ ವ್ಯವಸ್ಥೆಯನ್ನು ಹಂಚಿಕೆ ಮಾಡುವುದು ಮತ್ತು ಅವುಗಳನ್ನು ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರ ಕಾರ್ಯೋನ್ಮುಖವಾಗಿದೆ. ಸಾರ್ವಜನಿಕ ಬಸ್ ಸಾರಿಗೆ ಸೇವೆ ಬಲವರ್ಧನೆಗೆ 18,000 ಕೋಟಿ ರೂ.ಗಳ ಹೊಸ ಯೋಜನೆಯನ್ನು ಆರಂಭಿಸಲಾಗುವುದು. ಅದರಡಿ ನವೀನ ಸಾರ್ವಜನಿಕ ಖಾಸಗಿ ಸಹಭಾಗಿತ್ವ(ಪಿಪಿಪಿ) ಮಾದರಿಯನ್ನು ಉತ್ತೇಜಿಸಲು ಖಾಸಗಿ ವಲಯದ ಕಂಪನಿಗಳಿಂದ ಆರ್ಥಿಕ ನೆರವು ನೀಡುವುದು ಮತ್ತು ಸುಮಾರು 20,000 ಬಸ್ ಗಳಿಗೆ ಹಣಕಾಸು ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಕೈಗೊಳ್ಳಲು ಅನುಕೂಲ ಕಲ್ಪಿಸಲಾಗುವುದು. ಈ ಯೋಜನೆಯಿಂದಾಗಿ ಆಟೋ ಮೊಬೈಲ್ ವಲಯ ವೃದ್ಧಿಯಾಗುವುದಲ್ಲದೆ, ಆರ್ಥಿಕ ಪ್ರಗತಿಗೆ ಒತ್ತು ಸಿಗಲಿದೆ. ಯುವಜನರಿಗೆ ಉದ್ಯೋಗಾವಕಾಶಗಳು ಲಭ್ಯವಾಗಲಿದೆ ಮತ್ತು ನಗರ ವಾಸಿಗಳಿಗೆ ಸಂಚಾರ ಸುಗಮವಾಗಲಿದೆ.

58. ಅಲ್ಲದೆ ದೇಶಾದ್ಯಂತ ಎಲ್ಲಾ ನಗರಗಳಲ್ಲಿ ಮೆಟ್ರೋ ರೈಲು ಸೇವೆಗಳನ್ನು ಭಾರೀ ಪ್ರಮಾಣದಲ್ಲಿ ವಿಸ್ತರಿಸಲಾಗುವುದು. ಒಟ್ಟಾರೆ ಸಾಂಪ್ರದಾಯಿಕ ಮೆಟ್ರೋ ರೈಲು 702 ಕಿ.ಮೀ. ಕಾರ್ಯಾಚರಣೆ ನಡೆಸುತ್ತಿದ್ದು, ಮತ್ತೆ ಹೆಚ್ಚುವರಿಯಾಗಿ 1,016 ಕಿ.ಮೀ. ಮೆಟ್ರೋ ಮಾರ್ಗ ಹೊಂದಲಾಗುವುದು ಮತ್ತು ಆರ್ ಆರ್ ಟಿ ಎಸ್ 27 ನಗರಗಳಲ್ಲಿ ಈ ನಿರ್ಮಾಣ ಕಾರ್ಯದಲ್ಲಿ ತೊಡಗಿದೆ. ಬಜೆಟ್ ಮಂಡನೆ ವೇಳೆ ಸಚಿವರು ಸರ್ಕಾರ ಎರಡು ಹೊಸ ತಂತ್ರಜ್ಞಾನಗಳು ಅಂದರೆ ‘ಮೆಟ್ರೋಲೈಟ್’ ಮತ್ತು ‘ಮೆಟ್ರೋನಿಯೊ’ಗಳನ್ನು ನಿಯೋಜಿಸಲು ಚಿಂತನೆ

ನಡೆಸಿದೆ. ಮೆಟ್ರೋ ರೈಲು ವ್ಯವಸ್ಥೆಗಿಂತ ಅತಿ ಕಡಿಮೆ ದರವನ್ನು ಒಳಗೊಂಡಿರುವ ಇದು, ಮೆಟ್ರೋ ರೈಲಿನ ಅನುಭವವನ್ನು ನೀಡುತ್ತದೆ ಮತ್ತು ಆರಾಮವಾಗಿರುತ್ತದೆ ಹಾಗೂ ಎರಡನೇ ದರ್ಜೆ ನಗರಗಳು ಮತ್ತು ಒಂದನೇ ದರ್ಜೆ ನಗರಗಳ ಹೊರ ವಲಯಗಳಿಗೆ ಸುರಕ್ಷಿತ ಮತ್ತು ಸುಗಮ ಸಂಚಾರ ಕಲ್ಪಿಸಲಾಗುವುದು.

59. ಕೇಂದ್ರ ಸರ್ಕಾರ ಈ ಕೆಳಗಿನ ಯೋಜನೆಗಳಿಗೆ ಆರ್ಥಿಕ ನೆರವು ನೀಡಲಿದೆ.

ಎ. 1957.05 ಕೋಟಿ ರೂ. ವೆಚ್ಚದಲ್ಲಿ 11.5 ಕಿ.ಮೀ.ಗಳ ಕೊಚ್ಚಿ ಮೆಟ್ರೋ ರೈಲು ಯೋಜನೆ ಎರಡನೇ ಹಂತ.

ಬಿ. 118.9 ಕಿ.ಮೀ. ಉದ್ದದ ಚೆನ್ನೈ ಮೆಟ್ರೋ ರೈಲು ಯೋಜನೆ ಎರಡನೇ ಹಂತಕ್ಕೆ 63,246 ಕೋಟಿ ರೂ.

ಸಿ. 58.19 ಕಿ.ಮೀ. ಉದ್ದದ ಬೆಂಗಳೂರು ಮೆಟ್ರೋ ರೈಲು ಯೋಜನೆ 2ಎ ಮತ್ತು 2ಬಿ ಹಂತಕ್ಕೆ 14,788 ಕೋಟಿ ರೂ. ನೆರವು

ಡಿ. ನಾಗ್ಪುರ ಮೆಟ್ರೋ ರೈಲು ಯೋಜನೆ ಎರಡನೇ ಹಂತ ಮತ್ತು ನಾಸಿಕ್ ಮೆಟ್ರೋ ಯೋಜನೆಗಳಿಗೆ ಕ್ರಮವಾಗಿ 5,976 ಮತ್ತು 2,092 ಕೋಟಿ ರೂ. ನೆರವು.

***ಇಂಧನ, ಮೂಲಭೂತ ಸೌಕರ್ಯ***

60. ಕಳೆದ ಆರು ವರ್ಷಗಳಲ್ಲಿ ವಿದ್ಯುತ್ ವಲಯದಲ್ಲಿ  ಹಲವಾರು ಸುಧಾರಣೆಗಳು ಮತ್ತು ಸಾಧನೆಗಳನ್ನು ಮಾಡಲಾಗಿದೆ. ನಾವು 139 ಗಿಗಾವ್ಯಾಟ್ ವಿದ್ಯುತ್ ಸಾಮರ್ಥ್ಯವನ್ನು ಅಳವಡಿಸಿಕೊಂಡಿದ್ದು, 2.8 ಕೋಟಿ ಮನೆಗಳಿಗೆ ಸಂಪರ್ಕ ಕಲ್ಪಿಸಲಾಗಿದೆ ಮತ್ತು 1.41 ಲಕ್ಷ ಸರ್ಕಿಟ್ ಕಿಲೋಮೀಟರ್ ವರ್ಗಾವಣೆ ಮಾರ್ಗವನ್ನು ಸೇರ್ಪಡೆ ಮಾಡಲಾಗಿದೆ.

**61**. ವಿದ್ಯುತ್ ಪೂರೈಕೆ ಕಂಪೆನಿಗಳು, ಅವು ಸರ್ಕಾರವೇ ಇರಲಿ ಅಥವಾ ಖಾಸಗಿ ವಲಯವೇ ಆಗಿರಲಿ ಏಕ ಸ್ವಾಮ್ಯ ಸಾಧಿಸಿವೆ. ಸ್ಪರ್ಧೆಯನ್ನು ಉತ್ತೇಜಿಸಲು ಗ್ರಾಹಕರಿಗೆ ಆಯ್ಕೆಯ ಅವಕಾಶವನ್ನು ಕಲ್ಪಿಸುವ ಅಗತ್ಯವಿದೆ. ಒಂದಕ್ಕಿಂತ ಹೆಚ್ಚು ವಿದ್ಯುತ್ ಪೂರೈಕೆ ಕಂಪೆನಿಗಳಿರುವ ಕಡೆಗಳಲ್ಲಿ ಗ್ರಾಹಕರಿಗೆ ಪರ್ಯಾಯವನ್ನು ಆಯ್ಕೆ ಮಾಡಿಕೊಳ್ಳುವ ಕುರಿತು ಚೌಕಟ್ಟು ರೂಪಿಸಲಾಗುವುದು.

**62.** ವಿತರಣಾ ಕಂಪೆನಿಗಳ ಕಾರ್ಯಸಾಧ್ಯತೆಯು ಗಂಭೀರ ಕಾಳಜಿಯಾಗಿದೆ. ಪರಿಷ್ಕೃತ ಸುಧಾರಣೆ ಆಧರಿತ, ಫಲಿತಾಂಶ ಸಂಬಂಧಿತ ವಿದ್ಯುತ್ ವಿತರಣಾ ವಲಯದ ಯೋಜನೆಯನ್ನು ಐದು ವರ್ಷಗಳಲ್ಲಿ 3,05,984 ಕೋಟಿ ರೂ ವೆಚ್ಚದಲ್ಲಿ ಜಾರಿಗೊಳಿಸಲಾಗುವುದು. ಪೂರ್ವಪಾವತಿ ಸ್ಮಾರ್ಟ್ ಮೀಟರಿಂಗ್, ಫೀಡರ್ ಪ್ರತ್ಯೇಕಿಸುವ, ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವುದು ಇತ್ಯಾದಿ ಒಳಗೊಂಡಂತೆ ಮೂಲ ಸೌಕರ್ಯ ಸೃಷ್ಟಿಗೆ  ಡಿಸ್ಕಾಂಗಳಿಗೆ ಈ ಯೋಜನೆ ನೆರವು ನೀಡುತ್ತದೆ.

**63.** ಪ್ರಧಾನಮಂತ್ರಿಯವರು 2020ರ ನವೆಂಬರ್ ನಲ್ಲಿ 3ನೇ ರೀ ಇನ್ವೆಸ್ಟ್ ಸಮ್ಮೇಳನದಲ್ಲಿ ಮಾತನಾಡಿ, ಸಮಗ್ರ ಜಲಜನಕ ಇಂಧನ ಅಭಿಯಾನ ಆರಂಭಿಸುವುದಾಗಿ ಪ್ರಕಟಿಸಿದ್ದರು. ಹಸಿರು ಇಂಧನ ಮೂಲಗಳಿಂದ ಜಲಜನಕ ಇಂಧನ ಅಭಿಯಾನವನ್ನು 2021 – 22 ರಲ್ಲಿ ಸ್ಥಾಪಿಸುವುದಾಗಿ ಇದೀಗ ಪ್ರಸ್ತಾಪಿಸುತ್ತಿದ್ದೇನೆ.

***ಬಂದರು, ಹಡಗು, ಜಲ ಮಾರ್ಗಗಳು***

**64.** ಪ್ರಮುಖ ಬಂದರುಗಳು ತಮ್ಮ ಕಾರ್ಯಾಚರಣೆಯ ಸೇವೆಗಳನ್ನು ತಾವಾಗಿಯೇ ನಿರ್ವಹಣೆ ಮಾಡುವುದರಿಂದ ಖಾಸಗಿ ಪಾಲುದಾರರು ಅದರ ಮಾದರಿಯನ್ನು ನಿರ್ವಹಿಸಲಿದ್ದಾರೆ. ಈ ಉದ್ದೇಶಕ್ಕಾಗಿ 21-22 ನೇ ಹಣಕಾಸು ವರ್ಷದಲ್ಲಿ 2000 ಕೋಟಿ ರೂ ಗೂ ಹೆಚ್ಚಿನ ಮೊತ್ತದ ಏಳು ಪ್ರಮುಖ ಯೋಜನೆಗಳನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಡಿ ಕೈಗೆತ್ತಿಕೊಳ್ಳಲಾಗುವುದು.

**65.** ಸಚಿವಾಲಯಗಳು ಮತ್ತು ಸಿಪಿಎಸ್ ಸಿ ಗಳು ಜಾಗತಿಕ ಟೆಂಡರ್ ಗಳಲ್ಲಿ ಭಾರತೀಯ ಹಡಗು ಕಂಪೆನಿಗಳಿಗೆ ಸಬ್ಸಿಡಿ ಬೆಂಬಲ ನೀಡುವ ಮೂಲಕ ಭಾರತದಲ್ಲಿ ವ್ಯಾಪಾರಿ ಹಡಗುಗಳನ್ನು ಫ್ಲ್ಯಾಗಿಂಗ್ ಮಾಡುವುದನ್ನು ಉತ್ತೇಜಿಸುವ ಯೋಜನೆಯನ್ನು ಪ್ರಾರಂಭಿಸಲಾಗುವುದು.

ಮುಂದಿನ ಐದು ವರ್ಷಗಳಿಗೆ 1,624 ಕೋಟಿ ರೂಪಾಯಿ ಒದಗಿಸಲಾಗುವುದು. ಈ ಕ್ರಮದಿಂದ ಜಾಗತಿಕ ಹಡಗು ಕಂಪೆನಿಗಳಲ್ಲಿ ಭಾರತದ ಪಾಲು ಹೆಚ್ಚಿಸುವ ಜತೆಗೆ ಕಡಲ ತೀರದವರಿಗೆ ಉತ್ತಮ ತರಬೇತಿ ಮತ್ತು ಉದ್ಯೋಗ ಅವಕಾಶಗಳು ಹೆಚ್ಚಾಗಲಿವೆ.

**66.** ಭಾರತ ಹಡಗು ಸಂಸ್ಕರಣೆ ಕಾಯ್ದೆ 2019 ಅನ್ನು ಜಾರಿಗೊಳಿಸಿದ್ದು, ಹಾಂಕಾಂಗ್ ನ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಒಪ್ಪಿಕೊಳ್ಳಲಾಗಿದೆ. ಗುಜರಾತ್ ನ ಅಲಂಗ್ ನಲ್ಲಿ 90 ಹಡಗು ಸಂಸ್ಕರಣೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಇದಕ್ಕೆ ಎಚ್.ಕೆ.ಸಿ ಅನುಸರಣೆ ಪ್ರಮಾಣಪತ್ರಗಳನ್ನು ಸಾಧಿಸಲಾಗಿದೆ. ಐರೋಪ್ಯ ರಾಷ್ಟ್ರಗಳು ಮತ್ತು ಜಪಾನ್ ನಿಂದ ಹೆಚ್ಚು ಹಡಗುಗಳನ್ನು ತರಲು ಕ್ರಮ ಕೈಗೊಳ್ಳಲಾಗಿದೆ. ಒಟ್ಟು 4.5 ದಶಲಕ್ಷ ಬೇರ್ಪಡಿಸುವ ಟನ್ ಪ್ರಮಾಣವನ್ನು 2024 ರ ವೇಳೆಗೆ ದ್ವಿಗುಣಗೊಳಿಸಲಾಗುವುದು. ಇದರಿಂದ ನಮ್ಮ ಯುವ ಸಮೂಹಕ್ಕೆ 1.5 ಲಕ್ಷ ಹೆಚ್ಚುವರಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ.

**ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ**

**67.** ಕೋವಿಡ್-19 ಲಾಕ್ ಡೌನ್ ಸಂದರ್ಭದಲ್ಲೂ ದೇಶಾದ್ಯಂತ ಅಬಾಧಿತವಾಗಿ ಇಂಧನ ಪೂರೈಕೆ ಮಾಡಲಾಗಿದೆ. ಜನರ ಜೀವನದಲ್ಲಿ ಈ ಕ್ಷೇತ್ರದ ನಿರ್ಣಾಯಕ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ಈ ಕೆಳಗಿನ ಮೂರು ಕ್ರಮಗಳನ್ನು ಘೋಷಿಸಲಾಗುತ್ತಿದೆ.
ಎ. ಉಜ್ವಲ ಯೋಜನೆಯಿಂದ 8 ಕೋಟಿ ಜನರಿಗೆ ಅನುಕೂಲವಾಗಿದ್ದು, ಇದನ್ನು ಮತ್ತೆ 1 ಕೋಟಿ ಫಲಾನುಭವಿಗಳಿಗೆ ವಿಸ್ತರಣೆ
ಬಿ. ಮುಂದಿನ ಮೂರು ವರ್ಷಗಳಲ್ಲಿ ನಗರ ಅನಿಲ ಪೂರೈಕೆ ವಿತರಣಾ ಜಾಲಕ್ಕೆ ಮತ್ತೆ 100 ಜಿಲ್ಲೆಗಳ ಸೇರ್ಪಡೆ
ಸಿ. ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರದಲ್ಲಿ ಒಂದು ಅನಿಲ ಕೊಳವೆ ಯೋಜನೆ ಕೈಗೆತ್ತಿಕೊಳ್ಳಲಾಗುವುದು.
ಡಿ. ತಾರತಮ್ಯ ರಹಿತ ಮುಕ್ತ ಪ್ರವೇಶದ ಆಧಾರದ ಮೇಲೆ ಎಲ್ಲಾ ನೈಸರ್ಗಿಕ ಕೊಳವೆಮಾರ್ಗಗಳಲ್ಲಿ ಸಾಮಾನ್ಯ ವಾಹಕ ಸಾಮರ್ಥ್ಯದಡಿ ಮುಂಗಡ ಕಾಯ್ದಿರಿಸಲು ಅನುಕೂಲ ಮತ್ತು ಸಮನ್ವಯಕ್ಕಾಗಿ ಸ್ವಾಯತ್ತ ಅನಿಲ ಸಾಗಾಣಿ ಕಾರ್ಯಾಚರಣೆ ವ್ಯವಸ್ಥೆಯನ್ನು ಸ್ಥಾಪಿಸಲಾಗುವುದು,

**ಹಣಕಾಸು ಬಂಡವಾಳ**

**68.** ಸೆಬಿ ಕಾಯ್ದೆ 1992, ಠೇವಣಿದಾರರ ಕಾಯ್ದೆ 1996, ಭದ್ರತಾ ಒಪ್ಪಂದಗಳ [ನಿಯಂತ್ರಣ] ಕಾಯ್ದೆ 1956, ಸರ್ಕಾರಿ ಭದ್ರತಾ ಕಾಯ್ದೆ 2007, ಇವುಗಳನ್ನು ಒಟ್ಟುಗೂಡಿ ಏಕ ಭದ್ರತಾ ಮಾರುಕಟ್ಟೆಗಳ ಸಂಹಿತೆಯಾಗಿಸಲು ನಾನು ಪ್ರಸ್ತಾಪಿಸುತ್ತೇನೆ.

**69.** ಜಿ.ಐ.ಎಫ್.ಟಿ – ಐ.ಎಫ್.ಎಸ್.ಸಿಯಲ್ಲಿ ವಿಶ್ವದರ್ಜಯ ಫಿನ್-ಟೆಕ್ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರ ಬೆಂಬಲ ನೀಡಲಿದೆ.

**70.** ಸಂಕಷ್ಟ ಸಂದರ್ಭದಲ್ಲಿ ಭಾಗವಹಿಸುವ ಕಾರ್ಪೋರೇಟ್ ಮಾರುಕಟ್ಟೆ ಬಾಂಡ್ ಮತ್ತು ಸಾಮಾನ್ಯವಾಗಿ ದ್ವಿತೀಯ ಮಾರುಕಟ್ಟೆ ದ್ರವ್ಯತೆ ಹೆಚ್ಚಿಸಲು ಶಾಶ್ವತ ಸಾಂಸ್ಥಿಕ ಚೌಕಟ್ಟು ಸೃಷ್ಟಿಸಲು ಪ್ರಸ್ತಾಪಿಸುತ್ತೇನೆ. ಈ ಉದ್ದೇಶಿತ ಸಂಸ್ಥೆ ಸಂಕಷ್ಟ ಮತ್ತು ಸಾಮಾನ್ಯ ಸಮಯದಲ್ಲಿ ಹೂಡಿಕೆ ದರ್ಜೆಯ ಸಾಲ ಭದ್ರತೆಗಳನ್ನು ಖರೀದಿಸುತ್ತದೆ ಮತ್ತು ಬಾಂಡ್ ಮಾರುಕಟ್ಟೆಯ ಅವೃದ್ಧಿಗೆ ಸಹಾಯ ಮಾಡುತ್ತದೆ.

**71.** 2018 – 19 ರ ಬಜೆಟ್ ನಲ್ಲಿ ಸರ್ಕಾರ ಚಿನ್ನ ವಿನಿಯಮ ನಿಯಂತ್ರಣ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರುವ ತನ್ನ ಉದ್ದೇಶವನ್ನು ಪ್ರಕಟಿಸಿತ್ತು. ಈ ಉದ್ದೇಶಕ್ಕಾಗಿ ಸೆಬಿಯನ್ನು ನಿಯಂತ್ರಕರನ್ನಾಗಿ ಮಾಡಿ ಅಧಿಸೂಚನೆ ಹೊರಡಿಸಲಾಗುವುದು ಮತ್ತು ಹೆಚ್ಚುವರಿಯಾಗಿ ವಾಲ್ಟಿಂಗ್, ಅಸ್ಸಯಿಂಗ್, ಲಾಜಿಸ್ಟಿಕ್ ಇತ್ಯಾದಿ ಒಳಗೊಂಡಂತೆ ಸರಕು ಮಾರುಕಟ್ಟೆಯ ವ್ಯವಸ್ಥೆಯನ್ನು ಸ್ಥಾಪಿಸಲು ಗೋದಾಮು ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರವನ್ನು ಬಲಗೊಳಿಸಲಾಗುವುದು.

**72.** ಹೂಡಿಕೆದಾರರ ರಕ್ಷಣೆ ದಿಸೆಯಲ್ಲಿ ಎಲ್ಲಾ ಹಣಕಾಸು ಉತ್ಪನ್ನಗಳಾದ್ಯಂತ ಎಲ್ಲಾ ಹಣಕಾಸು ಹೂಡಿಕೆದಾರರ ಹಕ್ಕಿನ ಭಾಗವಾಗಿ ಹೂಡಿಕೆದಾರರ ವಿಭಾಗವನ್ನು ಸ್ಥಾಪಿಸಲು ನಾನು ಪ್ರಸ್ತಾಪಿಸುತ್ತೇನೆ.

**73.** ಅಸಂಪ್ರದಾಯಿಕ ಇಂಧನ ವಲಯಕ್ಕೆ ಪುಷ್ಠಿ ನೀಡಲು ಭಾರತೀಯ ಸೌರ ಇಂಧನ ನಿಗಮಕ್ಕೆ 1,000 ಕೋಟಿ ರೂ ಬಂಡವಾಳ ಮತ್ತು ಭಾರತೀಯ ನವೀಕೃತ ಇಂಧನ ಅಭಿವೃದ್ಧಿ ಸಂಸ್ಥೆಗೆ 1,500 ಕೋಟಿ ರೂ ಒದಗಿಸಲಾಗುವುದು.

***ವಿಮಾ ಕ್ಷೇತ್ರದಲ್ಲಿ ಎಫ್.ಡಿ.ಐ ಹೆಚ್ಚಳ***

**74.** ವಿದೇಶಿ ನೇರ ಬಂಡವಾಳ ಹೂಡಿಕೆ ಎಫ್.ಡಿ.ಐ ಪ್ರಮಾಣವನ್ನು ಶೇ 49 ರಿಂದ ಶೇ 74 ಕ್ಕೆ ಹೆಚ್ಚಿಸಲು 1938ರ ವಿಮಾ ಕಾಯ್ದೆಗೆ ತಿದ್ದುಪಡಿ ತರಲು ನಾನು ಪ್ರಸ್ತಾಪಿಸುತ್ತೇನೆ ಮತ್ತು ವಿದೇಶಿ ಮಾಲೀಕತ್ವ ಹಾಗೂ ನಿಯಂತ್ರಣ ಕ್ರಮಗಳೊಂದಿಗೆ ರಕ್ಷಣೆ ಒದಗಿಸಲಾಗುವುದು. ಹೊಸ ಚೌಕಟ್ಟಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಂಡಳಿಯ ನಿರ್ದೇಶಕರು ಮತ್ತು ಪ್ರಮುಖ ಆಡಳಿತ ನಿರ್ವಹಣೆಯ ವ್ಯಕ್ತಿಗಳು ಭಾರತೀಯ ನಿವಾಸಿಗಳಾಗಿರುತ್ತಾರೆ. ಈ ಪೈಕಿ ಶೇ 50 ರಷ್ಟು ನಿರ್ದೇಶಕರು ಸ್ವಾತಂತ್ರ್ಯ ನಿರ್ದೇಶಕರಾಗಿರುತ್ತಾರೆ ಮತ್ತು ನಿರ್ದಿಷ್ಟ ಶೇಕಡವಾರು ಲಾಭವನ್ನು ಸಾಮಾನ್ಯ ಮೀಸಲು ಎಂದು ಉಳಿಸಿಕೊಳ್ಳಲಾಗುವುದು.

***ಆಸ್ತಿ ನಿರ್ಣಯದ ಹೊಸ ಚೌಕಟ್ಟು ರಚಿಸಲಾಗುವುದು***

**75.** ಸಾರ್ವಜನಿಕ ಬ್ಯಾಂಕ್ ಗಳಲ್ಲಿ ಸ್ವತ್ತುಗಳ ಉನ್ನತ ಮಟ್ಟದ ವ್ಯವಸ್ಥೆ ಒದಗಿಸುವಿಕೆಯಡಿ ಬ್ಯಾಂಕ್ ಪುಸ್ತಕಗಳನ್ನು ಸ್ವಚ್ಛಗೊಳಿಸುವ ಕ್ರಮಗಳನ್ನು ಬಯಸುತ್ತದೆ. ಆಸ್ತಿ ಪುನರ್ ನಿರ್ಮಾಣ ಲಿಮಿಟೆಡ್ ಕಂಪೆನಿ ಮತ್ತು ಆಸ್ತಿ ನಿರ್ವಹಣಾ ಕಂಪೆನಿಯನ್ನು ಸ್ಥಾಪಿಸಿ ಅಸ್ತಿತ್ವದಲ್ಲಿರುವ ಆಸ್ತಿಯ ಒತ್ತಡದ ಸಾಲವನ್ನು ವಸೂಲಿ ಮಾಡಲು ಮತ್ತು ಸ್ವಾಧೀನಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು. ಬಳಿಕ ಆಸ್ತಿ ಮೌಲ್ಯ ಮಾಡಿ ಪರ್ಯಾಯ ಹೂಡಿಕೆ ನಿಧಿಗಳು ಮತ್ತು ಇತರೆ ಸಾಂಭವ್ಯ ಹೂಡಿಕೆದಾರರ ಸ್ವತ್ತುಗಳ ನಿರ್ವಹಣೆಗೆ ವ್ಯವಸ್ಥೆ ಮಾಡಲಾಗುವುದು.

***ಪಿ.ಎಸ್.ಬಿ ಮರು ಬಂಡವಾಳೀಕರಣ***

**76.** ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು – ಪಿ.ಎಸ್.ಬಿಗಳ ಆರ್ಥಿಕ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸಲು 2021-22 ರಲ್ಲಿ 20,000 ಕೋಟಿ ರೂ ಮರು ಬಂಡವಾಳೀಕರಣ ಸ್ಥಾಪಿಸಲಾಗುವುದು.

***ಠೇವಣಿ ವಿಮೆ***

**77.** ಕಳೆದ ವರ್ಷ ಬ್ಯಾಂಕ್ ಗ್ರಾಹಕರಿಗೆ ಠೇವಣಿ ವಿಮಾ ರಕ್ಷಣೆಯನ್ನು 1 ಲಕ್ಷದಿಂದ 5 ಲಕ್ಷಕ್ಕೆ ಹೆಚ್ಚಿಸಲು ಸರ್ಕಾರ ಅನುಮೋದಿಸಿತ್ತು. ಈ ನಿಬಂಧನೆಗಳನ್ನು ಸುವ್ಯವಸ್ಥಿಗೊಳಿಸಲು ನಾನು ಈ ಅಧಿವೇಶನದಲ್ಲಿ ಡಿಐಸಿಜಿಐ ಕಾಯ್ದೆ 1961ಕ್ಕೆ ತಿದ್ದುಪಡಿಗಳನ್ನು ಮಂಡಿಸುತ್ತಿದ್ದೇನೆ. ಇದರಿಂದ ಬ್ಯಾಂಕ್ ಗಳು ತನ್ನ ಜವಾಬ್ದಾರಿಗಳನ್ನು ತಾತ್ಕಾಲಿಕವಾಗಿ ಪೂರೈಸಲು ಸಾಧ್ಯವಾಗದಿದ್ದಲ್ಲಿ ಅಂತಹ ಬ್ಯಾಂಕಿನ ಠೇವಣಿದಾರರು ಸುಲಭ ಮತ್ತು ಸಮಯಕ್ಕೆ ಸರಿಯಾಗಿ ಠೇವಣಿ ವಿಮಾ ರಕ್ಷಣೆ ಪಡೆಯಬಹುದು. ಇದು ಪ್ರಸ್ತುತ ಒತ್ತಡದಲ್ಲಿರುವ ಬ್ಯಾಂಕ್ ಗಳ ಠೇವಣಿದಾರರಿಗೆ ಸಹಾಯ ಮಾಡುತ್ತದೆ.

**78.** ಸಣ್ಣ ಸಾಲಗಾರರ ಹಿತಾಸಕ್ತಿ ಕಾಪಾಡಿಕೊಳ್ಳುವುದನ್ನು ಮುಂದುವರೆಸುವಾಗ ಸಾಲದ ಶಿಸ್ತು ಸುಧಾರಿಸಲು ಕನಿಷ್ಠ 100 ಕೋಟಿ ರೂ ಆಸ್ತಿ ಗಾತ್ರದ ಎನ್.ಬಿ.ಎಫ್.ಸಿಗಳಿಗೆ ಹಣಕಾಸು ಭದ್ರತೆ ಮತ್ತು ಪುನರ್ ನಿರ್ಮಾಣ, ಭದ್ರತಾ ಹಿತಾಸಕ್ತಿ [ಸರ್ಫೇಸಿ] ಕಾಯ್ದೆಯಡಿ ಸಾಲ ಮರುಪಡೆಯುವಿಕೆಗೆ ಅರ್ಹವಾದ ಕನಿಷ್ಠ ಸಾಲದ ಗಾತ್ರ ನಿಗದಿ ಮಾಡುವ 2002 ಕಾಯ್ದೆಯಡಿ ಈಗಿರುವ ಮಿತಿಯನ್ನು ಮತ್ತುಷ್ಟು ಕಡಿಮೆ ಮಾಡಲು “50 ಲಕ್ಷದಿಂದ 20 ಲಕ್ಷ ರೂಗಳಿಗೆ“ ಪ್ರಸ್ತಾಪಿಸಲಾಗಿದೆ.

*ಕಂಪೆನಿ ವಿಷಯಗಳು*

**79.** ಕಂಪೆನಿ ಕಾಯ್ದೆ 2013 ರ ಅಡಿಯಲ್ಲಿ ಕಾರ್ಯವಿಧಾನ ಮತ್ತು ತಾಂತ್ರಿಕ ಸಂಯುಕ್ತ ಅಪರಾಧ ನಿರ್ಣಯೀಕರಣ ಇದೀಗ ಪೂರ್ಣಗೊಂಡಿದೆ. ಇದೀಗ ಸೀಮಿತ ಹೊಣೆಗಾರಿಕೆ ಪಾಲುದಾರಿಕೆ [ಎಲ್.ಎಲ್.ಪಿ] ಕಾಯ್ದೆ 2008 ರ ಮುಂದಿನ ನಿರ್ಧಾರ ತೆಗೆದುಕೊಳ್ಳಲು ನಾನು ಈಗ ಪ್ರಸ್ತಾಪಿಸುತ್ತೇನೆ.

**80.** ಕಂಪೆನಿಗಳ ಕಾಯ್ದೆ 2013 ರ ಅಡಿಯಲ್ಲಿ ಕಂಪೆನಿಯ ವ್ಯಾಖ್ಯಾನವನ್ನು ಪರಿಷ್ಕರಿಸಲು ನಾನು ಸಲಹೆ ನೀಡಿದ್ದೇನೆ. ಪಾವತಿಸಿದ ಬಂಡವಾಳದ ಮಿತಿಗಳನ್ನು 50 ಲಕ್ಷ ದಿಂದ 2 ಕೋಟಿ ರೂ ಮೀರಬಾರದು. ವಹಿವಾಟು 2 ಕೋಟಿಯಿಂದ 20 ಕೋಟಿ ಮೀರಬಾರದು. ಈ ಕ್ರಮಗಳಿಂದ ಅನುಸರಣೆಗಳನ್ನು ಸರಾಗಗೊಳಿಸಲು ಸಾಧ್ಯವಾಗಲಿದ್ದು, ಸುಮಾರು 2 ಲಕ್ಷಕ್ಕೂ ಹೆಚ್ಚು ಕಂಪೆನಿಗಳಿಗೆ ಅನುಕೂಲವಾಗಲಿದೆ.

**81.** ನವೋದ್ಯಮಗಳು ಮತ್ತು ನಾವೀನ್ಯತೆ ಹೊಂದಿರುವವರಿಗೆ ನೇರವಾಗಿ ಪ್ರಯೋಜನ ನೀಡುವ ಮುಂದಿನ ಕ್ರಮವಾಗಿ ಪಾವತಿಸಿದ ಬಂಡವಾಳ ಮತ್ತು ವಹಿವಾಟಿನ ಮೇಲೆ ಯಾವುದೇ ನಿರ್ಬಂಧಗಳಿಲ್ಲದೇ ಒಪಿಸಿಗಳು ಬೆಳೆಯಲು ಅನುವು ಮಾಡಿಕೊಡುವ ಮೂಲಕ ಏಕ ವ್ಯಕ್ತಿ ಕಂಪೆನಿಗಳ [ಒ.ಪಿ.ಸಿ,] ಸಂಯೋಜನೆಯನ್ನು ಉತ್ತೇಜಿಸಲು ನಾನು ಪ್ರಸ್ತಾಪಿಸುತ್ತೇನೆ ಮತ್ತು ಅವುಗಳನ್ನು ಬೇರೆ ಯಾವುದೇ ರೀತಿಯ ಕಂಪೆನಿಯಾಗಿ ಪರಿವರ್ತಿಸಲು ಅನುವು ಮಾಡಿಕೊಡಲಾಗುವುದು. ಯಾವುದೇ ಸಮಯದಲ್ಲಿ ಭಾರತೀಯ ನಾಗರಿಕರಿಗೆ ಒಪಿಸಿ ಕಂಪನಿ ಸ್ಥಾಪಿಸಲು ಇಲ್ಲಿನ ವಾಸದ ಮಿತಿಯನ್ನು 182 ದಿನಗಳಿಂದ 120 ದಿನಗಳಿಗೆ ಇಳಿಸಲು ಮತ್ತು ಅನಿವಾಸಿ ಭಾರತೀಯರಿಗೆ [ಎನ್.ಆರ್.ಐ] ಭಾರತದಲ್ಲಿ ಒಪಿಸಿಗಳನ್ನು ಸಂಯೋಜಿಸಲು ಅವಕಾಶ ನೀಡಲಾಗುತ್ತದೆ.

**82.** ಎನ್.ಸಿ.ಎಲ್.ಟಿ ಚೌಕಟ್ಟಿನಲ್ಲಿ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಿ ನಿರ್ಣಯ ಕೈಗೊಳ್ಳುವ ವ್ಯವಸ್ಥೆಯನ್ನು ಬಲಪಡಿಸಿ ಇ-ನ್ಯಾಯಾಲಯ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಲಾಗುವುದು ಮತ್ತು ಸಾಲ ಪರಿಹಾರದ ಪರ್ಯಾಯ ವಿಧಾನಗಳು ಮತ್ತು ಸಣ್ಣ ಮಧ್ಯಮ ಉದ್ಯಮ ಎಂ.ಎಸ್.ಎಂ.ಇಗಳಿಗಾಗಿ ವಿಶೇಷ ಚೌಕಟ್ಟನ್ನು ಪರಿಚಯಿಸಲಾಗುವುದು.

**83.** 2021 -21 ರ ಸಾಲಿನಲ್ಲಿ ದತ್ತಾಂಶ ವಿಶ್ಲೇಷಣೆ, ಕೃತಕ ಬುದ್ದಿಮತ್ತೆ, ಯಂತ್ರಗಳ ಕಲಿಕೆಯ 3.0 ಆವೃತ್ತಿಯ ಎಂ.ಸಿ.ಎ21 ಜಾರಿಗೆ ಕ್ರಮ. ಈ 3.0 ಆವೃತ್ತಿಯಲ್ಲಿ ಇ-ಭದ್ರತೆ, ಇ-ತೀರ್ಪು, ಇ-ಸಲಹೆ ಮತ್ತು ಅನುಸರಣೆ ನಿರ್ವಹಣೆ ವ್ಯವಸ್ಥೆಯನ್ನು ಹೊಂದಿದೆ.

*ಬಂಡವಾಳ ಹಿಂತೆಗೆತ ಮತ್ತು ಮಾರಾಟದ ಕಾರ್ಯತಂತ್ರ*

**84.** ಕೋವಿಡ್-19 ಹಿನ್ನೆಲೆಯಲ್ಲಿ ನಾವು ಬಂಡವಾಳ ಹಿಂತೆಗೆತ ಕಾರ್ಯತಂತ್ರದೆಡೆಗೆ ಕಾರ್ಯನಿರ್ವಹಿಸುತ್ತಿದ್ದೇವೆ. ವಿಶೇಷವಾಗಿ ಬಿ.ಪಿ.ಸಿ.ಎಲ್, ಏರ್ ಇಂಡಿಯಾ, ಶಿಪ್ಪಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ, ಐಡಿಬಿಐ ಬ್ಯಾಂಕ್, ಪವನ್ ಹನ್ಸ್, ನೀಲಾಂಚಲ್ ಇಸ್ಪಾಟ್ ನಿಗಮ್ ಲಿಮಿಟೆಡ್ ಇತ್ಯಾದಿ ಕಂಪೆನಿಗಳಲ್ಲಿ 2021-22 ರಲ್ಲಿ ಬಂಡವಾಳ ಹಿಂಪಡೆಯುವ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. ಐಡಿಬಿಐ ಬ್ಯಾಂಕ್ ಹೊರತುಪಡಿಸಿದಂತೆ ಎರಡು ಬ್ಯಾಂಕಿಂಗ್ ವಲಯಗಳು ಮತ್ತು 2021 -22 ರಲ್ಲಿ ಒಂದು ಜನರಲ್ ಇನ್ಶೂರೆನ್ಸ್ ಕಂಪೆನಿಯನ್ನು ಖಾಸಗೀಕರಣ ಮಾಡಲಾಗುವುದು. ಇದಕ್ಕೆ ಅಗತ್ಯವಾಗಿರುವ ತಿದ್ದುಪಡಿಗಳನ್ನು ತರುತ್ತಿದ್ದು, ಇದೇ ಅಧಿವೇಶನದಲ್ಲಿ ತಿದ್ದುಪಡಿಗಳನ್ನು ಮಂಡಿಸಲು ನಾನು ಪ್ರಸ್ತಾಪಿಸುತ್ತಿದ್ದೇನೆ.

**85.** 2021-22 ರಲ್ಲಿ ಎಲ್.ಐ.ಸಿಯ ಐಪಿಒ ಅನ್ನು ಸಹ ತರುತ್ತಿದ್ದು, ಇದಕ್ಕಾಗಿ ಪ್ರಸಕ್ತ ಅಧಿವೇಶನದಲ್ಲಿ ನಾನು ತಿದ್ದುಪಡಿಗಳನ್ನು ತರುತ್ತಿದ್ದೇನೆ.

**86.** ಆತ್ಮನಿರ್ಭರ್ ಭಾರತ್ ಪ್ಯಾಕೇಜ್ ನಡಿ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಬಂಡವಾಳ ಹಿಂತೆಗೆತ ಕಾರ್ಯತಂತ್ರ ನೀತಿಯನ್ನು ನಾನು ಪ್ರಕಟಿಸುತ್ತಿದ್ದೇನೆ. ಈ ನೀತಿಗೆ ಸರ್ಕಾರದ ಅನುಮೋದನೆ ದೊರೆತಿದೆ ಎಂದು ಹೇಳಲು ನನಗೆ ಸಂತಸವಾಗುತ್ತದೆ. ಕಾರ್ಯತಂತ್ರ ಮತ್ತು ಕಾರ್ಯತಂತ್ರವಲ್ಲದ ವಲಯಗಳಲ್ಲಿ ಬಂಡವಾಳ ಹಿಂತೆಗೆತಕ್ಕೆ ಈ ನೀತಿ ಸ್ಪಷ್ಟ ಮಾರ್ಗನಕ್ಷೆಯನ್ನು ಒದಗಿಸುತ್ತದೆ. ನಾವು ನಾಲ್ಕು ವಲಯಗಳಲ್ಲಿ ಕಾರ್ಯತಂತ್ರವನ್ನು ಅಡಕಗೊಳಿಸುತ್ತಿದ್ದೇವೆ. ಅಲ್ಲಿ ಕನಿಷ್ಠ ಸಿಪಿಎಸ್ಇ ಅನ್ನು ನಿರ್ವಹಿಸಲಾಗುತ್ತಿದೆ ಮತ್ತು ಉಳಿದದ್ದನ್ನು ಖಾಸಗೀಕರಣಗೊಳಿಸಲಾಗುವುದು. ನೀತಿಯ ಮುಖ್ಯಾಂಶಗಳು ಅನುಬಂಧ – 111 ರಲ್ಲಿದೆ.

**87.** ಬಂಡವಾಳ ಹಿಂತೆಗೆತ ನೀತಿಯನ್ನು ತ್ವರಿತಗೊಳಿಸಲು ಮತ್ತು ಮುಂದಿನ ಹಂತದ ಬಂಡವಾಳ ಹಿಂತೆಗೆಯುವ ಕಂಪೆನಿಗಳನ್ನು ಪಟ್ಟಿಮಾಡುವಂತೆ ನಾನು ನೀತಿ ಆಯೋಗಕ್ಕೆ ಕೋರುತ್ತಿದ್ದೇನೆ.

**88.** ಇದೇ ಕಾಲಕ್ಕೆ ರಾಜ್ಯ ಸರ್ಕಾರಗಳು ತಮ್ಮಲ್ಲಿರುವ ಕಂಪೆನಿಗಳ ಪಾಲುದಾರಿಕೆ ಪಡೆದುಕೊಳ್ಳಬೇಕು. ಇದಕ್ಕಾಗಿ ರಾಜ್ಯಗಳಿಗೆ ಕೇಂದ್ರೀಯ ನಿಧಿಯಿಂದ ಪ್ರೋತ್ಸಾಹ ಪ್ಯಾಕೇಜ್ ನೀಡಲಾಗುವುದು.

**89.** ನಿಷ್ಕ್ರೀಯ ಆಸ್ತಿಗಳು ಆತ್ಮ ನಿರ್ಭರ್ ಭಾರತ್ ಗೆ ಕೊಡುಗೆ ನೀಡುವುದಿಲ್ಲ. ಪ್ರಮುಖವಲ್ಲದ ಸ್ವತ್ತುಗಳು ಹೆಚ್ಚಾಗಿ ಸರ್ಕಾರಿ ಸಚಿವಾಲಯಗಳು/ಇಲಾಖೆಗಳು ಮತ್ತು ಸಾರ್ವಜನಿಕ ವಲಯದ ಉದ್ದಿಮೆಯೊಂದಿಗೆ ಹೆಚ್ಚುವರಿ ಭೂಮಿಯನ್ನು ಒಳಗೊಂಡಿರುತ್ತದೆ. ನೇರ ಮಾರಾಟ, ರಿಯಾಯಿತಿ ದರದ ಅಥವಾ ಇಂತಹದ್ದೇ ವಿಧಾನಗಳನ್ನು ಅನುಸರಿಸಿ ಹಣ ಗಳಿಸುವ ಉದ್ದೇಶ ಹೊಂದಲಾಗಿದೆ. ಇದಕ್ಕಾಗಿ ವಿಶೇಷ ಸಾಮರ್ಥ್ಯ ಬೇಕಾಗಿದೆ ಮತ್ತು ಈ ಉದ್ದೇಶಕ್ಕಾಗಿ ವಿಶೇಷ ಉದ್ದೇಶದ ವಾಹನವನ್ನು ಬಳಸಲು ನಾನು ಪ್ರಸ್ತಾಪಿಸುತ್ತಿದ್ದು, ಈ ಚಟುವಟಿಕೆಯನ್ನು ಸಂಬಂಧಪಟ್ಟ ಕಂಪೆನಿಯೇ ಮಾಡಬೇಕು.

**90.** ನಷ್ಟಕ್ಕೊಳಗಾಗಿರುವ, ಅನಾರೋಗ್ಯಕ್ಕೀಡಾಗಿರುವ ಸಿಪಿಎಸ್ಇಗಳ ಮುಚ್ಚುವಿಕೆ ಪ್ರಕ್ರಿಯೆಯನ್ನು ಸಕಾಲಿಕವಾಗಿ ಪೂರ್ಣಗೊಳಿಸಲು ನಾವು ಪರಿಷ್ಕೃತ ಕಾರ್ಯ ವಿಧಾನವನ್ನು ಪರಿಚಯಿಸುತ್ತಿದ್ದೇವೆ. ಅಂತಹ ಘಟಕಗಳನ್ನು ಮುಚ್ಚುವುದನ್ನು ಇದು ಖಚಿತಪಡಿಸುತ್ತದೆ.

**91.** 2021-22 ರಲ್ಲಿ ಬಂಡವಾಳ ಹಿಂತೆಗೆತದಿಂದ ಅಂದಾಜು 1,75,000 ಕೋಟಿ ರೂ ನಿರೀಕ್ಷಿಸಲಾಗಿದೆ.

***ಸರ್ಕಾರದ ಹಣಕಾಸು ಸುಧಾರಣೆಗಳು***

**92.** ಖಜಾನೆ ಏಕ ಖಾತೆ [ಟಿ.ಎಸ್.ಎ] ವ್ಯವಸ್ಥೆಯಡಿಯಲ್ಲಿ ಸ್ವಾಯತ್ತ ಸಂಸ್ಥೆಗಳು ನಿಜವಾದ ಖರ್ಚಿನ ಸಮಯದಲ್ಲಿ ಸರ್ಕಾರದ ಖಾತೆಯಿಂದ ನೇರವಾಗಿ ಹಣ ಪಡೆಯುತ್ತವೆ ಮತ್ತು ಬಡ್ಡಿ ವೆಚ್ಚವನ್ನು ಉಳಿಸುತ್ತವೆ. ಸಾರ್ವತ್ರಿಕ ಅನ್ವಯಿಕತೆಗಾಗಿ 2021 – 22 ರಲ್ಲಿ ಈ ವ್ಯವಸ್ಥೆಯನ್ನು ವಿಸ್ತರಿಸುತ್ತೇವೆ.

**93.** ಹದಿನೈದನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಕೇಂದ್ರೀಯ ಪ್ರಾಯೋಜಕತ್ವ ಯೋಜನೆಗಳನ್ನು ಸುಧಾರಣೆಗೊಳಿಸಿ ಇವುಗಳ ಸಂಖ್ಯೆಯನ್ನು ಇಳಿಕೆ ಮಾಡಲಾಗುವುದು. ಉತ್ತಮ ಪರಿಣಾಮಕ್ಕಾಗಿ ಕ್ರೋಢೀಕರಣವನ್ನು ಸಶಕ್ತಗೊಳಿಸುತ್ತದೆ.

**94.** ಬಹುರಾಜ್ಯಗಳ ಸಹಕಾರ ಮತ್ತು ಅಭಿವೃದ್ಧಿ ಸಾಧಿಸಲು ಸರ್ಕಾರ ಬದ್ಧವಾಗಿದೆ ಮತ್ತು ಇದಕ್ಕಾಗಿ ಎಲ್ಲಾ ರೀತಿಯ ನೆರವು ಒದಗಿಸಲಾಗುವುದು. ಸಹಕಾರದೊಂದಿಗೆ ಸುಗಮ ವ್ಯವಹಾರ ನಡೆಸುವುದನ್ನು ಸಹಕಾರದಿಂದ ಮತ್ತಷ್ಟು ಸುವ್ಯವಸ್ಥಿತಗೊಳಿಸಲು ಪ್ರತ್ಯೇಕ ಆಡಳಿತಾತ್ಮಕ ಚೌಕಟ್ಟು ರೂಪಿಸಲಾಗುವುದು.

*3. ಮಹತ್ವಾಕಾಂಕ್ಷೆಯ ಭಾರತಕ್ಕಾಗಿ ಎಲ್ಲರನ್ನೊಳಗೊಂಡ ಅಭಿವೃದ್ಧಿ*

**95.** ಗೌರವಾನ್ವಿತ ಸಭಾಧ್ಯಕ್ಷರೆ ಈ ಆಧಾರ ಸ್ಥಂಭದಡಿ ಕೃಷಿ ಮತ್ತು ಕೃಷಿ ಸಂಬಂಧಿ ವಲಯಗಳು, ರೈತರ ಕಲ್ಯಾಣ ಮತ್ತು ಗ್ರಾಮೀಣ ಭಾರತ, ವಲಸೆ ಕಾರ್ಮಿಕರು, ಕಾರ್ಮಿಕರು ಮತ್ತು ಹಣಕಾಸು ಒಳಗೊಳ್ಳುವಿಕೆ ಅಂಶಗಳು ಬರುತ್ತವೆ.

*ಕೃಷಿ*

**96.** ನಮ್ಮ ಸರ್ಕಾರ ರೈತರ ಕಲ್ಯಾಣಕ್ಕೆ ಬದ್ಧವಾಗಿದೆ. ಕನಿಷ್ಠ ಬೆಂಬಲ ಬೆಲೆ ಎಂ.ಎಸ್.ಪಿ ಆಡಳಿತದಲ್ಲಿ ಬದಲಾವಣೆಯಾಗಿದ್ದು, ಉತ್ಪಾದಿತ ಎಲ್ಲಾ ಸರಕುಗಳಿಗೆ ಕನಿಷ್ಠ 1.5 ಪಟ್ಟು ಉತ್ಪಾದಿತ ವೆಚ್ಚ ದೊರಕುವಂತೆ ಮಾಡಲಾಗಿದೆ. ಸಂಗ್ರಹಣೆ ಕೂಡ ಸ್ಥಿತವಾದ ವೇಗದಲ್ಲಿ ಹೆಚ್ಚುತ್ತಲೇ ಇದೆ. ಇದರ ಫಲಿತಾಂಶದಿಂದ ರೈತರಿಗೆ ವೇತನ ಸುಸ್ಥಿರವಾಗಿ ದೊರೆಯುತ್ತಿದೆ. 2020-2022 ಇದು ಇನ್ನಷ್ಟು ಉತ್ತಮಗೊಂಡಿದ್ದು, ಈ ಮೊತ್ತ 75,060 ಕೋಟಿ ರೂಗೆ ಏರಿಕೆಯಾಗಿದೆ.

**97.** ಕಳೆದ 2013- 2014 ರಲ್ಲಿ ರೈತರಿಗೆ ಗೋಧಿಗೆ 33,874 ಕೋಟಿ ರೂ ನೀಡಲಾಗಿತ್ತು. ಇದು 2019-2020 ರಲ್ಲಿ 62,802 ಕೋಟಿ ರೂಗೆ ಹೆಚ್ಚಳವಾಗಿದೆ. 2019 – 2020 ರಲ್ಲಿ35.57 ಲಕ್ಷ ಗೋಧಿ ಬೆಳೆಯುವ ರೈತರಿಗೆ ಈ ಸೌಲಭ್ಯ ದೊರೆತಿದ್ದರೆ 2020-2021 ರಲ್ಲಿ 43.36 ಲಕ್ಷಕ್ಕೆ ಏರಿಕೆಯಾಗಿದೆ.

**98.** 2013 – 2014 ರಲ್ಲಿ ಭತ್ತ ಬೆಳೆಯುವ ರೈತರಿಗೆ 63,928 ಕೋಟಿ ರೂ ಪಾವತಿಸಲಾಗಿತ್ತು, ಇದು 2019-2020 ರಲ್ಲಿ 1,41,752 ಕೋಟಿ ರೂ ಗೆ ಏರಿಕೆಯಾಗಿದೆ. 2020-2021 ರಲ್ಲಿ ಇದು ಇನ್ನಷ್ಟು ವೃದ್ಧಿಸಿದ್ದು, 1,72,752 ಕೋಟಿ ರೂ ಗೆ ಏರಿಕೆಯಾಗಿದೆ. 2019- 2020 ರಲ್ಲಿ 1.24 ಕೋಟಿ ರೈತರಿಗೆ ಅನುಕೂಲವವಾಗಿದ್ದು, 2020-2021 ರಲ್ಲಿ 1.54 ಕೋಟಿ ರೈತರಿಗೆ ಲಾಭವಾಗಿದೆ.

**99.** ಇದೇ ರೀತಿ ಬೇಳೆಕಾಳು ಬೆಳೆಯುವ ರೈತರಿಗೆ 2013 – 14 ರಲ್ಲಿ 236 ಕೋಟಿ ರೂ ಪಾವತಿಸಿದ್ದು, ಇದು 2019 – 20 ರಲ್ಲಿ 8,285 ಕೋಟಿ ರೂ ಗೆ ಏರಿಕೆಯಾಗಿದೆ. 2020-2021 ರಲ್ಲಿ 10,530 ಕೋಟಿ ರೂಗೆ ಹೆಚ್ಚಳ ಕಂಡಿದೆ. 2013 – 2014 ರಿಂದ ಈ ವರೆಗೆ 40 ಪಟ್ಟು ಹೆಚ್ಚಾಗಿದೆ.

**100.** ಹತ್ತಿ ಬೆಳೆಯುವ ರೈತರಿಗೆ 2013-2014 ರಲ್ಲಿ 90 ಕೋಟಿ ರೂ ಪಾವತಿಸಿದ್ದು, [2021 ರ ಜನವರಿ 27 ರ ವರೆಗೆ ] 25,974 ಕೋಟಿ ರೂ ಪಾವತಿಸಲಾಗಿದೆ. ವಿವಿರವಾದ ಮಾಹಿತಿ ಅನುಬಂಧ 4 ರಲ್ಲಿ ನೀಡಲಾಗಿದೆ.

**101.** ಈ ವರ್ಷ ಗೌರವಾನ್ವಿತ ಪ್ರಧಾನಮಂತ್ರಿಯವರು ಸ್ವಾಮಿತ್ವ ಯೋಜನೆ ಜಾರಿಗೊಳಿಸಿದ್ದಾರೆ. ಈ ಯೋಜನೆಯಡಿ ಹಳ್ಳಿಗಳಲ್ಲಿ ಆಸ್ತಿ ಮಾಲೀಕರಿಗೆ ಆಸ್ತಿ ಹಕ್ಕುಗಳ ದಾಖಲೆಗಳನ್ನು ಒದಗಿಸಲಾಗುತ್ತಿದೆ. ಈ ವರೆಗೆ 1,241 ಹಳ್ಳಿಗಳ 1.80 ಲಕ್ಷ ಆಸ್ತಿ ಮಾಲೀಕರಿಗೆ ಆಸ್ತಿ ಹಕ್ಕುಗಳನ್ನು ಒದಗಿಸಲಾಗಿದೆ. ಈ ಯೋಜನೆಯನ್ನು 2021-22 ನೇ ಹಣಕಾಸು ವರ್ಷದಲ್ಲಿ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ವಿಸ್ತರಿಸಲಾಗುತ್ತಿದೆ.

**102.** ರೈತರಿಗೆ ಅಗತ್ಯ ಪ್ರಮಾಣದಲ್ಲಿ ಸಾಲ ಸೌಲಭ್ಯ ಒದಗಿಸುತ್ತಿದ್ದು, 2022ರ ಹಣಕಾಸು ವರ್ಷದಲ್ಲಿ ಸಾಲದ ಪ್ರಮಾಣವನ್ನು 16.5 ಲಕ್ಷ ಕೋಟಿ ರೂ ಗೆ ವಿಸ್ತರಿಸಲಾಗುವುದು. ಪಶು ಸಂಗೋಪನೆ, ಡೈರಿ ಮತ್ತು ಮೀನುಗಾರರಿಗೂ ಸಾಲ ಸೌಲಭ್ಯ ಒದಗಿಸುವುದನ್ನು ಕೇಂದ್ರೀಕರಿಸಲಾಗಿದೆ.

**103.** ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಧಿ ಮಂಜೂರಾತಿಯನ್ನು 30,000 ಕೋಟಿ ರೂ ನಿಂದ 40,000 ಕೋಟಿ ರೂ ಗೆ ಏರಿಕೆ ಮಾಡಲಾಗಿದೆ.

**104.** ನಬಾರ್ಡ್ ನಿಂದ 5,000 ಕೋಟಿ ರೂ ಮೊತ್ತದ ಸೂಕ್ಷ್ಮ ನೀರಾವರಿ ನಿಧಿ ಸ್ಥಾಪಿಸಿದ್ದು, ಈ ನಿಧಿಗೆ ಇನ್ನೂ 5,000 ಕೋಟಿ ರೂ ಸೇರ್ಪಡೆ ಮಾಡುವುದನ್ನು ನಾನು ಪ್ರಸ್ತಾಪಿಸುತ್ತೇನೆ.

**105.** ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳಲ್ಲಿ ಕೃಷಿ ಉತ್ಪನ್ನಗಳಿಗೆ ಮೌಲ್ಯ ವರ್ಧನೆಗೊಳಿಸುವ ಮತ್ತು ರಫ್ತು ಚಟುವಟಿಕೆ ನಡೆಸುವ ಆಪರೇಷನ್ ಗ್ರೀನ್ ಯೋಜನೆ ಟೊಮೊಟೋ, ಈರುಳ್ಳಿ ಮತ್ತು ಆಲೂಗೆಡ್ಡೆಗಳಿಗೆ ಅನ್ವಯವಾಗಿದ್ದು, ಇದನ್ನು 22 ಹಾಳಾಗುವ ಬೆಳೆಗಳಿಗೂ ವಿಸ್ತರಿಸಲಾಗುವುದು.

**106.** ಇ-ನ್ಯಾಮ್ ವ್ಯವಸ್ಥೆಯಡಿ ಸುಮಾರು 1.68 ಲಕ್ಷ ರೈತರು ನೋಂದಣಿಯಾಗಿದ್ದಾರೆ ಮತ್ತು 1.14 ಲಕ್ಷ ಕೋಟಿ ರೂ ಮೊತ್ತದ ವ್ಯಾಪಾರ ಮೌಲ್ಯವನ್ನು ವೃದ್ಧಿಸಲಾಗಿದೆ. ಇ-ನ್ಯಾಮ್ ವ್ಯವಸ್ಥೆಯಡಿ ಇರುವ ಪಾರದರ್ಶಕತೆ ಮತ್ತು ಸ್ಪರ್ಧಾತ್ಮಕತೆ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಇ-ನ್ಯಾಮ್ ವ್ಯವಸ್ಥೆಗೆ ಇನ್ನೂ ಹೆಚ್ಚುವರಿಯಾಗಿ 1,000 ಮಂಡಿಗಳನ್ನು ಸೇರ್ಪಡೆ ಮಾಡಲಾಗುವುದು.

**107.** ಎಪಿಎಂಸಿಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಪಡಿಸಲು ಕೃಷಿ ಮೂಲ ಸೌಕರ್ಯ ನಿಧಿ ದೊರೆಯುವಂತೆ ಮಾಡಲಾಗುವುದು.

**ಮೀನುಗಾರಿಕೆ**

**108.** ಮೀನುಗಾರಿಕೆ ಬಂದರುಗಳನ್ನು ಆಧುನೀಕರಣಗೊಳಿಸಲು ಅಗತ್ಯ ಪ್ರಮಾಣದ ಹೂಡಿಕೆಯನ್ನು ನಾನು ಪ್ರಸ್ತಾಪಿಸುತ್ತಿದ್ದೇನೆ. ಕೊಚ್ಚಿ, ಚೆನ್ನೈ, ವಿಶಾಖಪಟ್ಟಣಂ, ಪರದಿಪ್ ಮತ್ತು ಪೆಟುವಘಾಟ್ ಬಂದರುಗಳನ್ನು ಮೀನುಗಾರಿಕಾ ಬಂದರುಗಳಾಗಿ ಅಭಿವೃದ್ಧಿಪಡಿಸಿ ಮೀನು ತಂಗುದಾಣ ಕೇಂದ್ರಗಳನ್ನಾಗಿ ಮಾಡಲಾಗುವುದು ಮತ್ತು ಇವುಗಳನ್ನು ಆರ್ಥಿಕ ಚಟುವಟಿಕೆ ಕೇಂದ್ರಗಳನ್ನಾಗಿ ಮಾಡಲಾಗುವುದು. ನದಿಗಳು ಮತ್ತು ಜಲ ಮಾರ್ಗಗಳಲ್ಲಿ ಮೀನುಗಾರಿಕೆ ಬಂದರು ಮತ್ತು ಮೀನು ತಂಗುದಾಣ ಕೇಂದ್ರಗಳನ್ನು ಸ್ಥಾಪಿಸಲು ನಾನು ಪ್ರಸ್ತಾಪಿಸುತ್ತೇನೆ.

**109.** ಕಡಲ ಕಳೆ ಕೃಷಿ ಕರಾವಳಿ ಸಮುದಾಯದ ಜೀವನವನ್ನು ಪರಿವರ್ತಿಸುವ ಸಾಮರ್ಥ್ಯ ಹೊಂದಿರುವ ಉದಯೋನ್ಮುಖ ವಲಯವಾಗಿದೆ. ಈ ವಲಯ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ದೊರಕಿಸಲಿದ್ದು, ಹೆಚ್ಚುವರಿ ಆದಾಯ ದೊರಕಿಸಿಕೊಡಲಿದೆ, ನಾನು ಕಡಲ ಕಳೆ ಕೃಷಿಯನ್ನು ಉತ್ತೇಜಿಸುತ್ತಿದ್ದೇವೆ. ಬಹು ಉದ್ದೇಶಿತ ಕಡಲ ಕಳೆ ಕೃಷಿಗಾಗಿ ತಮಿಳುನಾಡಿನಲ್ಲಿ ಕಡಲ ಕಳೆ ಪಾರ್ಕ್ ಸ್ಥಾಪಿಸುವುದನ್ನು ಪ್ರಸ್ತಾಪಿಸುತ್ತಿದ್ದೇನೆ.

***ವಲಸೆ ಕೆಲಸಗಾರರು ಮತ್ತು ಕಾರ್ಮಿಕರು***

**110.** ದೇಶದ ಯಾವುದೇ ಭಾಗದಲ್ಲಿ ಫಲಾನುಭವಿಗಳು ತಮ್ಮ ಪಡಿತರ ಪಡೆಯಲು ಅನುಕೂಲ ಕಲ್ಪಿಸುವ ಉದ್ದೇಶದಿಂದ “ಒಂದು ದೇಶ – ಒಂದು ಪಡಿತರ ಚೀಟಿ” ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಈ ಕಾರ್ಯಕ್ರಮದಿಂದ ನಿರ್ದಿಷ್ಟವಾಗಿ ವಲಸೆ ಕಾರ್ಮಿಕರಿಗೆ ಅನುಕೂಲವಾಗಿದೆ. ತಮ್ಮ ಕುಟುಂಬದಿಂದ ದೂರ ಉಳಿದಿರುವವರು, ತಾವು ನೆಲೆಸಿರುವ ಸ್ಥಳಗಳಲ್ಲಿ, ಭಾಗಶಃ ತಮ್ಮ ಪಡಿತರವನ್ನು ಪಡೆಯಬಹುದಾಗಿದೆ. ಸ್ಥಳೀಯ ಪ್ರದೇಶಗಳಲ್ಲಿ ಉಳಿದಿರುವ ಅವರ ಕುಟುಂಬ ಉಳಿದ ಪಡಿತರವನ್ನು ಪಡೆಯಬಹುದಾಗಿದೆ. 32 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಂದು ದೇಶ ಒಂದು ಪಡಿತರ ಚೀಟಿ ಕಾರ್ಯಕ್ರಮ ಜಾರಿಯಾಗಿರುವುದನ್ನು ನಾನು ಸಂಸತದಿಂದ ಹೇಳುತ್ತೇನೆ. ಈ ಕಾರ್ಯಕ್ರಮದಡಿ 69 ಕೋಟಿ ಫಲಾನುಭವಿಗಳಿಗೆ ಸೌಲಭ್ಯ ದೊರೆಯುತ್ತಿದ್ದು, ಶೇ 86 ರಷ್ಟು ಫಲಾನುಭವಿಗಳನ್ನು ಇದು ಒಳಗೊಂಡಿದೆ. ಮುಂದಿನ ಕೆಲವು ತಿಂಗಳಲ್ಲಿ ಉಳಿದ 4 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಕಾರ್ಯಕ್ರಮ ಜಾರಿಯಾಗಲಿದೆ.

**111.** ನಮ್ಮ ಪ್ರಯತ್ನ ಅಸಂಘಟಿತ ಅದರಲ್ಲೂ ಪ್ರಮುಖವಾಗಿ ವಲಸೆ ಕಾರ್ಮಿಕರತ್ತ ಇದ್ದು, ದೋಣಿ ಕಾರ್ಮಿಕರು, ಕಟ್ಟಡ ಮತ್ತು ನಿರ್ಮಾಣ ಮತ್ತಿತರ ವಲಯಗಳ ಜನರ ಮಾಹಿತಿಯನ್ನು ಸಂಗ್ರಹಿಸಲು ಪೋರ್ಟಲ್ ಒಂದನ್ನು ಸ್ಥಾಪಿಸಲು ನಾನು ಪ್ರಸ್ತಾಪಿಸುತ್ತಿದ್ದೇನೆ. ಇದರಿಂದ ವಲಸೆ ಕೆಲಸಗಾರರಿಗೆ ಆರೋಗ್ಯ, ವಸತಿ, ವಿಮೆ, ಸಾಲ ಮತ್ತು ಆಹಾರ ಯೋಜನೆಗಳ ಸೌಲಭ್ಯ ದೊರಕಿಸಿಕೊಡಲು ಸಹಕಾರಿಯಾಗಲಿದೆ.

**112.** ಕಳೆದ 20 ವರ್ಷಗಳ ಹಿಂದೆ 4 ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸಲು ಆರಂಭಿಸಿದ ಪ್ರಯತ್ನವನ್ನು ನಾವು ಪೂರ್ಣಗೊಳಿಸಲು ಪ್ರಸ್ತಾಪಿಸುತ್ತಿದ್ದೇನೆ. ಜಾಗತಿಕವಾಗಿ ಮೊದಲ ಬಾರಿಗೆ ದೋಣಿ ಕೆಲಸಗಾರರು, ವೇದಿಕೆ ಕೆಲಸಗಾರರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ವಿಸ್ತರಿಸಲಾಗುತ್ತಿದೆ. ಎಲ್ಲಾ ರೀತಿಯ ಕಾರ್ಮಿಕರಿಗೆ ಕನಿಷ್ಠ ವೇತನ ಸೌಲಭ್ಯ ದೊರೆಯಲಿದ್ದು, ಇವರೆಲ್ಲರೂ ಉದ್ಯೋಗಿಗಳ ರಾಜ್ಯ ವಿಮಾ ನಿಗಮದ ಸೌಲಭ್ಯಗಳನ್ನು ಪಡೆಯಲಿದ್ದಾರೆ. ಮಹಿಳೆಯರು ಎಲ್ಲಾ ವಲಯಗಳಲ್ಲೂ ಕೆಲಸ ಮಾಡಲು ಅವಕಾಶ ಕಲ್ಪಿಸುತ್ತಿದ್ದು, ರಾತ್ರಿ ಪಾಳಿಗಳಲ್ಲಿ ಸೂಕ್ತ ಭದ್ರತೆಯೊಂದಿಗೆ ಕೆಲಸ ಮಾಡಲು ಅವಕಾಶ ಕಲ್ಪಿಸಲಾಗುತ್ತಿದೆ. ಇದೇ ಸಂದರ್ಭದಲ್ಲಿ ಏಕ ನೋಂದಣಿ, ಪರವಾನಗಿ, ಆನ್ ಲೈನ್ ರಿಟರ್ನ್ಸ್ ಗಳ ಸಲ್ಲಿಕೆಯಿಂದ ಉದ್ಯೋಗದಾರರ ಮೇಲಿನ ಅನುಸರಣೆ ಹೊರೆ ಕಡಿಮೆಯಾಗಲಿದೆ.

***ಹಣಕಾಸು ಒಳಗೊಳ್ಳುವಿಕೆ***

**113.** ಸ್ಟ್ಯಾಂಡ್ ಅಪ್ ಇಂಡಿಯಾದಡಿ ಎಸ್.ಸಿ, ಎಸ್,ಟಿ ಮತ್ತು ಮಹಿಳೆಯರಿಗೆ ಸಾಲದ ಹರಿವಿನ ಪ್ರಮಾಣ ಹೆಚ್ಚಿಸುತ್ತಿದ್ದು, ಇದೇ ಸಂದರ್ಭದಲ್ಲಿ ಅಂಚು ಹಣದ ಅಗತ್ಯವನ್ನು ಶೇ 25 ರಿಂದ ಶೇ 15ಕ್ಕೆ ಇಳಿಸಲು ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಿಗೂ ಸಹ ಸಾಲ ಸೌಲಭ್ಯ ಒದಗಿಸಲು ನಾನು ಪ್ರಸ್ತಾಪಿಸುತ್ತಿದ್ದೇನೆ.

**114.** ಸಣ್ಣ ಮತ್ತು ಮದ್ಯಮ ಉದ್ಯಮ ವಲಯ ಎಂ.ಎಸ್.ಎಂ.ಇಯನ್ನು ಬೆಂಬಲಿಸಲು ನಾವು ಹಲವಾರು ಹೆಜ್ಜೆಗಳನ್ನು ಇಟ್ಟಿದ್ದೇವೆ. ಈ ಬಜೆಟ್ ನಲ್ಲಿ ನಾನು 15,700 ಕೋಟಿ ರೂ ಒದಗಿಸುತ್ತಿದ್ದೇನೆ ಮತ್ತು ಇದು ಹಿಂದಿನ ಸಾಲಿಗೆ ಹೋಲಿಸಿದರೆ ಬಹುತೇಕ ದ್ವಿಗುಣಗೊಂಡಿದೆ.

***4. ಮಾನವ ಬಂಡವಾಳದ ಪುನರುಜ್ಜೀವನ***

**115.** ಇತ್ತೀಚೆಗೆ ಘೋಷಿಸಲಾದ ರಾಷ್ಟ್ರೀಯ ಶಿಕ್ಷಣ ನೀತಿ [ಎನ್.ಇ.ಪಿ]ಗೆ ಉತ್ತಮ ಸ್ವಾಗತ ದೊರೆತಿದೆ.

***ಶಾಲಾ ಶಿಕ್ಷಣ***

**116.** 15000 ಕ್ಕೂ ಹೆಚ್ಚು ಶಾಲೆಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಎಲ್ಲಾ ಅಂಶಗಳನ್ನು ಸೇರಿಸಿ ಗುಣಾತ್ಮಕವಾಗಿ ಬಲಪಡಿಸಲಾಗುತ್ತಿದೆ. ಇವು ತಮ್ಮ ಪ್ರದೇಶಗಳಲ್ಲಿ ಮಾದರಿ ಶಾಲೆಗಳಾಗಿ ಹೊರ ಹೊಮ್ಮುತ್ತವೆ. ನೀತಿಯ ಆದರ್ಶಗಳನ್ನು ಸಾಧಿಸಲು ಮತ್ತು ಮಾರ್ಗದರ್ಶನ ನೀಡಲು ಇದರಿಂದ ಸಹಕಾರಿಯಾಗಲಿದೆ.

**117.** ರಾಜ್ಯ ಸರ್ಕಾರಗಳು/ಖಾಸಗಿ.ಎನ್.ಜಿ.ಓಗಳ ಸಹಯೋಗದಲ್ಲಿ 100 ಸೈನಿಕ ಶಾಲೆಗಳನ್ನು ಸ್ಥಾಪಿಸಲಾಗುವುದು,

***ಉನ್ನತ ಶಿಕ್ಷಣ***

**118.** 2019-20 ನೇ ಸಾಲಿನ ಬಜೆಟ್ ನಲ್ಲಿ ಭಾರತೀಯ ಉನ್ನತ ಶಿಕ್ಷಣ ಆಯೋಗ ಬಲಪಡಿಸುವುದಾಗಿ ನಾನು ಪ್ರಸ್ತಾಪಿಸಿದ್ದೆ. ಇದನ್ನು ಜಾರಿಗೊಳಿಸಲು ಈ ಬಾರಿ ಇದಕ್ಕಾಗಿ ಶಾಸನದ ಸ್ವರೂಪ ನೀಡಲಾಗುವುದು, ಈ ಸ್ವಾಯತ್ತ ಸಂಸ್ಥೆ ಪ್ರಾಮಾಣಿತ ಸ್ಥಾಪನೆ, ಮಾನ್ಯತೆ, ನಿಯಂತ್ರಣ ಮತ್ತು ಧನ ಸಹಾಯದಂತಹ 4 ಪ್ರತ್ಯೇಕ ವಾಹನಗಳನ್ನು ಇದು ಹೊಂದಲಿದೆ.

**119.** ಕೇಂದ್ರ ಸರ್ಕಾರದ ಬೆಂಬಲದೊಂದಿಗೆ ನಮ್ಮ ಬಹುತೇಕ ನಗರಗಳು ಸಂಶೋಧನಾ ಸಂಸ್ಥೆಗಳು, ವಿಶ್ವ ವಿದ್ಯಾಲಯಗಳು ಮತ್ತು ಕಾಲೇಜುಗಳನ್ನು ಹೊಂದಿದೆ. ಉದಾಹರಣೆಗೆ ಹೈದರಾಬಾದ್ ನಲ್ಲಿ ಇಂತಹ 40 ಸಂಸ್ಥೆಗಳಿವೆ. ಇಂತಹ 9 ನಗರಗಳಲ್ಲಿ ನಾವು ಔಪಚಾರಿಕವಾಗಿ ಒಂದೇ ರೀತಿಯ ಚೌಕಟ್ಟು ಒದಗಿಸಿದ್ದು, ಇಂತಹ ಸಂಸ್ಥೆಗಳು ಉತ್ತಮ ಸೀನರ್ಜಿ ಹೊಂದಿದ್ದು, ಆಂತರಿಕ ಸ್ವಾಯತ್ತತೆ ಪಡೆಯುಲಿವೆ. ಈ ಉದ್ದೇಶಕ್ಕಾಗಿ ಅಂಟು ಅನುದಾನವನ್ನು ಒದಗಿಸಲಾಗಿದೆ.

**120.** ಲಡಾಖ್ ನಲ್ಲಿ ಉನ್ನತ ಶಿಕ್ಷಣ ಕೈಗೆಟುಕುವಂತೆ ಮಾಡಲು ಲೇಹ್ ನಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪಿಸಲು ನಾನು ಪ್ರಸ್ತಾಪಿಸುತ್ತಿದ್ದೇನೆ.

**121.** ರಾಷ್ಟ್ರೀಯ ಶಿಕ್ಷಣ ನೀತಿ [ಎನ್.ಇ.ಪಿ]ಯಡಿ ಇತರೆ ಪ್ರಮುಖ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು, ಅನುಬಂಧ 5 ರಲ್ಲಿ ಮಾಹಿತಿ ನೀಡಲಾಗಿದೆ.

***ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಡಗಳ ಕಲ್ಯಾಣ***

**122.** ಬುಡಕಟ್ಟು ಪ್ರದೇಶಗಳಲ್ಲಿ ನಾವು 750 ಏಕಲವ್ಯ ಮಾದರಿಯ ವಸತಿ ಶಾಲೆಗಳನ್ನು ಸ್ಥಾಪಿಸುವ ಗುರಿ ಹೊಂದಿದ್ದೇವೆ. ಪ್ರತಿಯೊಂದು ಶಾಲೆಯ ಘಟಕಕ್ಕೆ 20 ರಿಂದ 38 ಕೋಟಿ ರೂ ವೆಚ್ಚ ಮಾಡಲಾಗುವುದು ಮತ್ತು ಬುಡಕಟ್ಟು ಮತ್ತು ಕುಗ್ಗಾಡು ಪ್ರದೇಶಗಳಲ್ಲಿ ಈ ವೆಚ್ಚ 48 ಕೋಟಿ ರೂ. ಗೆ ಏರಿಕೆಯಾಗಲಿದೆ. ಇದರಿಂದ  ನಮ್ಮ ಬುಡಕಟ್ಟು ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯ ಸೌಲಭ್ಯಗಳನ್ನು ಒದಗಿಸಲು ಸಹಾಯವಾಗಲಿದೆ.

**123.** ಪರಿಶಿಷ್ಟ ಜಾತಿಗಳ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಪರಿಷ್ಕರಿಸಲಾಗಿದೆ. ಈ ದಿಸೆಯಲ್ಲಿ ಕೇಂದ್ರೀಯ ನೆರವನ್ನು ಸಹ ನಾನು ಹೆಚ್ಚಿಸುತ್ತಿದ್ದೇನೆ. ಮುಂದಿನ 6 ವರ್ಷಗಳಿಗೆ ಅಂದರೆ 2025-26 ನೇ ಸಾಲಿನವರೆಗೆ ಆರು ವರ್ಷಗಳ ಅವಧಿಗೆ 35,219 ಕೋಟಿ ರೂ ಒದಗಿಸುತ್ತಿದ್ದು, ಇದರಿಂದ 4 ಕೋಟಿ ಎಸ್.ಸಿ. ಸಮುದಾಯದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.

**ಕೌಶಲ್ಯ**

**124.** ಕಳೆದ 2016 ರಲ್ಲಿ ನಾವು ರಾಷ್ಟ್ರೀಯ ಅಪ್ರೆಂಟಿಶಿಪ್ ಯೋಜನೆಯನ್ನು ಜಾರಿಗೊಳಿಸಿದ್ದೇವೆ. ಅಪ್ರೆಂಟಿಶಿಪ್ ಕಾಯ್ದೆಗೆ ಸರ್ಕಾರ ತಿದ್ದುಪಡಿಯನ್ನು ಪ್ರಸ್ತಾಪಿಸುತ್ತಿದ್ದು, ಇದರಿಂದ ನಮ್ಮ ಯುವ ಸಮೂಹಕ್ಕೆ ಅಪ್ರೆಂಟಿಶಿಪ್ ಅವಕಾಶಗಳನ್ನು ಹೆಚ್ಚಿಸಲು ಸಹಕಾರಿಯಾಗಲಿದೆ. ಹಾಲಿ ಇರುವ ಅಪ್ರೆಂಟಿಶಿಪ್ ಯೋಜನೆ [ಎನ್.ಎ.ಟಿ.ಎಸ್] ನಡಿ ಶಿಕ್ಷಣೋತ್ತರ ಅಪ್ರೆಂಟಿಶಿಪ್ ಸೌಲಭ್ಯವನ್ನು ಕಲ್ಪಿಸುತ್ತದೆ. ಇಂಜಿನಿಯರಿಂಗ್ ನಲ್ಲಿ ಪದವೀದರರು ಮತ್ತು ಡಿಪ್ಲಮೋ ಪಡೆದವರಿಗೆ ಅಪ್ರೆಂಟಿಶಿಪ್ ಒದಗಿಸಲಿದ್ದು, ಇದಕ್ಕಾಗಿ 3000 ಕೋಟಿ ರೂ ಒದಗಿಸಲಾಗುತ್ತಿದೆ.

**125.** ಸಂಯುಕ್ತ ಅರಬ್ ಒಕ್ಕುಟ [ಯು.ಎ.ಇ] ದೇಶದ ಸಹಭಾಗಿತ್ವದಡಿ ಕೌಶಲ್ಯ ಅರ್ಹತೆ, ಪ್ರಮಾಣಪತ್ರ ನೀಡುವ ಕೆಲಸ ಪ್ರಗತಿಯಲ್ಲಿದ್ದು, ಕೆಲಸದ ಶಕ್ತಿ ವಲಯಕ್ಕೆ ಇದರಿಂದ ಹೆಚ್ಚಿನ ರೀತಿಯಲ್ಲಿ ಸಹಕಾರಿಯಾಗಲಿದೆ. ನಾವು ಸಹಭಾಗಿತ್ವದೊಂದಿಗೆ ತರಬೇತಿ ಮತ್ತು ಅಂತರ್ ತರಬೇತಿ ಕಾರ್ಯಕ್ರಮ [ಟಿಐಟಿಪಿ] ಜಾರಿಗೊಳಿಸುತ್ತಿದ್ದೇವೆ. ಭಾರತ – ಜಪಾನ್ ನಡುವೆ ಜಪಾನ್ ನ ಕೈಗಾರಿಕೆ ಮತ್ತು ವೃತ್ತಿ ತರಬೇತಿ, ತಾಂತ್ರಿಕ ಕೌಶಲ್ಯ, ಜ್ಞಾನ ವರ್ಗಾವಣೆಗೆ ಕ್ರಮ ಕೈಗೊಳ್ಳಲಾಗಿದೆ. ಇಂತಹ ಕ್ರಮಗಳನ್ನು ಇನ್ನು ಹಲವು ದೇಶಗಳೊಂದಿಗೆ ಮುಂದುವರೆಸಲು ನಾವು ಮುಂದಾಗಿದ್ದೇವೆ.

*5. ನಾವೀನ್ಯತೆ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ*

**126.** ಕಳೆದ 2019ರ ಬಜೆಟ್ ಭಾಷಣದಲ್ಲಿ ರಾಷ್ಟ್ರೀಯ ಸಂಶೋಧನಾ ಸಂಸ್ಥೆ ಸ್ಥಾಪಿಸುವುದಾಗಿ ಘೋಷಿಸಿದ್ದೆ. ನಾವೀಗ ಇದರ ಕಾರ್ಯವಿಧಾನಗವನ್ನು ಸಿದ್ಧಪಡಿಸಿದ್ದು, ಮುಂದಿನ ಐದು ವರ್ಷಗಳಲ್ಲಿ ಎನ್.ಆರ್.ಎಫ್ 50,000 ಕೋಟಿ ರೂ ವೆಚ್ಚದಲ್ಲಿ ಸ್ಥಾಪನೆ ಮಾಡಲಾಗುತ್ತಿದೆ. ಇದು ದೇಶಕ್ಕೆ ಅಗತ್ಯವಾಗಿರುವ ಸಮಗ್ರ ಸಂಶೋಧನಾ ಪರಿಸರ ವ್ಯವಸ್ಥೆ ಹೊಂದಲಿದ್ದು, ರಾಷ್ಟ್ರೀಯ ಆದ್ಯತೆಯ ನಂಬಿಕಾ ವಲಯವನ್ನು ಇದು ಕೇಂದ್ರೀಕರಿಸಿ ಕಾರ್ಯನಿರ್ವಹಿಸಲಿದೆ.

**127.** ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ಪಾವತಿ ಹಲವು ಪಟ್ಟು ಹೆಚ್ಚಾಗಿದೆ. ಡಿಜಿಟಲ್ ವಹಿವಾಟಿಗೆ ಮತ್ತಷ್ಟು ಪುಷ್ಠಿ ನೀಡಲು 1,500 ಕೋಟಿ ರೂ ಮೊತ್ತದ ಉತ್ತೇಜನವನ್ನು ಪ್ರಸ್ತಾಪಿಸುತ್ತಿದ್ದೇನೆ. ಡಿಜಿಟಲ್ ಮಾದರಿಯ ಪಾವತಿಯನ್ನು ಇದು ಉತ್ತೇಜಿಸಲಿದೆ.

**128.** ನಾವು ಹೊಸ ಕ್ರಮವೊಂದನ್ನು ಕೈಗೆತ್ತಿಕೊಂಡಿದ್ದು, ರಾಷ್ಟ್ರೀಯ ಭಾಷಾ ಅನುವಾದ ಅಭಿಯಾನ [ಎನ್.ಟಿ.ಎಲ್.ಎಂ] ಸ್ಥಾಪಿಸುತ್ತಿದ್ದೇವೆ. ಅಂತರ್ಜಾಲದಲ್ಲಿ ಆಡಳಿತ ಮತ್ತು ನೀತಿ ಜ್ಞಾನದ ಸಂಪತ್ತನ್ನು ಪ್ರಮುಖ ಭಾರತೀಯ ಭಾಷೆಗಳಲ್ಲಿ ಲಭ್ಯವಾಗುವಂತೆ ಮಾಡಲಿದೆ.

**129.** ಬಾಹ್ಯಾಕಾಶ ಇಲಾಖೆಯ ಸಾರ್ವಜನಿಕ ಉದ್ದಿಮೆಯಯಾದ ಹೊಸ ಭಾರತೀಯ ಬಾಹ್ಯಾಕಾಶ ಲಿಮಿಟೆಡ್ ಸಂಸ್ತೆ [ಎನ್.ಎಸ್.ಐ.ಎಲ್] ಪಿ.ಎಸ್.ಎಲ್.ವಿ-ಸಿ.ಎಸ್51 ಅನ್ನು ಉಡಾವಣೆ ಮಾಡಲಿದೆ. ಬ್ರಿಜ಼ಿಲ್ ನ ಅಮೆಜಾನ್ ಬಾಹ್ಯಾಕಾಶ ಕೇಂದ್ರದಿಂದ ಇದು ಹಲವು ಭಾರತೀಯ ಉಪಗ್ರಹಗಳನ್ನು ಸಹ ನಭೋಮಂಡಲಕ್ಕೆ ಹೊತ್ತೊಯ್ಯಲಿದೆ.

**130.** ಗಗನ್ಯಾನ್ ಅಭಿಯಾನದ ಚಟುವಟಿಕೆಯ ಭಾಗವಾಗಿ ನಾಲ್ವರು ಭಾರತೀಯ ಗಗನ ಯಾತ್ರಿಗಳಿಗೆ ರಷ್ಯಾದ ಜೆನರಿಕ್ ಬಾಹ್ಯಾಕಾಶ ಹಾರಾಟದ ಬಗ್ಗೆ ತರಬೇತಿ ನೀಡಲಾಗುತ್ತಿದೆ. ಮೊದಲ ಮಾನವ ರಹಿತ ಉಡಾವಣೆಯನ್ನು 2021ರ ಡಿಸೆಂಬರ್ ಗೆ ನಿಗದಿಮಾಡಲಾಗಿದೆ.

**131.** ನಮ್ಮ ಸಮುದ್ರ ಜೀವಿಗಳು ಮತ್ತು ಜೀವಿಗಳಲ್ಲದವರ ಸಂಗ್ರಹದ ಮನೆಗಳಾಗಿವೆ. ಈ ಹಿನ್ನೆಲೆಯಲ್ಲಿ ಮುಂದಿನ ಐದು ವರ್ಷಗಳಿಗೆ ಅನ್ವಯವಾಗುವಂತೆ 4,000 ಕೋಟಿ ರೂ ವೆಚ್ಚದ ಆಳ ಸಮುದ್ರ ಅಭಿಯಾನ ಆರಂಭಿಸಲಾಗುವುದು. ಈ ಅಭಿಯಾನದಡಿ ಸಮುದ್ರದ ಆಳದಲ್ಲಿ ಪರಿಶೋಧನೆ ನಡೆಸಿ ಆಳ ಸಮುದ್ರದ ಜೈವಿಕ ವೈವಿಧ್ಯತೆ ಸಂರಕ್ಷಣೆಯ ಯೋಜನೆಗಳನ್ನು ಈ ಅಭಿಯಾನ ಒಳಗೊಂಡಿದೆ.

*6. ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ*

**132.** ಸನ್ಮಾನ್ಯ ಸಭಾಧ್ಯಕ್ಷರೇ ನಾನು ಈಗ ಆರು ಆಧಾರ ಸ್ಥಂಭಗಳ ಪೈಕಿ ಕೊನೆಯ ಆಧಾರ ಸ್ಥಂಭಕ್ಕೆ ಬರುತ್ತಿದ್ದೇವೆ. ಇದು ನಮ್ಮ ಅತ್ಯಂತ ಪ್ರಮುಖ ಸಿದ್ಧಾಂತವಾದ ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತಕ್ಕೆ ಸಂಬಂಧಿಸಿದ ಕ್ರಮವಾಗಿದೆ.

**133.** ಕಳೆದ ಕೆಲವು ವರ್ಷಗಳಲ್ಲಿ ಹಲವಾರು ಸುಧಾರಣೆಗಳನ್ನು ತಂದಿದ್ದು, ನ್ಯಾಯಾಧೀಕರಣದಲ್ಲಿ ನ್ಯಾಯದಾನ ವ್ಯವಸ್ಥೆ ತ್ವರಿತಗೊಂಡಿದೆ. ಈ ಸುಧಾರಣಾ ಪ್ರಕ್ರಿಯೆಯನ್ನು ಮುಂದುವರೆಸುತ್ತಾ, ನ್ಯಾಯಮಂಡಳಿಗಳ ಕಾರ್ಯನಿರ್ವಹಣೆಯನ್ನು ತರ್ಕಬದ್ಧಗೊಳಿಸಲು ಮುಂದಿನ ಕ್ರಮಗಳನ್ನು ನಾನು ಪ್ರಸ್ತಾಪಿಸುತ್ತಿದ್ದೇನೆ.

**134.** 56 ಆರೋಗ್ಯಕ್ಕೆ ಸಂಬಂಧಿಸಿದ ವೃತ್ತಿಗಳ ಪರಿಣಾಮಕಾರಿ ನಿಯಂತ್ರಣ ಮತ್ತು ಪಾರದರ್ಶಕತೆ ತರುವ ಸಂಬಂಧ ಸಂಸತ್ತಿನಲ್ಲಿ ನಾವು ಆರೋಗ್ಯ ಸಂಬಂಧಿ ವೃತ್ತಿಪರರ ರಾಷ್ಟ್ರೀಯ ಆಯೋಗ ಸ್ಥಾಪಿಸುವ ಮಸೂದೆಯನ್ನು ಮಂಡಿಸಿದ್ದೇವೆ. ಇದರ ಜತೆಗೆ ಹೆಚ್ಚುವರಿಯಾಗಿ ನರ್ಸಿಂಗ್ ವೃತ್ತಿಪರತೆಯಲ್ಲಿ ಪರಿಣಾಮಕಾರಿ, ಪಾರದರ್ಶಕತೆ ತರಲು ರಾಷ್ಟ್ರೀಯ ದಾದಿಯರ ಮತ್ತು ಮಿಡ್ ವೈಫರಿ ಆಯೋಗ ಸ್ಥಾಪಿಸುವ ಮಸೂದೆಯನ್ನು ಸರ್ಕಾರ ಮಂಡಿಸಲಿದೆ.

**135.** ಸರ್ಕಾರ ಅಥವಾ ಸಿ.ಪಿ.ಎಸ್.ಇ ಮತ್ತು ಗುತ್ತಿಗೆಗಳಲ್ಲಿ ಸುಗಮ ವ್ಯವಹಾರ ನಡೆಸುವ ಸಂಬಂಧ ರಾಜೀ ಸಂಧಾನ ವ್ಯವಸ್ಥೆಯನ್ನು ಸ್ಥಾಪಿಸಲು ಪ್ರಸ್ತಾಪಿಸುತ್ತೇನೆ ಮತ್ತು ಒಪ್ಪಂದದ ವಿವಾದಗಳನ್ನು ತ್ವರಿತವಾಗಿ ಬಗೆಹರಿಸಲು, ಅದರ ಬಳಕೆಯನ್ನು ಕಡ್ಡಾಯಗೊಳಿಸುತ್ತೇವೆ. ಇದು ಖಾಸಗಿ ಹೂಡಿಕೆದಾರರು ಮತ್ತು ಗುತ್ತಿಗೆದಾರರಲ್ಲಿ ವಿಶ್ವಾಸ ಮೂಡಿಸುತ್ತದೆ.

**136.** ಮುಂಬರುವ ಜನಗಣತಿ ದೇಶದ ಮೊದಲ ಡಿಜಿಟಲ್ ಜನಗಣತಿಯಾಗಿ ಇತಿಹಾಸದಲ್ಲಿ ದಾಖಲಾಗಲಿದೆ. ಇಂತಹ ನೆನಪಿನಲ್ಲಿ ಉಳಿಯುವ ಮತ್ತು ಮೈಲುಗಲ್ಲು ಸ್ಥಾಪಿಸುವ ಈ ಕಾರ್ಯಕ್ಕೆ 3,768 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇನೆ.

**137.** ಗೋವಾ ರಾಜ್ಯ ಪೋರ್ಚುಗೀಸರ ಆಡಳಿತದಿಂದ ಮುಕ್ತವಾದ ನೆನಪಿನ ವಜ್ರ ಮಹೋತ್ಸವ ಆಚರಿಸುತ್ತಿದೆ. ಗೋವಾದಲ್ಲಿ ಈ ಕಾರ್ಯಕ್ರಮ ಆಚರಿಸಲು ಕೇಂದ್ರ ಸರ್ಕಾರದಿಂದ 300 ಕೋಟಿ ರೂ ನೀಡಲು ನಾನು ಪ್ರಸ್ತಾಪಿಸುತ್ತಿದ್ದೇನೆ.

**138.** ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಚಹಾ ಕಾರ್ಮಿಕರು ಮತ್ತು, ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳ ಕಲ್ಯಾಣಕ್ಕಾಗಿ ನಾನು 1,000 ಕೋಟಿ ರೂ ನೀಡಲು ಪ್ರಸ್ತಾಪಿಸುತ್ತಿದ್ದು, ಈ ಮೊತ್ತದಡಿ ವಿಶೇಷ ಕಾರ್ಯಕ್ರಮ ಜಾರಿಗೊಳಿಸಲು ಸಲಹೆ ನೀಡುತ್ತಿದ್ದೇನೆ.

**ಆರ್ಥಿಕ ಪರಿಸ್ಥಿತಿ**

**139.** ಭಾಗ 1 ರ ನನ್ನ ಭಾಷಣದ ಮೊದಲ ಕೆಲವು ಪ್ಯಾರಾಗಳಲ್ಲಿ ನಾನು ಪ್ರಸ್ತಾಪಿರುವ ಕೆಲವು ಅಂಶಗಳ ಬಗ್ಗೆ ಸದನದ ಗಮನ ಸೆಳೆಯಲು ಬಯಸುತ್ತೇನೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಕೊರೋನಾ ಸಂಕ್ರಾಮಿಕದಿಂದಾಗಿ ಆದಾಯ ಸಂಗ್ರಹಣೆ ದುರ್ಬಲಗೊಂಡಿದೆ. ಇದರಿಂದಾಗಿ ಎಸ್.ಎಸ್, ಎಸ್.ಟಿ. ಮಹಿಳೆಯರು, ದುರ್ಬಲ ವರ್ಗದವರಿಗಾಗಿ ಹೆಚ್ಚು ವೆಚ್ಚ ಮಾಡುವ ಅಗತ್ಯ ಎದುರಾಗಿದೆ.

**140.** ಇತರೆ ಕೆಲವು ದೇಶಗಳಿಗಿಂತ ಭಿನ್ನವಾಗಿ ಸಾಂಕ್ರಾಮಿಕದ ಸಮಯದಲ್ಲಿ ನಾವು ಮಧ್ಯಮ ಗಾತ್ರದ ಸರಣಿ ಪ್ಯಾಕೇಜ್ ಗಳನ್ನು ಆಯ್ಕೆ ಮಾಡಿಕೊಂಡೆವು. ಇದರಿಂದ ನಾವು ವಿಕಸಿಸುತ್ತಿರುವ ಪರಿಸ್ಥಿತಿಗೆ ಅನುಗುಣವಾಗಿ ನಮ್ಮ ಪ್ರತಿಕ್ರಿಯೆಯ ಮಾಪನಾಂಕವನ್ನು ನಿರ್ಣಯಿಸಲು ಸಹಕಾರಿಯಾಗಿದೆ. ಒಮ್ಮೆ ಆರೋಗ್ಯ ಪರಿಸ್ಥಿತಿ ಸುಧಾರಿಸಿದ ಮತ್ತು ಲಾಕ್ ಡೌನ್ ಪರಿಸ್ಥಿತಿ ಮುಕ್ತಗೊಂಡ ನಂತರ ದೇಶೀಯ ಬೇಡಿಕೆಗಳನ್ನು ಈಡೇರಿಸಲು ನಾವು ವೆಚ್ಚವನ್ನು ಹೆಚ್ಚಿಸಿದೆವು. 2020ರ ಸಾಲಿನಲ್ಲಿ 30.40 ಲಕ್ಷ ಕೋಟಿ ರೂ ವಾಸ್ತವ ವೆಚ್ಚವಾಗಿದ್ದು, 2021 ರಲ್ಲಿ 34.50 ಲಕ್ಷ ಕೋಟಿ ರೂ ವೆಚ್ಚ ಮಾಡಿದ್ದೇವೆ. ಬಂಡವಾಳ ವೆಚ್ಚ ಹಿಂದಿನ ವರ್ಷ 4.12 ಲಕ್ಷ ಕೋಟಿ ರೂ ಇದ್ದು, ಇದು 4.39 ಲಕ್ಷ ಕೋಟಿ ರೂಗೆ ಏರಿಕೆಯಾಗಿದೆ.

**141.** 2020-21 ರ ಸಾಲಿನಲ್ಲಿ ವಿತ್ತೀಯ ಕೊರತೆ ಜಿಡಿಪಿಯ ಶೇ 9.5 ರಷ್ಟಿತ್ತು. ಇದನ್ನು ಸರ್ಕಾರದ ಸಾಲ, ಬಹು ಹಂತದ ಸಾಲ, ಸಣ್ಣ ಉಳಿತಾಯ ನಿಧಿ ಮತ್ತು ಅಲ್ಪಾವಧಿ ಸಾಲದ ಮೂಲಕ ಭರಿಸಿದ್ದೇವೆ. ಮುಂದಿನ ಎರಡು ತಿಂಗಳ ಅವಧಿಗೆ ನಮಗೆ ಇನ್ನೂ 80 ಸಾವಿರ ಕೋಟಿ ರೂ ಅಗತ್ಯವಾಗಿದೆ. ಆರ್ಥಿಕತೆಗೆ ಪುಷ್ಠಿ ನೀಡುತ್ತಿದ್ದು, 2021-22 ರ ಸಾಲಿನಲ್ಲಿ ವೆಚ್ಚದ ಮೊತ್ತ 34.83 ಲಕ್ಷ ಕೋಟಿ ರೂ ಆಗುವ ನಿರೀಕ್ಷೆಯಿದೆ, ಇದರಲ್ಲಿ 5.54 ಲಕ್ಷ ಕೋಟಿ ರೂ ಬಂಡವಾಳ ವೆಚ್ಚ ಸೇರಿದೆ. 2020-21 ರ ಸಾಲಿಗೆ ಹೋಲಿಸಿರೆ ಶೇ 34.5 ರಷ್ಟು ಹಚ್ಚಳವಾಗಿದೆ. 2021- 2022 ರಲ್ಲಿ ವಿತ್ತೀಯ ಕೊರತೆ ಜಿಡಿಪಿಯ ಶೇ 6,8 ರಷ್ಟು ಆಗುವ ನಿರೀಕ್ಷೆಯಿದೆ, ಮಾರುಕಟ್ಟೆಗಳಿಂದ ನಿವ್ವಳ ಸಾಲ 12 ಲಕ್ಷ ಕೋಟಿ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಮುಂದಿನ 2025- 2026 ರ ವೇಳೆಗೆ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 4.5 ಕ್ಕೆ ತಗ್ಗಿಸುವ ಗುರಿ ಹೊಂದಲಾಗಿದೆ. ಮೊದಲಿಗೆ ನಾವು ಆರ್ಥಿಕ ಬಲವರ್ಧನೆ ಸಾಧಿಸಲು ಬಯಸುತ್ತೇವೆ. ಸುಧಾರಿತ ಅನುಸರಣೆ ಮೂಲಕ ತೆರಿಗೆ ಆದಾಯವನ್ನು ಹೆಚ್ಚಿಸುವ, ಸಾರ್ವಜನಿಕ ಉದ್ಯಮಗಳು, ಭೂಮಿ ಮತ್ತಿತರ ಸ್ವತ್ತುಗಳ ಮೂಲಕ ವೃದ್ಧಿಸಲು ಉದ್ದೇಶಿಸಲಾಗಿದೆ. ದೇಶದ ಸಂಚಿತ ನಿಧಿಯನ್ನು 500 ಕೋಟಿ ರೂ ನಿಂದ 30,000 ಕೋಟಿ ರೂ ಗೆ ಏರಿಸಲು ಹಣಕಾಸು ಮಸೂದೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**142.** 15 ನೇ ಹಣಕಾಸು ಆಯೋಗದಂತೆ 2021-22 ನೇ ಸಾಲಿನಲ್ಲಿ ರಾಜ್ಯಗಳಿಗೆ ಸಾಲ ಪಡೆಯುವ ಪ್ರಮಾಣವನ್ನು ಜಿ.ಎಸ್.ಡಿ.ಪಿಯ ಒಟ್ಟಾರೆ ಶೇ 4 ರಷ್ಟು ಸಾಮಾನ್ಯ ಮಿತಿ ನಿಗದಿಪಡಿಸಲಾಗಿದೆ. ಷರತ್ತುಗಳಿಗೆ ಒಳಪಟ್ಟು ಜಿ.ಎಸ್.ಡಿ.ಪಿಯ 0.5 ರಷ್ಟು ಹೆಚ್ಚುವರಿ ಸಾಲ ಪಡೆಯಲು ಸಹ ಅವಕಾಶ ನೀಡಲಾಗುತ್ತಿದೆ. 2023-24 ರ ಹಣಕಾಸು ವರ್ಷದ ವೇಳೆಗೆ ರಾಜ್ಯಗಳು ವಿತ್ತೀಯ ಕೊರತೆಯನ್ನು ಜಿ.ಎಸ್.ಡಿ.ಪಿಯ ಶೇ 3 ರ ಒಳಗೆ ಇರಬೇಕೆಂದು 15 ನೇ ಹಣಕಾಸು ಆಯೋಗ ಸಲಹೆ ಮಾಡಿದೆ.

**143.** 2019 – 20 ನೇ ಸಾಲಿನ ಬಜೆಟ್ ನಲ್ಲಿ 27 ಹೊಸ ಬಜೆಟ್ ಸಂಪನ್ಮೂಲಗಳನ್ನು ಪ್ರಸ್ತಾಪಿಸಿ

ಪ್ರಸ್ತಾಪಿಸಿದ್ದೆ. ಇದರಲ್ಲಿ ಸರ್ಕಾರಿ ಸಂಸ್ಥೆಗಳಿಂದ ಸಾಲ, ಕೇಂದ್ರ ಸರ್ಕಾರದ ಯೋಜನೆಗಳಿಗೆ ನೆರವು ಮತ್ತು ಮರು ಪಾವತಿಯ ಹೊರೆಯೂ ಸಹ ಸರ್ಕಾರದ ಮೇಲೆ ಇತ್ತು. 2020 – 2021 ರ ಬಜೆಟ್ ನಲ್ಲಿ ಎಫ್.ಸಿ.ಐಗೆ ಸರ್ಕಾರ ಒದಗಿಸಿದ ಸಾಲಗಳನ್ನು ಸೇರಿಸುವ ಮೂಲಕ ನಾನು ನನ್ನ ಹೇಳಿಕೆಯ ವ್ಯಾಪ್ತಿ ಮತ್ತು ಮಹತ್ವವನ್ನು ಹೆಚ್ಚಿಸಿದ್ದೇನೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆಹಾರ ಸಬ್ಸಿಡಿಗಾಗಿ ಎನ್.ಎಸ್.ಎಸ್.ಎಫ್ ಸಾಲಗಳನ್ನು ಎಫ್.ಸಿ.ಐಗೆ ನಿಲ್ಲಿಸಲು ಸಲಹೆ ನೀಡುತ್ತೇನೆ ಮತ್ತು 2020-21 ಮತ್ತು 2021-22 ರ ಬಜೆಟ್ ನಿಬಂಧನೆಗಳನ್ನು ಮಾಡಲಾಗಿದೆ. ಹೆಚ್ಚುವರಿ ಬಜೆಟ್ ಸಂಪನ್ಮೂಲಗಳ ವಿವರಗಳನ್ನು ಅನುಬಂಧ 6 ರಲ್ಲಿ ಒದಗಿಸಲಾಗಿದೆ.

144. ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದ ಶೇಕಡ 3 ರಷ್ಟಿರಬೇಕು ಎಂದು ವಿತ್ತೀಯ ಜವಾಬ್ದಾರಿ ಮತ್ತು ಆಯವ್ಯಯ ನಿರ್ವಹಣಾ ಕಾಯಿದೆ( ಎಫ್ಆರ್'ಬಿಎಮ್ ಆ್ಯಕ್ಟ್) ಕಡ್ಡಾಯ ಮಾಡಿದೆ. 2020-21 ಮಾರ್ಚ್ 31ರೊಳಗೆ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ.3ಕ್ಕೆ ನಿಯಂತ್ರಿಸುವ ಗುರಿ ಸಾಧಿಸಬೇಕಿದೆ. ಆದರೆ, ಈ ವರ್ಷ ಎದುರಾದ ಹಿಂದೆಂದೂ ಕಾಣದ ಮತ್ತು ಅನಿರೀಕ್ಷಿತ ಪರಿಸ್ಥಿತಿ ಮತ್ತು ಸನ್ನಿವೇಶಗಳಿಂದಾಗಿ, ಎಫ್ಆರ್'ಬಿಎಮ್ ಕಾಯಿದೆಯ 4(5) ಮತ್ತು 7(3)(ಬಿ) ಸೆಕ್ಷನ್'ಗಳಿಗೆ ಕೆಲವೊಂದು ಬದಲಾವಣೆ (ಮಾರ್ಪಾಟು) ತರುವುದು ಅಗತ್ಯವಾಗಿದ್ದು, ಅದನ್ನು ಸದನದ ಮುಂದಿಡುತ್ತಿದ್ದೇನೆ. ಎಫ್ಆರ್'ಬಿಎಮ್ ಕಾಯಿದೆ ದಾಖಲೆಗಳ ಭಾಗವಾಗಿ ಮಾರ್ಪಾಟು ಪ್ರಸ್ತಾಪಗಳನ್ನು (ಡೀವಿಯೇಷನ್ ಸ್ಟೇಟ್'ಮೆಂಟ್')ಗಳನ್ನು ಸದನದ ಗಮನಕ್ಕೆ ತರುತ್ತಿದ್ದೇನೆ.

145. ನಾನು ಈಗಾಗಲೇ ಸೂಚಿಸಿರುವಂತೆ, ದೇಶದ ಅರ್ಥ ವ್ಯವಸ್ಥೆಯನ್ನು ಪ್ರಗತಿಯ ಮಾರ್ಗಕ್ಕೆ ಕೊಂಡೊಯ್ಯುವ ಜತೆಗೆ, ವಿತ್ತೀಯ ಕೊರತೆಯನ್ನು ತಹಬಂದಿಗೆ ತರುವ ಗುರಿ ಸಾಧನೆಗಾಗಿ ಕೇಂದ್ರ ಸರ್ಕಾರ, ಎಫ್ಆರ್'ಬಿಎಮ್ ಕಾಯಿದೆಗೆ ತಿದ್ದುಪಡಿಗಳನ್ನು ತರುತ್ತಿದೆ.

146. 15ನೇ ಹಣಕಾಸು ಆಯೋಗವು 2020 ಡಿಸೆಂಬರ್ 9ರಂದು ರಾಷ್ಟ್ರಪತಿ ಅವರಿಗೆ ತನ್ನ ಅಂತಿಮ ವರದಿ ಸಲ್ಲಿಸಿದೆ. 2021 ಆರ್ಥಿಕ ವರ್ಷದಿಂದ 2026ರ ವರೆಗೆ ಅನ್ವಯವಾಗುವಂತೆ ಅದು ಆರ್ಥಕ ಪುನಶ್ಚೇತನ ಶಿಫಾರಸುಗಳನ್ನು ನೀಡಿದೆ, ಸರಕಾರ ಈ ವರದಿ ಮತ್ತು ವಿವರಣಾತ್ಮಕ ಜ್ಞಾಪಕ ಪತ್ರವನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿದೆ. ಜತೆಗೆ, ರಾಜ್ಯಗಳ 41% ಪಾಲನ್ನು ಸಹ ಉಳಿಸಿಕೊಂಡಿದೆ. ವಿತ್ತೀಯ ಒಕ್ಕೂಟ ವ್ಯವಸ್ಥೆಯ ಬದ್ಧತೆಯನ್ನು ಗುರುತಿಸಿರುವ ಕೇಂದ್ರ ಸರಕಾರ, ಹಣಕಾಸು ಆಯೋಗದ ಶಿಫಾರಸುಗಳನ್ನು ಜಾರಿಗೆ ತರಲು ಗಮನ ನೀಡಿದೆ. ಜಮ್ಮು-ಕಾಶ್ಮೀರವು ರಾಜ್ಯವಾಗಿದ್ದಾಗ 14ನೇ ಹಣಕಾಸು ಆಯೋಗದಲ್ಲಿ ಅಧಿಕಾರ ಹಂಚಿಕೆಗೆ ಅವಕಾಶ ಪಡೆದಿತ್ತು. ಆದರೆ ಈಗ ಜಮ್ಮು-ಕಾಶ್ಮೀರ ಮತ್ತು ಲಡಖ್ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರಕಾರವೇ ಅನುದಾನ ಒದಗಿಸಲಿದೆ. 15ನೇ ಹಣಕಾಸು ಆಯೋಗದ ಶಿಫಾರಸಿನಂತೆ, 2021-22ನೇ ಸಾಲಿನಲ್ಲಿ 17 ರಾಜ್ಯಗಳಿಗೆ ವರಮಾನ ಕೊರತೆ ಅನುದಾನವಾಗಿ 1,18,452 ಕೋಟಿ ರೂ. ಒದಗಿಸಿದ್ದೇನೆ. 2020-21ನೇ ಸಾಲಿನಲ್ಲಿ 14 ರಾಜ್ಯಗಳಿಗೆ 74,340 ಕೋಟಿ ರೂ. ಒದಗಿಸಲಾಗಿತ್ತು.

ನಾನೀಗ ನನ್ನ ಭಾಷಣದ 2ನೇ(ಬಿ) ಭಾಗಕ್ಕೆ ಮುಂದುವರೆಯುತ್ತೇನೆ.

**ಬಿ ಭಾಗ**

147. ಗೌರವಾನ್ವಿತ ಸ್ಪೀಕರ್ ಅವರೆ, ಕೋವಿಡ್-19 ಸೋಂಕು ಮತ್ತು ಆ ನಂತರದ ಆಘಾತಗಳಿಂದ ಇಡೀ ವಿಶ್ವವೇ ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ. ಈ ಸಂಕಷ್ಟದ ಸಮಯದಲ್ಲಿ ಜಾಗತಿಕ ಮಟ್ಟದಲ್ಲಿ ಹಲವು ರಾಷ್ಟ್ರಗಳ ಸೊರಗಿರುವ ಆರ್ಥಿಕತೆಗಳು ಪುನಶ್ಚೇತನಗೊಳ್ಳಲು (ಮೇಲೇಳಲು) ಹರಸಾಹಸ ಪಡುತ್ತಿರುವ ಸಂದರ್ಭದಲ್ಲಿ , ನಮ್ಮ ಜನರು ಮತ್ತು ನಮ್ಮ ಕೈಗಾರಿಕೆಗಳು ತ್ವರಿತ ಚೇತರಿಕೆ ತೋರುತ್ತಿವೆ.

148. ಈಗಾಗಲೇ ನಾನು ಪ್ರಸ್ತಾಪಿಸಿರುವಂತೆ, ಕೊರೊನಾ ಸಾಂಕ್ರಾಮಿಕ ಸೋಂಕು ವ್ಯಾಪಿಸಿದ ನಂತರ ಹೊಸ ಜಾಗತಿಕ ವ್ಯವಸ್ಥೆ ಉದಯವಾಗುತ್ತಿದೆ. ಈ ಹೊಸ ವ್ಯವಸ್ಥೆಯಲ್ಲಿ ಏಷ್ಯಾ ಖಂಡ ಪ್ರಮುಖ ಸ್ಥಾನ ಪಡೆಯಲಿದೆ. ಅದರಲ್ಲಿ ಭಾರತವು ಮುಂಚೂಣಿ ಸ್ಥಾನ ವಹಿಸಲಿದೆ. ಇಂತಹ ಸನ್ನಿವೇಶದಲ್ಲಿ ನಮ್ಮ ತೆರಿಗೆ ವ್ಯವಸ್ಥೆ ದಕ್ಷತೆಯಿಂದ ಕೂಡಿರಬೇಕು, ಪಾರದರ್ಶಕವಾಗಿರಬೇಕು. ಅದು ನಮ್ಮ ದೇಶದಲ್ಲಿ ಹೂಡಿಕೆ ಮತ್ತು ಉದ್ಯೋಗಗಳನ್ನು ಉತ್ತೇಜಿಸುವಂತಿರಬೇಕು. ಅದೇ ವೇಳೆ, ನಮ್ಮ ತೆರಿಗೆ ಪಾವತಿದಾರರಿಗೆ ಕನಿಷ್ಠ ಹೊರೆ ಬೀಳುವಂತಿರಬೇಕು.

> **இயற்றலும் ஈட்டலுங் காத்தலும் காத்த வகுத்தலும் வல்ல தரசு.**
>
> - **திருக்குறள் 385**

> "ರಾಜ ಅಥವಾ ಆಡಳಿತಗಾರ ಸಂಪತ್ತನ್ನು ಸೃಷ್ಟಿಸುವ ಮತ್ತು ಗಳಿಸುವ ಸಾಮರ್ಥ್ಯ ಹೊಂದಿರುತ್ತಾನೆ. ಆತ ಅದನ್ನು ಸಂರಕ್ಷಿಸಿ, ಸಾಮಾನ್ಯರ ಒಳಿತಿಗಾಗಿ ಹಂಚುತ್ತಾನೆ''
>
> - ತಿರುಕ್ಕುರಲ್, ತಮಿಳು ಕವಿ 385

**ನೇರ ತೆರಿಗೆ ಪ್ರಸ್ತಾವನೆಗಳು**

149. ದೇಶದ ಅರ್ಥ ವ್ಯವಸ್ಥೆಯ ಪುನಶ್ಚೇತನ ಮತ್ತು ಸಾಮಾನ್ಯ ತೆರಿಗೆ ಪಾವತಿದಾರರಿಗೆ ಪ್ರಯೋಜನಗಳನ್ನು ಒದಗಿಸುವ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ಸರ್ಕಾರ, ನೇರ ತೆರಿಗೆ ವ್ಯವಸ್ಥೆಯಲ್ಲಿ ಸರಣಿ ಸುಧಾರಣೆಗಳನ್ನು ಜಾರಿಗೆ ತಂದಿದೆ. ಕೊರೊನಾ ಸೋಂಕು ಹರಡುವ ಕೆಲವು ತಿಂಗಳ ಮುನ್ನ, ದೇಶಕ್ಕೆ ಹೂಡಿಕೆ ಆಕರ್ಷಿಸಲು ನಾವು ಕಾರ್ಪೊರೇಟ್ ತೆರಿಗೆ ದರವನ್ನು ಇಳಿಕೆ ಮಾಡಿ, ವಿಶ್ವದಲ್ಲೇ ಅತ್ಯಂತ ಕಡಿಮೆ ದರ ನಿಗದಿಪಡಿಸಿದ್ದೇವೆ. ಅಲ್ಲದೆ, ಲಾಭಾಂಶ (ಡಿವಿಡೆಂಡ್) ವಿತರಣೆ ತೆರಿಗೆಯನ್ನು ರದ್ದು ಮಾಡಿದ್ದೇವೆ. ರಿಯಾಯಿತಿಗಳನ್ನು ಹೆಚ್ಚಿಸುವ ಮೂಲಕ ಸಣ್ಣ ತೆರಿಗೆದಾರರ ತೆರಿಗೆ ಪಾವತಿ ಹೊರೆಯನ್ನು ಇಳಿಸಿದ್ದೇವೆ. ಇದರಿಂದಾಗಿ, 2020ರಲ್ಲಿ ಆದಾಯ ತೆರಿಗೆ ವಿವರ ಸಲ್ಲಿಸುವ ತೆರಿಗೆದಾರರ ಸಂಖ್ಯೆ 6.48 ಕೋಟಿಗೆ ಏರಿಕೆ ಕಂಡಿದೆ. 2014ರಲ್ಲಿ ತೆರಿಗೆದಾರರ ಸಂಖ್ಯೆ 3.31 ಕೋಟಿ ಇತ್ತು.

150. ನೇರ ತೆರಿಗೆ ಆಡಳಿತದಲ್ಲಿ ತೆರಿಗೆದಾರನ ಭೌತಿಕ ಸಂಪರ್ಕ ಇಲ್ಲದೆ ತೆರಿಗೆ ವಂಚನೆಗಳ ಮೌಲ್ಯಮಾಪನ ಮತ್ತು ತೆರಿಗೆದಾರನ ಖುದ್ದು ಹಾಜರಾತಿ ಅಥವಾ ಸಂಪರ್ಕ ಇಲ್ಲದೆ ಮನವಿಗಳ ಇತ್ಯರ್ಥಕ್ಕೆ ಕ್ರಮ ಕೈಗೊಂಡಿದ್ದೇವೆ. ಇದರಿಂದ ತೆರಿಗೆದಾರನ ಅಮೂಲ್ಯ ಸಮಯ ಉಳಿಯುವ ಜತೆಗೆ, ಆತ ನಾನಾ ರಿಸ್ಕ್'ಗಳಿಂದ ಮುಕ್ತನಾಗುತ್ತಾನೆ. ತೆರಿಗೆ ಆಡಳಿತವನ್ನು ಮತ್ತಷ್ಟು ಸರಳೀಕರಿಸಿ, ಸುಲಭ ಅನುಸರಣಾ ವ್ಯವಸ್ಥೆ ಮತ್ತು ವ್ಯಾಜ್ಯಗಳನ್ನು ಕಡಿಮೆ ಮಾಡುವ ಮತ್ತಷ್ಟು ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

**ಹಿರಿಯ ನಾಗರಿಕರಿಗೆ ಪರಿಹಾರ**

151. ನಮ್ಮ ಹಿರಿಯ ನಾಗರಿಕರಿಗೆ ಪ್ರಣಾಮಗಳನ್ನು ಸಲ್ಲಿಸುತ್ತಾ ನನ್ನ ನೇರ ತೆರಿಗೆ ಪ್ರಸ್ತಾವನೆಗಳನ್ನು ಸದನದ ಮುಂದಿಡಲು ಬಯಸುತ್ತೇನೆ. ಹಿರಿಯ ನಾಗರಿಕರಲ್ಲಿ ಹಲವರು ತಮ್ಮದೇ ಆದ ಮೂಲಭೂತ ಅವಶ್ಯಕತೆಗಳನ್ನು ಮುಂದಿಟ್ಟಿದ್ದರೂ, ನಮ್ಮ ದೇಶ ಕಟ್ಟಲು ಶ್ರಮಿಸುತ್ತಿದ್ದಾರೆ.

152. ದೇಶ ಸ್ವಾತಂತ್ರ್ಯ ಗಳಿಸಿ 75ನೇ ವರ್ಷದ ಸಂಭ್ರಮಾಚರಿಸುತ್ತಿರುವ ಸಂದರ್ಭದಲ್ಲಿ ನಾವು ಹೊಸ ಪ್ರಯತ್ನದಿಂದ ನಮ್ಮ ಪ್ರಯತ್ನವನ್ನು ಮುಂದುವರಿಸಿದಾಗ, 75 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ನಮ್ಮ ಹಿರಿಯ ನಾಗರಿಕರು ಎದುರಿಸುತ್ತಿರುವ ಅನುಸರಣೆ ಹೊರೆಯನ್ನು ನಾವು ಕಡಿಮೆ ಮಾಡಲು ಸಾಧ್ಯವಿದೆ. ಬರೀ ಪಿಂಚಣಿ ಮತ್ತು ಬಡ್ಡಿ ವರಮಾನ ಗಳಿಸುತ್ತಿರುವ ಹಿರಿಯ ನಾಗರಿಕರಿಗೆ, ಆದಾಯ ತೆರಿಗೆ ವಿವರ ಸಲ್ಲಿಕೆಯಿಂದ ವಿನಾಯಿತಿ ನೀಡಲು ನಾನು ಉದ್ದೇಶಿಸಿದ್ದೇನೆ. ಪಿಂಚಣಿ ಮತ್ತು ಬಡ್ಡಿ ವರಮಾನ ಪಾವತಿಸುವ ಬ್ಯಾಂಕ್'ಗಳೇ ಅವರ ಆದಾಯದಿಂದ ನೇರವಾಗಿ ಅಗತ್ಯ ತೆರಿಗೆಗಳನ್ನು ಕಡಿತ ಮಾಡಿಕೊಳ್ಳಲಿವೆ.

**ಆದಾಯ ತೆರಿಗೆ ವಂಚನೆ ಪ್ರಕರಣಗಳ ಮೌಲ್ಯಮಾಪನ ಸಮಯ ಕಡಿತ**

153. ಗೌರವಾನ್ವಿತ ಸ್ಪೀಕರ್, ತೆರಿಗೆ ವಂಚನೆಗಳಿಗೆ ಸಂಬಂಧಿಸಿದಂತೆ, ಪ್ರಸ್ತುತ 6 ವರ್ಷಗಳವರೆಗೆ ತೆರಿಗೆ ಮೌಲ್ಯಮಾಪನ ಪುನಾರಂಭಿಸಬಹುದು. ಗಂಭೀರ ತೆರಿಗೆ ವಂಚನೆ ಪ್ರಕರಣಗಳಿಗೆ 10 ವರ್ಷಗಳ ತನಕ ಮೌಲ್ಯಮಾಪನ ನಡೆಸಬಹುದು. ಇದರಿಂದ ತೆರಿಗೆದಾರ ದೀರ್ಘ ಕಾಲ ಅನಿಶ್ಚಯದಲ್ಲಿ ಉಳಿಯುತ್ತಾನೆ.

154. ಹಾಗಾಗಿ ನಾನು ತೆರಿಗೆ ವಂಚನೆ ಪ್ರಕರಣಗಳ ಮೌಲ್ಯಮಾಪನ ಕಾಲಾವಧಿಯನ್ನು ಈಗಿರುವ 6 ವರ್ಷಗಳಿಂದ 3 ವರ್ಷಗಳಿಗೆ ಇಳಿಸಿದ್ದೇನೆ. ಗಂಭೀರ ತೆರಿಗೆ ವಂಚನೆ ಪ್ರಕರಣಗಳಲ್ಲಿ, ಒಂದು ವರ್ಷದಲ್ಲಿ 50 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಆದಾಯವನ್ನು ಮರೆಮಾಚುವ ಪುರಾವೆಗಳಿದ್ದರೆ, ಅಂತಹ ಪ್ರಕರಣಗಳ ತೆರಿಗೆ ಮೌಲ್ಯಮಾಪನ ನಡೆಸಲು 10 ವರ್ಷಗಳ ಕಾಲಾವಕಾಶ ಮುಂದುವರೆಸಲಾಗಿದೆ. ಇಂತಹ ಪ್ರಕರಣಗಳಿಗೆ ಆದಾಯ ತೆರಿಗೆ ಇಲಾಖೆಯ ಪ್ರಧಾನ ಮುಖ್ಯ ಆಯುಕ್ತರು ಅನುಮೋದನೆ ನೀಡಿದರೆ ಮಾತ್ರ 10 ವರ್ಷಗಳ ತನಕ ತೆರಿಗೆ ಮೌಲ್ಯಮಾಪನ ಪುನಾರಂಭಿಸಬಹುದು.

**ವಿವಾದಗಳ ಪರಿಹಾರ ಸಮಿತಿ ರಚನೆ**

155. ಗೌರವಾನ್ವಿತ ಸ್ಪೀಕರ್, ಪ್ರಸ್ತುತ ತೆರಿಗೆ ವ್ಯವಸ್ಥೆಯ ಮೇಲೆ ಸಮರ ಸಾರುತ್ತಿರುವ ವ್ಯಾಜ್ಯಗಳನ್ನು ನಿಯಂತ್ರಿಸುವುದು ಮತ್ತು ಪರಿಹರಿಸುವುದು ಈ ಸರ್ಕಾರದ ಸಂಕಲ್ಪವಾಗಿದೆ.

156. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು 'ನೇರ ತೆರಿಗೆ ವಿವಾದ್ ಸೇ ವಿಶ್ವಾಸ್ ಯೋಜನೆ'ಯನ್ನು ಪರಿಚಯಿಸಿದೆ. ದೀರ್ಘ ಕಾಲದಿಂದ ಬಾಕಿ ಉಳಿದಿರುವ ತೆರಿಗೆ ವಿವಾದಗಳನ್ನು ಇತ್ಯರ್ಥಪಡಿಸಿಕೊಳ್ಳಲು ಈ ಯೋಜನೆಯಲ್ಲಿ ತೆರಿಗೆದಾರರಿಗೆ ಅವಕಾಶ ಕಲ್ಪಿಸಲಾಗಿದೆ. ತೆರಿಗೆದಾರರ ಸಮಯ ಮತ್ತು ಸಂಪನ್ಮೂಲದ ಮೇಲೆ ಆಗುವ ಒತ್ತಡಗಳನ್ನು ನಿವಾರಿಸಿಕೊಳ್ಳಲು ಇದು ಅನುಕೂಲಕರವಾಗಿದೆ. ಈ ಯೋಜನೆಗೆ ತೆರಿಗೆದಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, 1.10 ಲಕ್ಷಕ್ಕಿಂತ ಹೆಚ್ಚಿನ ತೆರಿಗೆದಾರರು ಈಗಾಗಲೇ ಈ ಯೋಜನೆ ಆಯ್ದುಕೊಂಡು 85,000 ಕೋಟಿ ರೂಪಾಯಿಗಿಂತ ಹೆಚ್ಚಿನ ಮೊತ್ತದ ತೆರಿಗೆ ವಿವಾದಗಳ ಪರಿಹಾರಕ್ಕೆ ಮುಂದಾಗಿದ್ದಾರೆ.

157. ಸಣ್ಣ ತೆರಿಗೆದಾರರ ವ್ಯಾಜ್ಯಗಳನ್ನು ಮತ್ತಷ್ಟು ಕಡಿಮೆ ಮಾಡುವ ಸಲುವಾಗಿ, ನಾನು ತೆರಿಗೆ ವಿವಾದಗಳ ಪರಿಹಾರ ಸಮಿತಿ ರಚಿಸಲು ಪ್ರಸ್ತಾಪಿಸುತ್ತಿದ್ದೇನೆ. ಆ ಸಮಿತಿಯು ಮುಖರಹಿತವಾಗಿ (ಭೌತಿಕ ಸಂಪರ್ಕವಿಲ್ಲದೆ) ದಕ್ಷತೆ, ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು

ದೃಢಪಡಿಸಲಿದೆ. ತೆರಿಗೆಗೆ ಒಳಪಡುವ ವಾರ್ಷಿಕ 50 ಲಕ್ಷ ರೂ. ಆದಾಯ ಹೊಂದಿರುವ ಯಾರೇ ಆಗಲಿ ಮತ್ತು 10 ಲಕ್ಷ ರೂ.ವರೆಗೆ ವಿವಾದಿತ ಆದಾಯ ಹೊಂದಿರುವವರು ಈ ಸಮಿತಿಯ ಮೊರೆ ಹೋಗಲು ಅರ್ಹರಾಗಿರುತ್ತಾರೆ.

**ಭೌತಿಕ ಸಂಪರ್ಕರಹಿತ ಆದಾಯ ತೆರಿಗೆ ಮೇಲ್ಮನವಿ ನ್ಯಾಯಾಧಿಕರಣ (ಐಟಿಎಟಿ)**

158. ತೆರಿಗೆ ನಿಯಮಗಳ ಅನುಸರಣೆ ಸರಳೀಕರಣ ಮತ್ತು ಸ್ವವಿವೇಚನೆಗಳನ್ನು ಕಡಿಮೆ ಮಾಡುವ ಸಲುವಾಗಿ, ತೆರಿಗೆ ಪಾವತಿ ಪ್ರಕ್ರಿಯೆಯನ್ನು ಭೌತಿಕ ಸಂಪರ್ಕರಹಿತವಾಗಿಸಲು ನಾವು ಬದ್ಧರಾಗಿದ್ದೇವೆ. ಕೇಂದ್ರ ಸರ್ಕಾರ ಈಗಾಗಲೇ ಭೌತಿಕ ಸಂಪರ್ಕರಹಿತ ತೆರಿಗೆ ಮೌಲ್ಯಮಾಪನ ಮತ್ತು ಮೇಲ್ಮನವಿ ವ್ಯವಸ್ಥೆಯನ್ನು ಈ ವರ್ಷ ಜಾರಿಗೆ ತಂದಿದೆ.

159. ಮುಂದಿನ ಹಂತದ ಆದಾಯ ತೆರಿಗೆ ಮೇಲ್ಮನವಿ ಎಂದರೆ ಅದು ವರಮಾನ ತೆರಿಗೆ ಮೇಲ್ಮನವಿ ನ್ಯಾಯಾಧಿಕರಣ. ಈ ನ್ಯಾಯಾಧಿಕರಣವು ಭೌತಿಕ ಸಂಪರ್ಕರಹಿತವಾಗಿರಲಿದೆ ಎಂದು ನಾನಿಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ರಾಷ್ಟ್ರೀಯ ಭೌತಿಕ ಸಂಪರ್ಕರಹಿತ ಆದಾಯ ತೆರಿಗೆ ಮೇಲ್ಮನವಿ ನ್ಯಾಯಾಧಿಕರಣ ಕೇಂದ್ರವನ್ನು ನಾವು ಸ್ಥಾಪಿಸಲಿದ್ದೇವೆ. ನ್ಯಾಯಾಧಿಕರಣ ಮತ್ತು ಮೇಲ್ಮನವಿ ನಡುವಿನ ಎಲ್ಲಾ ಸಂವಹನವು ವಿದ್ಯುನ್ಮಾನವಾಗಿರಲಿದೆ. ವೈಯಕ್ತಿಕ ವಿಚಾರಣೆಯ ಅಗತ್ಯ ಬಿದ್ದರೆ, ಅದು ವೀಡಿಯೊ ಕಾನ್ಫರೆನ್ಸ್ ಮೂಲಕ ನಡೆಯಲಿದೆ.

**ಅನಿವಾಸಿ ಭಾರತೀಯರಿಗೆ ಸಡಿಲಿಕೆ**

160. ಅನಿವಾಸಿ ಭಾರತೀಯರು ಭಾರತಕ್ಕೆ ವಾಪಸಾದರೆ, ವಿದೇಶಿ ನಿವೃತ್ತ ಖಾತೆಗಳಲ್ಲಿರುವ ಸಂಚಿತ ಆದಾಯಕ್ಕೆ ಸಂಬಂಧಿಸಿ ಅವರು ಕೆಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಲ್ಲಿನ ಮತ್ತು ಅಲ್ಲಿಯ ತೆರಿಗೆ ಪಾವತಿ ಅವಧಿ ಏರುಪೇರೇ ಇದಕ್ಕೆ ಕಾರಣ. ಇದರಿಂದ ಅವರು ಎರಡು ಕಡೆ ತೆರಿಗೆ ಪಾವತಿಸುವ ಹೊರೆ ಹೊರುತ್ತಿದ್ದಾರೆ. ಈ ನಿಟ್ಟಿನಲ್ಲಿ ದುಪ್ಪಟ್ಟು ತೆರಿಗೆ ಪಾವತಿಯನ್ನು ತೊಡೆದುಹಾಕಲು ಹೊಸ ನಿಯಮಾವಳಿಗಳನ್ನು ರೂಪಿಸಲು ಉದ್ದೇಶಿಸಿದ್ದೇನೆ.

**ಲೆಕ್ಕ ಪರಿಶೋಧನೆಯಿಂದ ವಿನಾಯಿತಿ**

166. ಪ್ರಸ್ತುತ, ನಿಮ್ಮ ವಾರ್ಷಿಕ ವಹಿವಾಟು 1 ಕೋಟಿ ರೂ. ದಾಟಿದರೆ, ನಿಮ್ಮ ವಹಿವಾಟು ವಿವರಗಳನ್ನು ಲೆಕ್ಕ ಪರಿಶೋಧನೆಗೆ ಒಳಪಡಿಸಲೇಬೇಕು. 2020 ಫೆಬ್ರವರಿ ಬಜೆಟ್'ನಲ್ಲಿ ನಾನು, 95% ಡಿಜಿಟಲ್ ವಹಿವಾಟು ನಡೆಸುವವರಿಗೆ ತೆರಿಗೆ ಲೆಕ್ಕ ಪರಿಶೋಧನೆ ಮಿತಿಯನ್ನು 5 ಕೋಟಿ ರೂ,ಗೆ ಹೆಚ್ಚಿಸಿದ್ದೆ. ಡಿಜಿಟಲ್ ವಹಿವಾಟನ್ನು ಮತ್ತಷ್ಟು ಉತ್ತೇಜಿಸುವ ಮತ್ತು ಅನುಸರಣಾ ಹೊರೆಗಳನ್ನು ತಗ್ಗಿಸುವ ಸಲುವಾಗಿ, 95% ಡಿಜಿಟಲ್ ವಹಿವಾಟು ನಡೆಸುವವರಿಗೆ ತೆರಿಗೆ ಲೆಕ್ಕ ಪರಿಶೋಧನೆ ಮಿತಿಯನ್ನು 10 ಕೋಟಿ ರೂ.ಗೆ ಹೆಚ್ಚಿಸುವುದಾಗಿ ಪ್ರಸ್ತಾಪಿಸುತ್ತಿದ್ದೇನೆ.

**ಲಾಭಾಂಶ ಪರಿಹಾರ**

162. ಹಿಂದಿನ ಬಜೆಟ್'ನಲ್ಲಿ ನಾನು, ಹೂಡಿಕೆ ಉತ್ತೇಜಿಸುವ ಸಲುವಾಗಿ ಲಾಭಾಂಶ ವಿತರಣೆ ತೆರಿಗೆಯನ್ನು ರದ್ದು ಮಾಡಿ, ಷೇರುದಾರರು ಅಥವಾ ಪಾಲುದಾರರಿಗೆ ಲಾಭಾಂಶ ತೆರಿಗೆ ಹಾಕಿದ್ದೆ. ಆದರೆ ಇದೀಗ, ತೆರಿಗೆ ನಿಯಮಗಳ ಅನುಸರಣೆ ಸರಳೀಕರಣಕ್ಕೆ ಪೂರಕವಾಗಿ, ರಿಯಲ್ ಎಸ್ಟೇಟ್ ಇನ್ವೆಸ್ಟ್'ಮೆಂಟ್ ಟ್ರಸ್ಟ್ / ಇನ್'ಫ್ರಾಸ್ಟ್ರಕ್ಚರ್ ಇನ್ವೆಸ್ಟ್'ಮೆಂಟ್ ಟ್ರಸ್ಟ್'ಗಳಿಗೆ ಮಾಡುವ ಡಿವಿಡೆಂಡ್(ಲಾಭಾಂಶ) ಪಾವತಿಗಳಿಗೆ ಟಿಡಿಎಸ್ (ಮೂಲದಲ್ಲೇ ತೆರಿಗೆ ಕಡಿತ)ನಿಂದ ವಿನಾಯಿತಿ ನೀಡಲಾಗಿದೆ. ಮುಂಗಡ ತೆರಿಗೆ ಪಾವತಿಸುವ ಸಲುವಾಗಿ ಷೇರುದಾರರು ಲಾಭಾಂಶ ಆದಾಯವನ್ನು ಸಮರ್ಪಕವಾಗಿ ಅಂದಾಜು ಮಾಡುವಂತಿಲ್ಲ. ಹಾಗಾಗಿ ಲಾಭಾಂಶ ಘೋಷಣೆ/ ಪಾವತಿಯ ನಂತರವಷ್ಟೇ ಮುಂಗಡ ತೆರಿಗೆ ಬಾಧ್ಯತೆ ಪರಿಗಣನೆಗೆ ಒಳಪಡುತ್ತದೆ ಎಂಬುದನ್ನು ನಾನಿಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ವಿದೇಶಿ

ಪೋರ್ಟ್'ಫೋಲಿಯೊ ಹೂಡಿಕೆದಾರರ ಲಾಭಾಂಶ ಆದಾಯಕ್ಕೆ ತೆರಿಗೆ ಕಡಿತಗೊಳಿಸಿ, ಒಪ್ಪಂದದ ಅಲ್ಪ ದರ ವಿಧಿಸಲು ನಾನು ಉದ್ದೇಶಿಸಿದ್ದೇನೆ.

**ಮೂಲಸೌಕರ್ಯ ವಲಯಕ್ಕೆ ವಿದೇಶಿ ನೇರ ಹೂಡಿಕೆ ಆಕರ್ಷಣೆ**

163. ದೇಶದ ಮೂಲಸೌಕರ್ಯ ವಲಯಕ್ಕೆ ವಿದೇಶಿ ನೇರ ಹೂಡಿಕೆ ಆಕರ್ಷಿಸಲು ಕಳೆದ ಬಜೆಟ್'ನಲ್ಲಿ ನಾವು 100% ತೆರಿಗೆ ವಿನಾಯಿತಿ ಘೋಷಿಸಿದ್ದೆವು. ಆದರೆ ನಿರ್ದಿಷ್ಟ ಷರತ್ತುಗಳನ್ನು ವಿಧಿಸಿದ್ದೆವು. ವಿದೇಶಿ ಸಾರ್ವಭೌಮ ಸಂಪತ್ತು ನಿಧಿ, ಪಿಂಚಣಿ ನಿಧಿಗಳು ಇತ್ಯಾದಿ. ಆದರೆ ಈ ನಿಧಿಗಳು ನಮ್ಮ ನಿರ್ದಿಷ್ಟ ಷರತ್ತುಗಳಿಗೆ ಸ್ಪಂದಿಸಲು ಕಷ್ಟ ಎದುರಿಸಿದವು. ಹಾಗಾಗಿ, ಹೆಚ್ಚಿನ ಸಂಖ್ಯೆಯ ನಿಧಿಗಳು ಭಾರತದ ಮೂಲಸೌಕರ್ಯ ವಲಯದಲ್ಲಿ ಹೂಡಿಕೆ ಆಗುವುದನ್ನು ಉತ್ತೇಜಿಸಲು ನಾನು ಕೆಲವು ಷರತ್ತುಗಳನ್ನು ಸಡಿಲಿಸಲು ಪ್ರಸ್ತಾಪಿಸುತ್ತಿದ್ದೇನೆ. ಖಾಸಗಿ ನಿಧಿಗಳ ಮೇಲಿನ ನಿಷೇಧ, ವಾಣಿಜ್ಯ ಚಟುವಟಿಕೆಗಳ ಮೇಲಿನ ನಿರ್ಬಂಧ ಮತ್ತು ಮೂಲಸೌಕರ್ಯ ವಲಯದ ನೇರ ವಿದೇಶಿ ಹೂಡಿಕೆ ಷರತ್ತುಗಳನ್ನು ಸಡಿಲಿಸಲಾಗುವುದು.

164. ಶೂನ್ಯ ಕೂಪನ್ ಬಾಂಡ್'ಗಳನ್ನು ಬಿಡುಗಡೆ ಮಾಡುವ ಮೂಲಕ ಮೂಲಸೌಕರ್ಯ ವಲಯದಲ್ಲಿ ಹೂಡಿಕೆಗೆ ಅವಕಾಶ ಕಲ್ಪಿಸುವ ಸಲುವಾಗಿ, ಅಧಿಸೂಚಿತ ಮೂಲಸೌಕರ್ಯ ಸಾಲ ನಿಧಿ ಕ್ರೋಡೀಕರಣಕ್ಕೆ ಪ್ರಸ್ತಾಪಿಸುತ್ತಿದ್ದೇನೆ. ಇದಕ್ಕಾಗಿ ತೆರಿಗೆ ದಕ್ಷತೆಯ ಶೂನ್ಯ ಕೂಪನ್ ಬಾಂಡ್'ಗಳನ್ನು ಬಿಡುಗಡೆ ಮಾಡಲಾಗುವುದು.

**ಕೈಗೆಟಕುವ ಬೆಲೆಗೆ ವಸತಿ/ ಬಾಡಿಗೆ ವಸತಿ**

165. ಈ ಸರ್ಕಾರ ಎಲ್ಲರಿಗೂ ಸೂರು ಒದಗಿಸಲು ಮತ್ತು ಕೈಗೆಟಕುವ ಬೆಲೆಗೆ ವಸತಿ ಕಲ್ಪಿಸುವುದನ್ನು ಆದ್ಯತಾ ವಲಯವಾಗಿ ಪರಿಗಣಿಸಿದೆ. 2019 ಜುಲೈ ಬಜೆಟ್'ನಲ್ಲಿ ಕೈಗೆಟಕುವ ಬೆಲೆಯ ಮನೆ ಖರೀದಿಗೆ ಮಾಡಿದ 1.5 ಲಕ್ಷ ಸಾಲಕ್ಕೆ ಹೆಚ್ಚುವರಿ ಬಡ್ಡಿ ಕಡಿತ ಸೌಲಭ್ಯ ಒದಗಿಸಲಾಗಿತ್ತು. ಈ ಹೆಚ್ಚುವರಿ ಬಡ್ಡಿ ಕಡಿತ ಸೌಲಭ್ಯವನ್ನು ಇನ್ನೂ 1 ವರ್ಷ ವಿಸ್ತರಿಸುತ್ತಿದ್ದೇವೆ. 2022 ಮಾರ್ಚ್ 31ರ ವರೆಗೆ ಇದು ಅನ್ವಯವಾಗಲಿದೆ.

166. ಕೈಗೆಟಕುವ ಬೆಲೆಯ ಮನೆಗಳ ಪೂರೈಕೆ ಮುಂದುವರಿಸುವ ಸಲುವಾಗಿ ಮತ್ತೊಂದು ವರ್ಷ ಕೈಗೆಟಕುವ ಬೆಲೆಯ ವಸತಿ ನಿರ್ಮಾಣ ಯೋಜನೆಗಳಿಗೆ ತೆರಿಗೆ ರಜೆ ವಿಸ್ತರಿಸುತ್ತಿದ್ದೇನೆ. ಅದು 2022 ಮಾರ್ಚ್ 31ರ ವರೆಗೆ ಅನ್ವಯವಾಗಲಿದೆ.

167. ವಲಸೆ ಕಾರ್ಮಿಕರಿಗೆ ಕೈಗೆಟಕುವ ಬೆಲೆಯ ಬಾಡಿಗೆ ಮನೆಗಳನ್ನು ಪೂರೈಸಲು ಸರ್ಕಾರ ಬದ್ಧವಾಗಿದ್ದು, ಇದಕ್ಕಾಗಿ ಅಧಿಸೂಚಿತ ಕೈಗೆಟಕುವ ಬೆಲೆಯ ಬಾಡಿಗೆ ಮನೆಗಳ ನಿರ್ಮಾಣ ಯೋಜನೆಗಳಿಗೆ ತೆರಿಗೆ ವಿನಾಯಿತಿ ನೀಡುತ್ತಿದ್ದೇನೆ.

**ಅಂತಾರಾಷ್ಟ್ರೀಯ ಹಣಕಾಸು ಸೇವೆಗಳ ಕೇಂದ್ರಕ್ಕೆ ತೆರಿಗೆ ಪ್ರೋತ್ಸಾಹ ಧನ**

168. ಬಜೆಟ್ ಭಾಷಣದ ಮೊದಲ ಭಾಗದಲ್ಲಿ ನಾನು ಪ್ರಸ್ತಾಪಿಸಿದಂತೆ, ಅಂತಾರಾಷ್ಟ್ರೀಯ ಹಣಕಾಸು ಸೇವೆಗಳ ಕೇಂದ್ರ (ಐಎಫ್'ಎಸ್'ಸಿ)ವನ್ನು ಗುಜರಾತ್ ಅಂತಾರಾಷ್ಟ್ರೀಯ ಹಣಕಾಸು ತಂತ್ರಜ್ಞಾನ-ನಗರ(ಜಿಐಎಫ್'ಟಿ)ದಲ್ಲಿ ಜಾಗತಿಕ ಹಣಕಾಸು ತಾಣವಾಗಿ ರೂಪಿಸಲು ಸರ್ಕಾರ ಬದ್ಧವಾಗಿದೆ. ಈಗಾಗಲೇ ನೀಡಿರುವ ತೆರಿಗೆ ಪ್ರೋತ್ಸಾಹಧನದ ಜತೆಗೆ, ಏರ್''ಕ್ರಾಫ್ಟ್ ಗುತ್ತಿಗೆ ಕಂಪನಿಗಳ ಬಂಡವಾಳ ಗಳಿಕೆಗೆ ತೆರಿಗೆ ರಜೆ, ವಿದೇಶಿ ಬಾಡಿಗೆದಾರರಿಗೆ ನೀಡುವ ವಿಮಾನಗಳ ಗುತ್ತಿಗೆಗೆ ತೆರಿಗೆ ವಿನಾಯಿತಿ, ಐಎಫ್'ಎಸ್'ಸಿಯಲ್ಲಿ ಮಾಡುವ ವಿದೇಶಿ ನಿಧಿಗಳಿಗೆ ತೆರಿಗೆ ಪ್ರೋತ್ಸಾಹಧನ, ವಿದೇಶಿ ಬ್ಯಾಂಕ್'ಗಳ ಹೂಡಿಕೆಗೆ ತೆರಿಗೆ ವಿನಾಯಿತಿ ಮತ್ತಿತರ ಸೌಲಭ್ಯ ಒದಗಿಸಲಾಗುವುದು.

**ಆದಾಯ ತೆರಿಗೆ ವಿವರಗಳ ಪೂರ್ವ-ಭರ್ತಿ**

169. ಗೌರವಾನ್ವಿತ ಸ್ಪೀಕರ್, ತೆರಿಗೆ ಪಾವತಿದಾರರು ಸುಲಭವಾಗಿ ತೆರಿಗೆ ನಿಯಮಗಳನ್ನು ಅನುಸರಿಸಲು ಅನುವಾಗುವಂತೆ ವೇತನ ಆದಾಯ, ತೆರಿಗೆ ಪಾವತಿಗಳು, ಟಿಡಿಎಸ್ ಇತ್ಯಾದಿ ವಿವರಗಳು ಈಗಾಗಲೇ ಆದಾಯ ತೆರಿಗೆ ವಿವರ ಸಲ್ಲಿಕೆಯ ಪೂರ್ವ-ಭರ್ತಿ ನಮೂನೆಯಲ್ಲಿ ಬಂದಿವೆ. ಆದಾಯ ತೆರಿಗೆ ವಿವರಗಳ ಸಲ್ಲಿಕೆಯನ್ನು ಮತ್ತಷ್ಟು ಸರಳೀಕರಿಸಲು, ನೋಂದಾಯಿತ ಸೆಕ್ಯೂರಿಟಿಗಳು, ಲಾಭಾಂಶ ವರಮಾನ, ಬ್ಯಾಂಕ್', ಅಂಚೆ ಕಚೇರಿಗಳ ಬಡ್ಡಿ ಮತ್ತಿತರ ಆದಾಯ ವಿವರಗಳನ್ನು ಪೂರ್ವ-ಭರ್ತಿ ಮಾಡಬಹುದು.

**ಸಣ್ಣ ಟ್ರಸ್ಟ್'ಗಳಿಗೆ ಪರಿಹಾರ**

170. ಶೈಕ್ಷಣಿಕ ಸಂಸ್ಥೆಗಳು ಮತ್ತು ಆಸ್ಪತ್ರೆಗಳನ್ನು ನಡೆಸುವ ಸಣ್ಣ ದತ್ತಿ ಸಂಸ್ಥೆ (ಚಾರಿಟಬಲ್ ಟ್ರಸ್ಟ್) ಗಳಿಗೆ ತೆರಿಗೆ ವ್ಯವಸ್ಥೆಯ ನಿಯಮಗಳ ಅನುಸರಣೆಯ ಹೊರೆ ಕಡಿಮೆ ಮಾಡುವ ಉದ್ದೇಶದಿಂದ, ವಾರ್ಷಿಕ 1 ಕೋಟಿ ರೂ. ಒಳಗೆ ಇದ್ದ ವಹಿವಾಟು ಸ್ವೀಕೃತಿಯನ್ನು 5 ಕೋಟಿ ರೂ.ಗೆ ಹೆಚ್ಚಿಸಲಾಗಿದೆ.

**ಕಾರ್ಮಿಕರ ಅಭ್ಯುದಯ**

171. ಹಲವಾರು ಉದ್ಯೋಗದಾತರು ಉದ್ಯೋಗಿಗಳ ಭವಿಷ್ಯ ನಿಧಿ, ಮೇಲ್ವಿಚಾರಣೆ ನಿಧಿ ಮತ್ತು ಇತರೆ ಸಾಮಾಜಿಕ ಭದ್ರತೆ ನಿಧಿ ಕೊಡುಗೆಗಳನ್ನು ಸಂಬಳದಲ್ಲಿ ಹಿಡಿದರು, ಈ ನಿಧಿಗಳನ್ನು ಸಕಾಲದಲ್ಲಿ (ನಿಗದಿತ ಸಮಯದೊಳಗೆ) ಠೇವಣಿ ಮಾಡದಿರುವುದನ್ನು ನಾವು ಗಮನಿಸಿದ್ದೇವೆ. ಇದರಿಂದ ಉದ್ಯೋಗಿಗಳಿಗೆ ಆದಾಯ ಮತ್ತು ಬಡ್ಡಿ ನಷ್ಟವಾಗುತ್ತಿದೆ. ಒಂದು ವೇಳೆ ಉದ್ಯೋಗದಾತರು ಆರ್ಥಿಕ ಸಮಸ್ಯೆಗಳಿಗೆ ಸಿಲುಕಿದರೆ, ಉದ್ಯೋಗಿಗಳಿಗೆ ಶಾಶ್ವತ ನಷ್ಟ ಸಂಭವಿಸುತ್ತದೆ.

172. ಈ ನಿಟ್ಟಿನಲ್ಲಿ ಉದ್ಯೋಗಿಗಳ ಸಾಮಾಜಿಕ ಭದ್ರತಾ ನಿಧಿ ಕೊಡುಗೆ ಸಕಾಲದಲ್ಲಿ ಪಾವತಿಯಾಗುವಂತೆ (ಠೇವಣಿ ಇಡುವುದನ್ನು) ಖಾತ್ರಿಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಉದ್ಯೋಗಿಗಳ ಕೊಡುಗೆಯನ್ನು ತಡವಾಗಿ ಠೇವಣಿ ಮಾಡುವುದು ಕಂಡುಬಂದರೆ, ಉದ್ಯೋಗಿಗಳ ಕೊಡುಗೆಯನ್ನು ಕಡಿತ ಮಾಡಲು ಉದ್ಯೋಗದಾತರಿಗೆ ಅನುಮತಿ ನೀಡಲಾಗುವುದಿಲ್ಲ.

**ನವೋದ್ಯಮಗಳಿಗೆ ಉತ್ತೇಜನ**

173. ದೇಶದಲ್ಲಿ ನವೋದ್ಯಮಗಳನ್ನು ಉತ್ತೇಜಿಸುವ ಸಲುವಾಗಿ, ಮತ್ತೊಂದು ವರ್ಷ ತೆರಿಗೆ ರಜೆ ವಿಸ್ತರಿಸಲಾಗುತ್ತಿದೆ. 2022 ಮಾರ್ಚ್ 31ರ ವರೆಗೆ ಇದು ಅನ್ವಯವಾಗಲಿದೆ. ನವೋದ್ಯಮಗಳಿಗೆ ಹೂಡಿಕೆ ಉತ್ತೇಜಿಸುವ ನಿಟ್ಟಿನಲ್ಲಿ ಹೂಡಿಕೆದಾರರ ಬಂಡವಾಳ ಗಳಿಕೆ ವಿನಾಯಿತಿಯನ್ನು 2022 ಮಾರ್ಚ್ 31ರ ವರೆಗೆ ವಿಸ್ತರಿಸಲಾಗಿದೆ.

**ಪರೋಕ್ಷ ತೆರಿಗೆ ಪ್ರಸ್ತಾವನೆಗಳು**

**ಸರಕು ಮತ್ತು ಸೇವಾ ತೆರಿಗೆ**

ಪರೋಕ್ಷ ತೆರಿಗೆ ಪ್ರಸ್ತಾವನೆಗಳಿಗೆ ಬರುವ ಮುನ್ನ, ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯನ್ನು ತಿಳಿಸಲು ಬಯಸುತ್ತೇನೆ. ಜಿಎಸ್'ಟಿ ತೆರಿಗೆ ವ್ಯವಸ್ಥೆಗೆ ಇದೀಗ ನಾಲ್ಕು ವರ್ಷಗಳು ಸಂದಿವೆ. ನಾವು ಜಿಎಸ್'ಟಿ ಸರಳೀಕರಣಕ್ಕೆ ಹಲವಾರು ಕ್ರಮಗಳನ್ನು ಕೈಗೊಂಡಿದ್ದೇವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ.

1. ಎಸ್ಸೆಮ್ಮೆಸ್ ಮೂಲಕ ಶೂನ್ಯ ತೆರಿಗೆ ವಿವರ
2. ತ್ರೈಮಾಸಿಕ ಆಧಾರದಲ್ಲಿ ಆದಾಯ ತೆರಿಗೆ ವಿವರ ಸಲ್ಲಿಕೆ ಮತ್ತು ಸಣ್ಣ ತೆರಿಗೆದಾರರಿಗೆ ಮಾಸಿಕ ಪಾವತಿ
3. ಮೌಲ್ಯೀಕರಿಸಿದ ಇನ್'ಪುಟ್ ತೆರಿಗೆ ವಿವರ (ಸ್ಟೇಟ್'ಮೆಂಟ್)
4. ಪೂರ್ವ-ಭರ್ತಿಯ ತಿದ್ದುಪಡಿ ಮಾಡಬಹುದಾದ ಜಿಎಸ್'ಟಿ ಆದಾಯ ತೆರಿಗೆ ವಿವರ
5. ಬೇರೆ ಬೇರೆ ಅವಧಿಗಳಿಗೆ ಹೊಂದಿಸುವ ಆದಾಯ ವಿವರ ಸಲ್ಲಿಕೆ

ಜಿಎಸ್'ಟಿಎನ್ ವ್ಯವಸ್ಥೆಯ ಸಾಮರ್ಥ್ಯವನ್ನು ಸಹ ಹೆಚ್ಚಿಸಲಾಗಿದೆ. ತೆರಿಗೆ ವಂಚಕರನ್ನು, ನಕಲಿ ಬಿಲ್'ಗಳ ಸೃಷ್ಟಿಕರ್ತರನ್ನು ಪತ್ತೆ ಮಾಡಲು, ಕೃತಕ ಬುದ್ಧಿಮತ್ತೆ ಮತ್ತು ಡೀಪ್ ಅನಾಲಿಟಿಕ್ಸ್ ತಂತ್ರಜ್ಞಾನವನ್ನು ಅಳವಡಿಸಲಾಗಿದೆ.

175. ಇದರ ಪರಿಣಾಮ ಕಳೆದ ಕೆಲವು ತಿಂಗಳಲ್ಲಿ ನಾವು ದಾಖಲೆ ಪ್ರಮಾಣದ ತೆರಿಗೆ ಸಂಗ್ರಹ ಮಾಡಿದ್ದೇವೆ.

176. ಜಿಎಸ್'ಟಿ ಮಂಡಳಿಯು ಮುಳ್ಳಿನಂತಹ ಸಮಸ್ಯೆಗಳನ್ನು ಶ್ರಮದಾಯಕವಾಗಿ ಪರಿಹರಿಸಿದೆ. ಜಿಎಸ್'ಟಿ ವ್ಯವಸ್ಥೆಯನ್ನು ಮತ್ತಷ್ಟು ಸುಗಮವಾಗಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸದನದ ಗಮನಕ್ಕೆ ತರಲು ನಾನು ಬಯಸುತ್ತೇನೆ.

**ಸೀಮಾಸುಂಕ ತರ್ಕಬದ್ಧಗೊಳಿಸುವಿಕೆ**

177. ನಮ್ಮ ಸೀಮಾಸುಂಕ ನೀತಿಯು 2 ಪ್ರಮುಖ ಉದ್ದೇಶಗಳನ್ನು ಹೊಂದಿದ್ದು, ದೇಶೀಯ ಉತ್ಪಾದನೆ ಉತ್ತೇಜಿಸುವ ಜತೆಗೆ, ಜಾಗತಿಕ ಮೌಲ್ಯ ಸರಪಣಿಗೆ ಸಜ್ಜಾಗಲು ಭಾರತಕ್ಕೆ ಸಹಾಯ ಮಾಡುವುದಾಗಿದೆ. ಈ ಮೂಲಕ ರಫ್ತು ವಹಿವಾಟು ಉತ್ತಮಗೊಳಿಸುವುದಾಗಿದೆ. ಕಚ್ಚಾ ವಸ್ತುಗಳ ಸುಲಭ ಲಭ್ಯತೆ ಮತ್ತು ಮೌಲ್ಯವರ್ಧಿತ ಉತ್ಪನ್ನಗಳ ರಫ್ತಿಗೆ ಈಗ ಒತ್ತು ನೀಡಬೇಕಿದೆ.

178. ಈ ನಿಟ್ಟಿನಲ್ಲಿ ನಾವು ಕಳೆದ ವರ್ಷ ಸೀಮಾಸುಂಕದ ಸ್ವರೂಪವನ್ನು ಕೂಲಂಕಷವಾಗಿ ಪರಿಶೀಲಿಸಲು ಪ್ರಾರಂಭಿಸಿದ್ದೇವೆ. ಹಳೆಯದಾದ 80 ವಿನಾಯಿತಿಗಳನ್ನು ರದ್ದುಗೊಳಿಸಿದ್ದೇವೆ. ನಾನು ಈ ವರ್ಷ 400 ಹಳೆಯ ವಿನಾಯಿತಿಗಳನ್ನು ರದ್ದು ಮಾಡುತ್ತಿದ್ದೇನೆ. 2021 ಅಕ್ಟೋಬರ್ 1ರಿಂದ ಪರಿಷ್ಕೃತ ಸೀಮಾಸುಂಕ ಸ್ವರೂಪ ಜಾರಿಗೆ ಬರಲಿದೆ.

**ಎಲೆಕ್ಟ್ರಾನಿಕ್ ಮತ್ತು ಮೊಬೈಲ್ ಫೋನ್ ಇಂಡಸ್ಟ್ರಿ**

179. ದೇಶಿಯ ವಿದ್ಯುನ್ಮಾನ ಸರಕುಗಳ ತಯಾರಿಕೆ ತ್ವರಿತವಾಗಿ ಬೆಳವಣಿಗೆ ಕಾಣುತ್ತಿದೆ. ನಾವೀಗ ಮೊಬೈಲ್ ಫೋನ್'ಗಳು ಮತ್ತು ಚಾರ್ಜರ್'ಗಳನ್ನು ರಫ್ತು ಮಾಡುತ್ತಿದ್ದೇವೆ. ದೇಶೀಯ ಉತ್ಪನ್ನಗಳಿಗೆ ಹೆಚ್ಚಿನ ಮೌಲ್ಯ ಸೇರ್ಪಡೆಗಾಗಿ, ನಾವು ಚಾರ್ಜರ್'ಗಳ ಬಿಡಿಭಾಗಗಳು ಮತ್ತು ಮೊಬೈಲ್ ಫೋನ್ ಬಿಡಿಭಾಗಗಳಿಗೆ ನೀಡುತ್ತಿದ್ದ ಕೆಲವೊಂದು ವಿನಾಯಿತಿಗಳನ್ನು ಹಿಂಪಡೆದಿದ್ದೇವೆ.

**ಕಬ್ಬಿಣ ಮತ್ತು ಉಕ್ಕು**

180. ಇತ್ತೀಚೆಗೆ ಕಬ್ಬಿಣ ಮತ್ತು ಉಕ್ಕಿನ ದರ ತೀವ್ರ ಏರಿಕೆ ಕಂಡಿರುವುದು ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳ ಮೇಲೆ ಭಾರಿ ಹೊಡೆತ ನೀಡಿದೆ. ಆದ್ದರಿಂದ ನಾವು ಏಕರೂಪವಾಗಿ ಸೀಮಾಸುಂಕ ದರವನ್ನು ಶೇಕಡ 7.5ಕ್ಕೆ ಇಳಿಕೆ ಮಾಡಿದ್ದೇವೆ. ಅಲ್ಲದೆ, ಉಕ್ಕಿನ ರದ್ದಿಗೆ (ಚಿಂದಿ) 2022 ಮಾರ್ಚ್ 31ರ ವರೆಗೆ ಸುಂಕ ವಿನಾಯಿತಿ ನೀಡುತ್ತಿದ್ದೇನೆ. ಜತೆಗೆ, ತಾಮ್ರದ ರದ್ದಿನ ಸುಂಕವನ್ನು 5%ನಿಂದ 2.5%ಗೆ ಇಳಿಸಲಾಗಿದೆ.

**ಜವಳಿ**

181. ಜವಳಿ ವಲಯವು ಅಪಾರ ಉದ್ಯೋಗಗಳನ್ನು ಸೃಷ್ಟಿಸುವ ಜತೆಗೆ, ದೇಶದ ಅರ್ಥ ವ್ಯವಸ್ಥೆಯ ಪ್ರಗತಿಗೆ ಮಹತ್ವದ ಕೊಡುಗೆ ನೀಡುತ್ತಿದೆ. ಈ ನಿಟ್ಟಿನಲ್ಲಿ ಜವಳಿ ಕಚ್ಚಾ ವಸ್ತುಗಳಿಂದ ಹಿಡಿದು ಮಾನವ ನಿರ್ಮಿತ ಜವಳಿಗಳ ಸುಂಕಗಳನ್ನು ತರ್ಕಬದ್ಧಗೊಳಿಸುವ ಅಗತ್ಯವಿದೆ. ಪಾಲಿಸ್ಟರ್'ಗೆ ತಕ್ಕಂತೆ ನೈಲಾನ್ ಚಿಪ್ಸ್, ಫೈಬರ್ ಸುಂಕ ದರವನ್ನು ಏಕರೂಪವಾಗಿ 5%ಗೆ ತಗ್ಗಿಸಿದ್ದೇವೆ.

**ರಾಸಾಯನಿಕಗಳು**

182. ದೇಶೀಯ ಉತ್ಪನ್ನಗಳ ಮೌಲ್ಯವರ್ಧನೆ ಉತ್ತೇಜಿಸಲು ಮತ್ತು ವಿಲೋಮಗಳನ್ನು ತೆಗೆದುಹಾಕಲು ನಾವು ರಾಸಾಯನಿಕಗಳ ಮೇಲಿನ ಕಸ್ಟಮ್ಸ್ ಸುಂಕ ದರವನ್ನು ಮಾಪನಾಂಕ ಮಾಡಿದ್ದೇವೆ. ನಾಪ್ತ ಸೀಮಾಸುಂಕವನ್ನು 2.5%ಗೆ ಇಳಿಸಲಾಗಿದೆ.

**ಚಿನ್ನ ಮತ್ತು ಬೆಳ್ಳಿ**

183. ಚಿನ್ನ ಮತ್ತು ಬೆಳ್ಳಿಗೆ ಪ್ರಸ್ತುತ 12.5% ಸೀಮಾಸುಂಕ ವಿಧಿಸಲಾಗುತ್ತಿದೆ. 2019 ಜುಲೈನಲ್ಲಿ ಇದ್ದ 10% ದರವನ್ನು ಹೆಚ್ಚಿಸಲಾಗಿದೆ. ಅತ್ಯಮೂಲ್ಯ ಲೋಹಗಳ ಬೆಲೆ ಈಗ ತೀವ್ರ ಏರಿಕೆ ಕಂಡಿರುವುದರಿಂದ, ಮೊದಲಿನ ದರದ ಸಮೀಪಕ್ಕೆ ತರಲು ಸೀಮಾ ಸುಂಕ ದರವನ್ನು ತರ್ಕಬದ್ಧಗೊಳಿಸಲಾಗುತ್ತಿದೆ.

**ನವೀಕರಿಸಬಹುದಾದ ಇಂಧನ**

184. ಸೌರಶಕ್ತಿ ಭಾರತಕ್ಕೆ ಅತ್ಯಂತ ಭರವಸೆ ಮೂಡಿಸಿರುವ ಇಂಧನ ಮೂಲವಾಗಿದೆ ಎಂಬುದನ್ನು ನಾನು ಈಗಾಗಲೇ ಪ್ರಸ್ತಾಪಿಸಿದ್ದೇನೆ. ದೇಶೀಯ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ನಿಟ್ಟಿನಲ್ಲಿ ಹಂತ ಹಂತವಾಗಿ ಸೌರಶಕ್ತಿ ಕೋಶಗಳು ಮತ್ತು ಪ್ಯಾನಲ್'ಗಳ ಉತ್ಪಾದನೆ ಯೋಜನೆಗಳನ್ನು ಪ್ರಕಟಿಸಲಾಗುವುದು. ಪ್ರಸ್ತುತ, ದೇಶಿಯ ಉತ್ಪಾದನೆ ಹೆಚ್ಚಿಸಲು ಸೌರಶಕ್ತಿ ಇನ್ವರ್ಟರ್ ಮೇಲಿನ ಸುಂಕವನ್ನು 5%ನಿಂದ 20%ಗೆ ಹಾಗೂ ಸೌರಶಕ್ತಿ ಲ್ಯಾಂಟರ್ನ್ ಮೇಲಿನ ಸುಂಕವನ್ನು 5%ನಿಂದ 15%ಗೆ ಹೆಚ್ಚಿಸಿದ್ದೇನೆ.

**ಬೃಹತ್ ಬಂಡವಾಳ ಉಪಕರಣಗಳು ಮತ್ತು ಆಟೊ ಬಿಡಿಭಾಗಗಳು**

185. ದೇಶಿಯವಾಗಿ ಬೃಹತ್ ಬಂಡವಾಳ ಉಪಕರಣಗಳನ್ನು ಉತ್ಪಾದಿಸಲು ಅಪಾರ ಸಾಮರ್ಥ್ಯವಿದೆ. ಅವುಗಳ ದರ ಸ್ವರೂಪವನ್ನು ಸಮಗ್ರವಾಗಿ ಪರಿಶೀಲಿಸಲಾಗುವುದು. ಆದಾಗ್ಯೂ ನಾವು ನಿರ್ದಿಷ್ಟ ಸರಕುಗಳ ಸುಂಕವನ್ನು ತಕ್ಷಣವೇ ಪರಿಷ್ಕರಿಸಿದ್ದೀವಿ. ಸುರಂಗ ಕೊರೆಯುವ ಭಾರಿ ಯಂತ್ರಗಳಿಗೆ ನೀಡಲಾಗಿದ್ದ ವಿನಾಯಿತಿಯನ್ನು ಹಿಂಪಡೆದು, 7.5% ಸೀಮಾಸುಂಕ ವಿಧಿಸಲಾಗಿದೆ. ಅದರ ಬಿಡಿಭಾಗಗಳಿಗೆ 2.5% ಸುಂಕ ಹಾಕಲಾಗಿದೆ. ನಿರ್ದಿಷ್ಟ ಆಟೋ ಬಿಡಿಭಾಗಗಳ ಸುಂಕ ದರವನ್ನು 15%ಗೆ ಹೆಚ್ಚಿಸಿದ್ದೇವೆ.

**ಎಂಎಸ್ಎಂಇ ಉತ್ಪನ್ನಗಳು**

186. ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆ(ಎಂಎಸ್ಎಂಇ)ಗಳಿಗೆ ಪ್ರಯೋಜನ ಒದಗಿಸಲು ನಿರ್ದಿಷ್ಟ ಬದಲಾವಣೆಗಳನ್ನು ತಂದಿದ್ದೇವೆ. ಉಕ್ಕಿನ ಸ್ಕ್ರೂಗಳು ಮತ್ತು ಪ್ಲಾಸ್ಟಿಕ್ ಬಿಲ್ಡರ್ ವೇರ್'ಗಳ ಮೇಲಿನ ಸುಂಕವನ್ನು 5%ನಿಂದ 15%ಗೆ ಹೆಚ್ಚಿಸಲಾಗಿದೆ.

ಸಿದ್ಧ ಉಡುಪುಗಳು, ಚರ್ಮೋತ್ಪನ್ನಗಳು ಮತ್ತು ಕರಕುಶಲ ವಸ್ತುಗಳ ಆಮದಿಗೆ ನೀಡಲಾಗಿದ್ದ ವಿನಾಯಿತಿಗಳನ್ನು ಹಿಂಪಡೆಯಲಾಗಿದೆ.

**ಕೃಷಿ ಉತ್ಪನ್ನಗಳು**

187. ರೈತರಿಗೆ ಪ್ರಯೋಜನ ಒದಗಿಸುವ ನಿಟ್ಟಿನಲ್ಲಿ, ಹತ್ತಿಗೆ 10% ಸೀಮಾಸುಂಕ ವಿಧಿಸಲಾಗಿದೆ. ಕಚ್ಚಾ ರೇಷ್ಮೆ ಮತ್ತು ರೇಷ್ಮೆ ನೂಲಿಗೆ ಸುಂಕ ದರವನ್ನು 10ರಿಂದ 15%ಗೆ ಹೆಚ್ಚಿಸಲಾಗಿದೆ. ಸ್ವಾಭಾವಿಕವಲ್ಲದ ಈಥೈಲ್ ಆಲ್ಕೋಹಾಲ್'ಗೆ ನೀಡಲಾಗುತ್ತಿದ್ದ ರಿಯಾಯಿತಿ ಹಿಂಪಡೆಯಲಾಗಿದೆ. ಮೆಕ್ಕೆ ಜೋಳದ ಹೊಟ್ಟು, ಅಕ್ಕಿ ಹೊಟ್ಟು, ಎಣ್ಣೆ ಕೇಕ್, ಮತ್ತು ಪಶು ಆಹಾರ ಸಂಯೋಜಕಗಳಿಗೆ ಏಕರೂಪವಾಗಿ 15% ದರ ವಿಧಿಸಲು ಮಾಪನಾಂಕ ಮಾಡಲಾಗುತ್ತಿದೆ.

188. ಕೃಷಿ ಮೂಲಸೌಕರ್ಯವನ್ನು ತುರ್ತಾಗಿ ಅಭಿವೃದ್ಧಿಪಡಿಸುವ ಅಗತ್ಯವಿದೆ. ಹೀಗೆ ಮಾಡುವುದರಿಂದ ನಾವು ಹೆಚ್ಚಿನ ಕೃಷಿ ಉತ್ಪಾದನೆ ಮಾಡಲು ಸಾಧ್ಯವಿದೆ. ಜತೆಗೆ, ಕೃಷಿ ಉತ್ಪನ್ನಗಳನ್ನುದಕ್ಷತೆಯಿಂದ ಸಂರಕ್ಷಿಸಿಮ ಸಂಸ್ಕರಿಸಬಹುದು. ಇದರಿಂದ ನಮ್ಮ ರೈತರಿಗೆ ಹೆಚ್ಚಿನ ಆದಾಯ ಸಿಗಲಿದೆ. ಕೃಷಿ ಮೂಲಸೌಕರ್ಯ ಅಭಿವೃದ್ಧಿಗೆ ಸಂಪನ್ಮೂಲ ಕ್ರೋಡೀಕರಿಸಲು ನಾನು ಹಲವಾರು ಸಣ್ಣ ಕೃಷಿ ಉತ್ಪನ್ನಗಳ ಮೇಲೆ ಕೃಷಿ ಮೂಲಸೌಕರ್ಯ ಮತ್ತು ಅಭಿವೃದ್ಧಿ ಸೆಸ್ ವಿಧಿಸುತ್ತಿದ್ದೇನೆ. ಆದರೆ, ಈ ಕಿರುತೆರಿಗೆ ಗ್ರಾಹಕರಿಗೆ ಹೊರೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

**ಕಾರ್ಯವಿಧಾನಗಳ ತರ್ಕಬದ್ಧಗೊಳಿಸುವಿಕೆ ಮತ್ತು ಅನುಸರಣೆಗಳ ಸರಳೀಕರಣ**

189. ನ್ಯಾಯಾಂಗ ಅರ್ಜಿಗಳ ವಿಚಾರದಲ್ಲಿ ಎಡಿಡಿ ಮತ್ತು ಸಿವಿಡಿ ಸುಂಕ(ಹೆಚ್ಚುವರಿ ಸುಂಕಗಳು)ಗಳಿಗೆ ಸಂಬಂಧಿಸಿದ ನಿಬಂಧನೆಗಳಿಗೆ ಕೆಲವು ಬದಲಾವಣೆಗಳನ್ನು ತಂದಿದ್ದೇವೆ. ಕಸ್ಟಮ್ಸ್ ತನಿಖೆಯನ್ನು ಪೂರ್ಣಗೊಳಿಸಲು, ನಾವು ನಿರ್ದಿಷ್ಟ ಸಮಯವನ್ನು ನಿಗದಿಪಡಿಸಿದ್ದೇವೆ. 2020ರಲ್ಲಿ ತುರಂತ್ ಕಸ್ಟಮ್ಸ್ ಉಪಕ್ರಮದಡಿ, ನಾವು ಭೌತಿಕ ಸಂಪರ್ಕರಹಿತ, ಪತ್ರರಹಿತ ಮತ್ತು ಸಂಪರ್ಕರಹಿತ ಕ್ರಮಗಳನ್ನು ಅನಾವರಣಗೊಳಿಸಿದ್ದೆವು. 2020 ಸೆಪ್ಟೆಂಬರ್'ನಿಂದ ಜಾರಿಗೆ ಬರುವಂತೆ, ನಾವು ಮೂಲಸ್ಥಳದ ನಿಯಮಾವಳಿಗಳ ಆಡಳಿತಕ್ಕೆ ಹೊಸ ಕಾರ್ಯವಿಧಾನಗಳನ್ನು ಜಾರಿಗೆ ತಂದಿದ್ದೇವೆ. ಮುಕ್ತ ವ್ಯಾಪಾರ ಒಪ್ಪಂದದ ದುರ್ಬಳಕೆ ತಡೆಯಲು ಇದು ನೆರವಾಗಲಿದೆ.

190. ನೇರ ಮತ್ತು ಪರೋಕ್ಷ ತೆರಿಗೆ ಬದಲಾವಣೆಗಳ ನಿರ್ದಿಷ್ಟ ವಿವರಗಳನ್ನು ನನ್ನ ಭಾಷಣದ ಅನುಬಂಧದಲ್ಲಿ ಸೇರ್ಪಡೆ ಮಾಡಲಾಗಿದೆ.

191. ಸ್ಪೀಕರ್ ಸರ್, ಈ ಎಲ್ಲಾ ಮಾತುಗಳ ಮೂಲಕ ನಾನು ಬಜೆಟ್ ಅನ್ನು ಈ ಗೌರವಯುತ ಸದನಕ್ಕೆ ಸಮರ್ಪಿಸುತ್ತಿದ್ದೇನೆ.

**ಬಜೆಟ್ ಭಾಷಣದ ಭಾಗ ಎ ಅನುಬಂಧ**

**ಅನುಬಂಧ – 1**

ಆರೋಗ್ಯ ಮತ್ತು ಯೋಗಕ್ಷೇಮ - ವೆಚ್ಚ

*ಕೋಟಿ ರೂ.ಗಳಲ್ಲಿ*

| ಸಚಿವಾಲಯ/ ಇಲಾಖೆಗಳು | ವಾಸ್ತವಿಕ 2019-20 | ಬಿಇ 2020-21 | ಬಿಇ 2021-22 |
|---|---|---|---|
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ | 62,397 | 65,012 | 71,269 |
| ಆರೋಗ್ಯ ಸಂಶೋಧನಾ ನಿರ್ದೇಶನಾಲಯ | 1,934 | 2,100 | 2,663 |
| ಆಯುಷ್ ಸಚಿವಾಲಯ | 1,784 | 2,122 | 2,970 |
| ಕೋವಿಡ್ ಸಂಬಂಧಿತ ವಿಶೇಷ ನಿಬಂಧನೆಗಳು | | | |
| *ಲಸಿಕೆ* | | | 35,000 |
| ಕುಡಿಯುವ ನೀರು ಮತ್ತು ನೈರ್ಮಲೀಕರಣ ನಿರ್ದೇಶನಾಲಂ | 18,264 | 21,518 | 60,030 |
| ಪೋಷಣೆ | 1,880 | 3,700 | 2,700 |
| ನೀರು ಮತ್ತು ನೈರ್ಮಲ್ಯಕ್ಕೆ ಹಣಕಾಸು ಆಯೋಗದ ಅನುದಾ | | | 36,022 |
| ಆರೋಗ್ಯಕ್ಕೆ ಹಣಕಾಸು ಆಯೋಗದ ಅನುದಾನ | | | 13,192 |
| **ಒಟ್ಟು** | **86,259** | **94,452** | **2,23,846** |

**ಅನುಬಂಧ - II**

**ಮಹತ್ವಾಕಾಂಕ್ಷಿ ಯೋಜನೆಗಳು: ರಸ್ತೆಗಳು ಮತ್ತು ಹೆದ್ದಾರಿಗಳು**

**ಪ್ರಮುಖ ಎಕ್ಸ್’ಪ್ರೆಸ್ ಹೆದ್ದಾರಿಗಳು/ ಕಾರಿಡಾರ್’ಗಳು**

- ದೆಹಲಿ-ಮುಂಬೈ ಎಕ್ಸ್’ಪ್ರೆಸ್’ವೇ: ಬಾಕಿ ಉಳಿದಿರುವ 260 ಕಿ.ಮೀ. ರಸ್ತೆ ಅಭಿವೃದ್ಧಿಗೆ 31.03.2021ರೊಳಗೆ ಕಾಮಗಾರಿ ನೀಡಲಾಗುವುದು.
- ಬೆಂಗಳೂರು-ಚೆನ್ನೈ ಎಕ್ಸ್’ಪ್ರೆಸ್’ವೇ: 278 ಕಿಮೀ ಉದ್ದದ ರಸ್ತೆ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಗುತ್ತಿಗೆಗೆ ಕ್ರಮ, ನಿರ್ಮಾಣ ಕಾರ್ಯ 2021-22ರಲ್ಲಿ ಆರಂಭ
- ದೆಹಲಿ-ಡೆಹ್ರಾಡೂನ್ ಆರ್ಥಿಕ ಕಾರಿಡಾರ್: 210 ಕಿಮೀ ಕಾರಿಡಾರ್ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಗುತ್ತಿಗೆಗೆ ಕ್ರಮ, 2021-22ರಲ್ಲಿ ನಿರ್ಮಾಣ ಆರಂಭ
- ಕಾನ್ಪುರ-ಲಖನೌ ಎಕ್ಸ್’ಪ್ರೆಸ್’ವೇ: 63 ಕಿಮೀ ಉದ್ದದ ರಸ್ತೆಯು ಎನ್ಎಚ್ 27ಕ್ಕೆ ಬದಲಿ ಮಾರ್ಗ ಕಲ್ಪಿಸಲಿದೆ, 2021-2ರಲ್ಲಿ ಗುತ್ತಿಗೆ ನೀಡಲು ಕ್ರಮ.
- ಚೆನ್ನೈ-ಸೇಲಂ ಕಾರಿಡಾರ್: 277 ಕಿಮೀ ಎಕ್ಸ್’ಪ್ರೆಸ್’ವೇ ನಿರ್ಮಾಣ 2021-22ರಲ್ಲಿ ಆರಂಭ.
- ರಾಯ್’ಪುರ್-ವಿಶಾಖಪಟ್ಟಣಂ: 464 ಕಿಮೀ ಉದ್ದದ ರಸ್ತೆ ಛತ್ತೀಸ್’ಗಢ, ಒಡಿಶಾ ಮತ್ತು ಆಂಧ್ರ ಪ್ರದೇಶದ ಉತ್ತರ ಭಾಗದ ಮೂಲಕ ಹಾದು ಹೋಗಲಿದೆ. ಪ್ರಸಕ್ತ ಸಾಲಿನಲ್ಲಿ ಗುತ್ತಿಗೆ ನೀಡಲಿದ್ದು, 2021-22ರಲ್ಲಿ ನಿರ್ಮಾಣ ಆರಂಭ.
- ಅಮೃತಸರ-ಜಾಮ್’ನಗರ್: 2021-22ರಲ್ಲಿ ನಿರ್ಮಾಣ ಆರಂಭ
- ದೆಹಲಿ-ಕತ್ರಾ:2021-22ರಲ್ಲಿ ನಿರ್ಮಾಣ ಆರಂಭ

- ಸುಧಾರಿತ ಸಂಚಾರ ನಿರ್ವಹಣೆ ವ್ಯವಸ್ಥೆಯ ಜತೆಗೆ ವೇಗದ ರೆಡಾರ್'ಗಳು, ವೇರಿಯಬಲ್ ಸಂದೇಶ ಸೈನ್ ಬೋರ್ಡ್'ಗಳು, ಜಿಪಿಎಸ್ ಅಳವಡಿಕೆಯ ರೆಕವರಿ ವಾಹನಗಳನ್ನು ಎಲ್ಲಾ ಹೊಸ ಚತುಷ್ಪಥ ಮತ್ತು ಆರು ಪಥಗಳ ಹೆದ್ದಾರಿಗಳಲ್ಲಿ ಸ್ಥಾಪಿಸಲಾಗುವುದು.

**ಅನುಬಂಧ - III**

**ಬಂಡವಾಳ ಹಿಂತೆಗೆತ/ ಕಾರ್ಯತಂತ್ರದ ಬಂಡವಾಳ ಹಿಂತೆಗೆತ ನೀತಿಯ ಮುಖ್ಯಾಂಶಗಳು**

**ಉದ್ದೇಶ**

ಎ) ಹಣಕಾಸು ಸಂಸ್ಥೆಗಳು ಸೇರಿದಂತೆ ಕೇಂದ್ರ ಸರ್ಕಾರದ ಸಾರ್ವಜನಿಕ ವಲಯದ ಉದ್ಯಮಗಳ ಉಪಸ್ಥಿತಿಯನ್ನು ಕಡಿಮೆ ಮಾಡುವುದು ಮತ್ತು ಖಾಸಗಿ ವಲಯಕ್ಕೆ ಹೊಸ ಹೂಡಿಕೆ ಸ್ಥಳವನ್ನು ಸೃಷ್ಟಿಸುವುದು.

ಬಿ) ಬಂಡವಾಳ ಹಿಂತೆಗೆತದ ನಂತರ, ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳ (ಸಿಪಿಎಸ್‌ಇ)/ ಹಣಕಾಸು ಸಂಸ್ಥೆಗಳ ಆರ್ಥಿಕ ಬೆಳವಣಿಗೆಯು ಖಾಸಗಿ ಬಂಡವಾಳ, ತಂತ್ರಜ್ಞಾನ ಮತ್ತು ಉತ್ತಮ ನಿರ್ವಹಣಾ ಅಭ್ಯಾಸಗಳ ಮೂಲಕ ಇರುತ್ತದೆ. ಇದು ಆರ್ಥಿಕ ಬೆಳವಣಿಗೆ ಮತ್ತು ಹೊಸ ಉದ್ಯೋಗಗಳಿಗೆ ಸಹಕಾರಿಯಾಗಲಿದೆ.

ಸಿ) ಬಂಡವಾಳ ಹಿಂತೆಗೆತದ ಹಣವು ಸರ್ಕಾರದ ವಿವಿಧ ಸಾಮಾಜಿಕ ವಲಯ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣಕಾಸನ್ನು ಒದಗಿಸುತ್ತದೆ.

**ಯೋಜನೆಯ ಲಕ್ಷಣಗಳು :**

ಎ) ಪಾಲಿಸಿಯು ಅಸ್ತಿತ್ವದಲ್ಲಿರುವ ಸಿಪಿಎಸ್‌ಇಗಳು, ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಸಾರ್ವಜನಿಕ ವಲಯದ ವಿಮಾ ಕಂಪನಿಗಳನ್ನು ಒಳಗೊಂಡಿದೆ.

ಬಿ) ವಿವಿಧ ಕ್ಷೇತ್ರಗಳನ್ನು ಕಾರ್ಯತಂತ್ರ ಮತ್ತು ಕಾರ್ಯತಂತ್ರ ರಹಿತ ಕ್ಷೇತ್ರಗಳಾಗಿ ವರ್ಗೀಕರಿಸಲಾಗುವುದು

ಸಿ) ವರ್ಗೀಕರಿಸಿದ ಕಾರ್ಯತಂತ್ರದ ಕ್ಷೇತ್ರಗಳು:

i. ಪರಮಾಣು ಶಕ್ತಿ, ಬಾಹ್ಯಾಕಾಶ ಮತ್ತು ರಕ್ಷಣೆ
ii. ಸಾರಿಗೆ ಮತ್ತು ದೂರಸಂಪರ್ಕ
iii. ವಿದ್ಯುತ್, ಪೆಟ್ರೋಲಿಯಂ, ಕಲ್ಲಿದ್ದಲು ಮತ್ತು ಇತರ ಖನಿಜಗಳು

ಬ್ಯಾಂಕಿಂಗ್, ವಿಮೆ ಮತ್ತು ಹಣಕಾಸು ಸೇವೆಗಳು

ಡಿ) ಕಾರ್ಯತಂತ್ರದ ಕ್ಷೇತ್ರಗಳಲ್ಲಿ, ಸಾರ್ವಜನಿಕ ವಲಯದ ಉದ್ಯಮಗಳ ಕನಿಷ್ಠ ಉಪಸ್ಥಿತಿ ಇರುತ್ತದೆ. ಕಾರ್ಯತಂತ್ರದ ವಲಯದಲ್ಲಿ ಉಳಿದ ಸಿಪಿಎಸ್‌ಇಗಳನ್ನು ಖಾಸಗೀಕರಣಗೊಳಿಸಲಾಗುತ್ತದೆ ಅಥವಾ ವಿಲೀನಗೊಳಿಸಲಾಗುತ್ತದೆ ಅಥವಾ ಇತರ ಸಿಪಿಎಸ್‌ಇಗಳೊಂದಿಗೆ ಅಂಗಸಂಸ್ಥೆಯನ್ನಾಗಿ ಮಾಡಲಾಗುತ್ತದೆ ಅಥವಾ ಮುಚ್ಚಲಾಗುತ್ತದೆ.

ಇ) ಕಾರ್ಯತಂತ್ರರಹಿತ ಕ್ಷೇತ್ರಗಳಲ್ಲಿ, ಸಿಪಿಎಸ್‌ಇಗಳನ್ನು ಖಾಸಗೀಕರಣಗೊಳಿಸಲಾಗುತ್ತದೆ, ಇಲ್ಲದಿದ್ದರೆ ಮುಚ್ಚಲಾಗುತ್ತದೆ.

**ಅನುಬಂಧ-IV**

**ಕೃಷಿ ಸರಕುಗಳ ಎಂಎಸ್ ಪಿ ಖರೀದಿ**

| ವರ್ಷ | ಗೋದಿ | | ಭತ್ತ | | ಹತ್ತಿ | | ಸೆಣಬು | | ಬೇಳೆ ಕಾಳು ಗಳು | ಎಣ್ಣೆಬೀಜಗಳು ಮತ್ತು ಕೊಬ್ಬರಿ |
|---|---|---|---|---|---|---|---|---|---|---|
| | ಎಂ ಎಸ್ ಪಿ ಮೌಲ್ಯ (ಕೋಟಿ) | ಫಲಾನುಭವಿ ರೈತರ ಸಂಖ್ಯೆ (ಲಕ್ಷ) | ಎಂ ಎಸ್ ಪಿ ಮೌಲ್ಯ (ಕೋಟಿ) | ಫಲಾನುಭವಿ ರೈತರ ಸಂಖ್ಯೆ (ಲಕ್ಷ) | ಎಂ ಎಸ್ ಪಿ ಮೌಲ್ಯ (ಕೋಟಿ) | ಫಲಾನುಭವಿ ರೈತರ ಸಂಖ್ಯೆ (ಲಕ್ಷ) | ಎಂ ಎಸ್ ಪಿ ಮೌಲ್ಯ (ಕೋಟಿ) | ಫಲಾನುಭವಿ ರೈತರ ಸಂಖ್ಯೆ (ಲಕ್ಷ) | ಎಂ ಎಸ್ ಪಿ ಮೌಲ್ಯ (ಕೋಟಿ) | ಫಲಾನುಭವಿ ರೈತರ ಸಂಖ್ಯೆ (ಲಕ್ಷ) |
| 2010-11 | 24764.3 | NA | 52573.04 | NA | - | - | - | - | 1.75 | 149.03 |
| 2011-12 | 33152 | NA | 58084.48 | NA | 14 | 0.02 | 47.7 | 0.46 | 0.005 | 1.52 |
| 2012-13 | 49020.18 | NA | 65039.28 | NA | 4797 | 7.3 | 140.19 | 1.15 | 407.22 | 394.06 |
| 2013-14 | 33874.20 | NA | 63927.65 | NA | 90 | 0.14 | 53.98. | 0.5 | 235.86 | 1626.39 |
| 2014-15 | 39232.20 | NA | 66948.00 | NA | 18506 | 29.5 | 6.56 | 0.06 | 1128.93 | 45.52 |
| 2015-16 | 40727.60 | NA | 73981.90 | 73.08 | 1825 | 1.91 | - | - | - | 15.90 |
| 2016-17 | 35015.53 | 20.47 | 85802.73 | 76.85 | - | - | 28.79 | 0.17 | 1039.39. | 946.71 |
| 2017-18 | 50089.00 | 31.87 | 90397.86 | 72.31 | 898 | 0.88 | 172.16 | 1.22 | 8566.13 | 5072.73 |
| 2018-19 | 6204.33 | 38.77 | 116839.47 | 96.94 | 2976 | 2.38 | 66.79 | 0.26 | 20145.60 | 7091.11 |
| 2019-20 | 62802.88 | 35.57 | 141928.08 | 124.59 | 28500 | 21.5 | 56.24 | 0.55 | 8284.45 | 8305.06 |
| 2020-21 | 75059.60 | 43.36 | 172752** | 154** | 25974* | 18.26* | 2.99 | 0.01 | 10530.20 | 3647.11 |
| *upto27.01.21;**Estimatedvalue | | | | | | | | | | |

*NA= ಲಭ್ಯವಿಲ್ಲ*

**ಅನುಬಂಧ - V**

**ನೂತನ ಶಿಕ್ಷಣ ನೀತಿ (ಎನ್ಇಪಿ)ಯ ಶಿಕ್ಷಣದ ಪ್ರಾರಂಭದ ಉಪಕ್ರಮಗಳು**

- ಎಲ್ಲಾ ಶಾಲಾ ಶಿಕ್ಷಕರಿಗೆ ರಾಷ್ಟ್ರೀಯ ವೃತ್ತಿಪರ ಮಾನದಂಡಗಳ ರೂಪದಲ್ಲಿ ಗುಣಮಟ್ಟವನ್ನು (ಎನ್‌ಪಿಎಸ್‌ಟಿ) ಅಭಿವೃದ್ಧಿಪಡಿಸಲಾಗುತ್ತದೆ ಇದು ಶಿಕ್ಷಕರ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಮತ್ತು ದೇಶದ ಸರ್ಕಾರಿ ಮತ್ತು ಖಾಸಗಿ ಶಾಲಾ ವ್ಯವಸ್ಥೆಯ ಎಲ್ಲಾ 92 ಲಕ್ಷ ಶಿಕ್ಷಕರು ಅನುಸರಿಸಲಿದ್ದಾರೆ.

- ಆಟಿಕೆಗಳು ಮನರಂಜನೆ ಮತ್ತು ಕಲಿಕೆಯ ಅಭಿವ್ಯಕ್ತಿಯಾಗಿದೆ. ಒಂದು ವಿಶಿಷ್ಟವಾದ ಸ್ಥಳೀಯ ಆಟಿಕೆ ಆಧಾರಿತ ಕಲಿಕೆಯಿಂದ - ಎಲ್ಲಾ ಹಂತದ ಶಾಲಾ ಶಿಕ್ಷಣಕ್ಕೆ ಶಿಕ್ಷಣವನ್ನು ಅಭಿವೃದ್ಧಿಪಡಿಸಲಾಗುತ್ತದೆ. ಇದು ಕಲಿಯುವಿಕೆಯನ್ನು ನೀರಸ ಕಲಿಕೆಯನ್ನು ಆಕರ್ಷಕವಾಗಿ ಮತ್ತು ಸಂತೋಷದಾಯಕ ಅನುಭವಕ್ಕೆ ಪರಿವರ್ತಿಸುತ್ತದೆ.

- ಡಿಜಿಟಲ್ ಫಸ್ಟ್ ಮೈಂಡ್‌ಸೆಟ್‌ನ ಸನ್ನಿವೇಶದಲ್ಲಿ ರಾಷ್ಟ್ರೀಯ ಡಿಜಿಟಲ್ ಎಜುಕೇಷನಲ್ ಆರ್ಕಿಟೆಕ್ಚರ್ (ಎನ್‌ಡಿಇಎಆರ್) ಅನ್ನು ಸ್ಥಾಪಿಸಲಾಗುವುದು, ಅಲ್ಲಿ ಡಿಜಿಟಲ್ ಆರ್ಕಿಟೆಕ್ಚರ್ ಬೋಧನೆ ಮತ್ತು ಕಲಿಕೆಯ ಚಟುವಟಿಕೆಗಳನ್ನು ಮಾತ್ರವಲ್ಲದೆ ಶೈಕ್ಷಣಿಕ ಯೋಜನೆ, ಆಡಳಿತ ಮತ್ತು ಕೇಂದ್ರ ಮತ್ತು ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳ ಆಡಳಿತಾತ್ಮಕ ಚಟುವಟಿಕೆಗಳಿಗೆ ಸಹಕರಿಸುತ್ತದೆ. . ಇದು ಡಿಜಿಟಲ್ ಮೂಲಸೌಕರ್ಯಗಳ ಅಭಿವೃದ್ಧಿಗೆ ವೈವಿಧ್ಯಮಯ ಶಿಕ್ಷಣ ಪರಿಸರ ವ್ಯವಸ್ಥೆಯ ವಾಸ್ತುಶಿಲ್ಪವನ್ನು ಒದಗಿಸುತ್ತದೆ, ಇದು ಎಲ್ಲಾ

ಮಧ್ಯಸ್ಥಗಾರರ, ವಿಶೇಷವಾಗಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸ್ವಾಯತ್ತತೆಯನ್ನು ಖಾತ್ರಿಪಡಿಸುವ ಫೆಡರೇಟೆಡ್ ಆದರೆ ಇಂಟರ್ ಆಪರೇಬಲ್ ಸಿಸ್ಟಮ್ ಆಗಿದೆ.

- ಶ್ರವಣದೋಷವುಳ್ಳ ಮಕ್ಕಳಿಗಾಗಿ, ಸರ್ಕಾರವು ದೇಶಾದ್ಯಂತ ಭಾರತೀಯ ಸಂಕೇತ ಭಾಷೆಯ ಪ್ರಮಾಣೀಕರಣದ ಬಗ್ಗೆ ಕೆಲಸ ಮಾಡುತ್ತದೆ ಮತ್ತು ರಾಷ್ಟ್ರೀಯ ಮತ್ತು ರಾಜ್ಯ ಪಠ್ಯಕ್ರಮದ ವಸ್ತುಗಳನ್ನು ಅಭಿವೃದ್ಧಿಪಡಿಸುತ್ತದೆ.

- ಹಲವಾರು ಹಿರಿಯ ಮತ್ತು ನಿವೃತ್ತ ಶಿಕ್ಷಕರಿದ್ದಾರೆ. ವಿಷಯಗಳು, ವಿಷಯಗಳು ಮತ್ತು ಶಿಕ್ಷಣಶಾಸ್ತ್ರದ ಬಗ್ಗೆ ನಿರಂತರ ಆನ್‌ಲೈನ್ / ಆಫ್‌ಲೈನ್ ಬೆಂಬಲದ ಮೂಲಕ ಶಾಲಾ ಶಿಕ್ಷಕರು ಮತ್ತು ಶಿಕ್ಷಕರ ವೈಯಕ್ತಿಕ ಮಾರ್ಗದರ್ಶನಕ್ಕಾಗಿ ಅವರನ್ನು ಬಳಸಲಾಗುತ್ತದೆ.

- ಏಕ-ಆಯಾಮದ ನಿಯತಾಂಕಗಳಲ್ಲಿ ವಿದ್ಯಾರ್ಥಿಗಳನ್ನು ಸೋಫರ್ ಮೌಲ್ಯಮಾಪನ ಮಾಡಲಾಗಿದೆ. ಕಲಿಯುವವರ ಅರಿವಿನ ಮಟ್ಟವನ್ನು ನಿರ್ಣಯಿಸಲು ಮೌಲ್ಯಮಾಪನಗಳನ್ನು ಬಳಸುವುದರಿಂದ ಸಂಪೂರ್ಣ ಬದಲಾವಣೆಯಾಗುತ್ತದೆ ಆದರೆ ಮಗುವಿನ ಅನನ್ಯ ಸಾಮರ್ಥ್ಯ ಮತ್ತು ಸಾಮರ್ಥ್ಯವನ್ನು ಗುರುತಿಸುವ ಅವಕಾಶವಾಗಿ ಇದನ್ನು ಬಳಸಿಕೊಳ್ಳಬಹುದು. ಈ ಪರಿಣಾಮಕ್ಕಾಗಿ, ವಿದ್ಯಾರ್ಥಿಗಳಿಗೆ ಅವರ ಸಾಮರ್ಥ್ಯಗಳು, ಆಸಕ್ತಿಯ ಕ್ಷೇತ್ರಗಳು, ಅಗತ್ಯವಿರುವ ಗಮನದ ಕ್ಷೇತ್ರಗಳು ಮತ್ತು ಆ ಮೂಲಕ ವೃತ್ತಿಜೀವನದ ಅತ್ಯುತ್ತಮ ಆಯ್ಕೆಗಳನ್ನು ಮಾಡಲು ಸಹಾಯ ಮಾಡುವ ಬಗ್ಗೆ ಅಮೂಲ್ಯವಾದ ಮಾಹಿತಿಯನ್ನು ಒದಗಿಸಲು ಸಮಗ್ರ ಪ್ರಗತಿ ಕಾರ್ಡ್ ಅನ್ನು ಯೋಜಿಸಲಾಗಿದೆ.

- ಸಂಪನ್ಮೂಲಗಳನ್ನು ತಲುಪಲು ಹೆಚ್ಚಿನ ಅವಕಾಶವನ್ನು ಸಕ್ರಿಯಗೊಳಿಸಲು, ವಯಸ್ಕರ ಶಿಕ್ಷಣದ ಸಂಪೂರ್ಣ ಹರವು ಒಳಗೊಂಡ ಆನ್‌ಲೈನ್ ಮಾಡ್ಯೂಲ್‌ಗಳನ್ನು ಪರಿಚಯಿಸಲಾಗುವುದು.

- ವರ್ಷದಲ್ಲಿ, ಕೋವಿಡ್-19 ಸಾಂಕ್ರಾಮಿಕ ರೋಗದ ಹೊರತಾಗಿಯೂ, ನಾವು 30 ಲಕ್ಷಕ್ಕೂ ಹೆಚ್ಚು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಡಿಜಿಟಲ್ ರೂಪದಲ್ಲಿ ತರಬೇತಿ ನೀಡಿದ್ದೇವೆ, ಇದು ಶಿಕ್ಷಣದ ಸಂಪೂರ್ಣ ಹರವನ್ನು ಒಳಗೊಂಡಿದೆ. ಇದನ್ನು ಮುಂದುವರೆಸಿ, 2021-22ರಲ್ಲಿ, 56 ಲಕ್ಷ ಶಾಲಾ ಶಿಕ್ಷಕರಿಗೆ ನ್ಯಾಷನಲ್ ಇನಿಶಿಯೇಟಿವ್ ಫಾರ್ ಸ್ಕೂಲ್ ಹೆಡ್ಸ್ ಮತ್ತು ಟೀಚರ್ಸ್ ಫಾರ್ ಹೋಲಿಸ್ಟಿಕ್ ಅಡ್ವಾನ್ಸ್‌ಮೆಂಟ್ (NISTHA) ಮೂಲಕ ತರಬೇತಿ ನೀಡುತ್ತೇವೆ.

- ಕಳೆದ ಕೆಲವು ವರ್ಷಗಳಿಂದ ನಮ್ಮ ಪ್ರಧಾನಮಂತ್ರಿಯವರು ಪ್ರತಿವರ್ಷ ವಿದ್ಯಾರ್ಥಿಗಳೊಂದಿಗೆ ತಮ್ಮ ಬೋರ್ಡ್ ಪರೀಕ್ಷೆಗಳಿಗೆ ಮುಂಚಿತವಾಗಿ ಆತಂಕ ಮತ್ತು ಒತ್ತಡವನ್ನು ನಿವಾರಿಸಲು ಸಹಾಯ ಮಾಡುತ್ತಿದ್ದಾರೆ. ಈ ದಿಕ್ಕಿನಲ್ಲಿ, ನಾವು ಸಿಬಿಎಸ್‌ಇ ಬೋರ್ಡ್ ಪರೀಕ್ಷೆಯ ಸುಧಾರಣೆಗಳನ್ನು ಹಂತ ಹಂತವಾಗಿ 2022-23ರ ಶೈಕ್ಷಣಿಕ ವರ್ಷದಿಂದ ಜಾರಿಗೆ ತರುತ್ತೇವೆ. ಪರೀಕ್ಷೆಗಳು ರೋಟ್-ಲರ್ನಿಂಗ್‌ನಿಂದ ದೂರ ಸರಿಯುತ್ತವೆ ಮತ್ತು ಅವರ ಪರಿಕಲ್ಪನಾ ಸ್ಪಷ್ಟತೆ, ವಿಶ್ಲೇಷಣಾತ್ಮಕ ಕೌಶಲ್ಯಗಳು ಮತ್ತು ನೈಜ ಜೀವನಶೈಲಿಗೆ ಅನ್ವಯಿಸುವ ಜ್ಞಾನದ ಮೇಲೆ ಪರೀಕ್ಷಿಸಲಾಗುವುದು.

- ವಿದೇಶಿ ಉನ್ನತ ಶಿಕ್ಷಣ ಸಂಸ್ಥೆಗಳೊಂದಿಗೆ ಉನ್ನತ ಶೈಕ್ಷಣಿಕ ಸಹಯೋಗವನ್ನು ಉತ್ತೇಜಿಸಲು, ಉಭಯ ಪದವಿಗಳು, ಜಂಟಿ ಪದವಿಗಳು, ಅವಳಿ ವ್ಯವಸ್ಥೆಗಳು ಮತ್ತು ಅಂತಹ ಇತರ ಕಾರ್ಯವಿಧಾನಗಳನ್ನು ಅನುಮತಿಸಲು ನಿಯಂತ್ರಕ ಕಾರ್ಯವಿಧಾನವನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ.

## ಹೆಚ್ಚುವರಿ ಬಜೆಟ್ ಸಂಪನ್ಮೂಲಗಳ ಪಟ್ಟಿ (ಇಬಿಆರ್) (ಸರ್ಕಾರ ಸಂಪೂರ್ಣ ಸೇವೆಯ ಬಾಂಡ್‌ಗಳು, ಎನ್‌ಎಸ್‌ಎಸ್‌ಎಫ್ ಸಾಲ ಮತ್ತು ಇತರ ಸಂಪನ್ಮೂಲಗಳು)

*(ಕೋಟಿಗಳಲ್ಲಿ)*

ಭಾಗ-ಎ - ಇಬಿಆರ್ ಗಳನ್ನು ಸರ್ಕಾರಿ ಸಂಪೂರ್ಣ ಸರ್ವಿಸ್ಡ್ ಬಾಂಡ್‌ಗಳ ಮೂಲಕ ಸಜ್ಜುಗೊಳಿಸಲಾಗಿದೆ

| ಬೇಡಿಕೆ ಸಂಖ್ಯೆ | ಸಚಿವಾಲಯದ / ವಿಭಾಗದ / ಯೋಜನೆಯ ಹೆಸರು | 2016-17 | 2017-18 | 2018-19 | 2019-20 | 2020-21 | 2020-21 | 2021-22 |
|---|---|---|---|---|---|---|---|---|
| | | ವಾಸ್ತವಿಕ | ವಾಸ್ತವಿಕ | ವಾಸ್ತವಿಕ | ವಾಸ್ತವಿಕ | ಬಿ ಇ | ಆರ್ ಇ | ಬಿ ಇ |
| 24 | ಉನ್ನತ ಶಿಕ್ಷಣ ಇಲಾಖೆ | | | | | | | |
